ವಿವೇಕಪ್ರಭ

ರಾಮಕೃಷ್ಣ ಮಹಾಸಂಘದ ಕನ್ನಡ ಮಾಸಪತ್ರಿಕೆ



₹ 18

ಡಿಸೆಂಬರ್ 2023

ವಿವೇಕಪ್ರಭ

ಡಿಸೆಂಬರ್-2023
ಸಂಪುಟ 24 ಸಂಚಿಕೆ 12

ಮುಖಪುಟ : **ಪ್ರಕೃತಿಮಾತೆಯ ಮಡಿಲು**

ಬಿಡಿ ಪ್ರತಿ : ₹ 18 ವಾರ್ಷಿಕ : ₹ 200
ಮೂರು ವರ್ಷ : ₹ 500 ಐದು ವರ್ಷ : ₹ 800
ಆಜೀವ (25 ವರ್ಷ) : ₹ 4,000
ಪೋಷಕರು : ₹ 7,000 ಅಥವಾ ಹೆಚ್ಚು

ವಿದೇಶಗಳಿಗೆ : (ಏರ್‌ಮೇಲ್)
ವಾರ್ಷಿಕ : $ 30 ; ಮೂರು ವರ್ಷ: $ 90
ಐದು ವರ್ಷ $ 150 ಆಜೀವ (25 ವರ್ಷ) : $ 600
ಪೋಷಕರು : $ 800 ಅಥವಾ ಹೆಚ್ಚು

ಚಂದಾ ಹಣವನ್ನು (Sri Ramakrishna Ashrama, Viveka Prabha A/c ಹೆಸರಿಗೆ) ಎಂ.ಓ., ಡಿ.ಡಿ., ಚೆಕ್ ಅಥವಾ ನೆಫ್ಟ್ ಮೂಲಕ ಕಳುಹಿಸಬೇಕು. ಆಜೀವ ಚಂದಾದಾರರು ಮತ್ತು ಪೋಷಕರಿಗೆ ಮೈಸೂರು ಆಶ್ರಮದ ಪುಸ್ತಕಗಳ ಮೇಲೆ ಮೈಸೂರು ಆಶ್ರಮದ ಮೂಲಕ ನೇರವಾಗಿ ಕೊಂಡಾಗ ಮಾತ್ರ ಶೇ. 20ರಷ್ಟು ರಿಯಾಯಿತಿ ಕೊಡಲಾಗುವುದು. ಪೋಷಕ ಸಹಾಯ ಧನಕ್ಕೆ 80-G ಅಧಿನಿಯಮದ ಪ್ರಕಾರ ವರಮಾನ ತೆರಿಗೆ ವಿನಾಯಿತಿ ಇದೆ. ಪೋಷಕರ ಹೆಸರನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುವುದು.

ನೇರವಾಗಿ ನೆಟ್ ಬ್ಯಾಂಕಿಂಗ್ ಮೂಲಕ ಹಣ ಪಾವತಿಸಿ ಚಂದಾದಾರರಾಗಬಹುದು. ಅದಕ್ಕೆ ಅಗತ್ಯವಾದ ಮಾಹಿತಿ:
Sri Ramakrishna Ashrama, Vivekaprabha A/c, Union Bank of India, Vontikoppal Branch, V.V.Mohalla, Mysore 570 002
SB A/c No: 520101237240455,
IFSC Code: UBIN0902748.


ಹಣ ವರ್ಗಾವಣೆ ಮಾಡಿದ ಬಳಿಕ ಇ-ಮೇಲ್ ಮೂಲಕ (mysuru.vivekaprabha@rkmm.org) ನಿಮ್ಮ ಹೆಸರು, ವಿಳಾಸ, ಪಿನ್‌ಕೋಡ್, ಫೋನ್ ನಂ., ಎಷ್ಟು ವರ್ಷದ ಚಂದಾ ಇತ್ಯಾದಿ ವಿವರಗಳನ್ನು ತಿಳಿಸುವುದು ಅತ್ಯಗತ್ಯ.

ಈ ಕೆಳಗಿನ ಆಪ್‌ಗಳ ಮೂಲಕ QR Code ಅಥವಾ UPI ID 9481533505@upi ಬಳಸಿ ಪಾವತಿ ಮಾಡಬಹುದು:

ಈ ಪತ್ರಿಕೆಯ ಧ್ಯೇಯ

"ನಾವು ಪತ್ರಿಕೆಯ ಮೂಲಕ ಸಕಲ ವಿಚಾರಗಳಲ್ಲಿಯೂ ಜೀವನಪೋಷಕ ಆದರ್ಶಗಳನ್ನು ಜನರಿಗೆ ಕೊಡಬೇಕು... ವೇದ, ವೇದಾಂತಗಳ ಉಚ್ಚ ಭಾವನೆಗಳನ್ನು ಸುಲಭವಾದ ಮಾತುಗಳಲ್ಲಿ ಜನರಿಗೆ ತಿಳಿಸಿಕೊಡಬೇಕು."


— ಸ್ವಾಮಿ ವಿವೇಕಾನಂದ





ವಿಶೇಷ ಲೇಖನ





ಧಾರಾವಾಹಿ

ಸ್ಥಿರ ಶೀರ್ಷಿಕೆಗಳು




E-mail: mysuru.vivekaprabha@rkmm.org Website: www.vivekaprabha.net ಫೋನ್ : 9481533505

ರಾಮಕೃಷ್ಣ ಮಿಷನ್ ಸೇವಾಶ್ರಮ, ಕಂಖಲ್, ಹರಿದ್ವಾರ 249408

1901ರಲ್ಲಿ ಸ್ಥಾಪನೆಗೊಂಡ ಸೇವಾಶ್ರಮ ಆಸ್ಪತ್ರೆಯು ರಾಮಕೃಷ್ಣ ಮಿಷನ್, ಬೇಲೂರು ಮಠ, ಹೌರಾ ಇದರ ಒಂದು ಶಾಖಾಕೇಂದ್ರವಾಗಿದೆ

Phones: Office: 01334 244020, Mob: 94109 75929 Email: rkmkankhal@gmail.com

Website: https://kankhal.rkmm.org





ಆರ್ಥಿಕ ನೆರವಿಗಾಗಿ ಮನವಿ

- ಸ್ವಾಮಿ ವಿವೇಕಾನಂದರ ನಿರ್ದೇಶನಕ್ಕೆ ಅನುಸಾರವಾಗಿ 1901ರಲ್ಲಿ ಆರಂಭಗೊಂಡ, 190 ಹಾಸಿಗೆಗಳಿರುವ ಸೇವಾಶ್ರಮ ಆಸ್ಪತ್ರೆಯು ಸಾಧುಗಳಿಗೆ, ಬಡವರಿಗೆ ಹಾಗೂ ಸಂತ್ರಸ್ತರಿಗೆ ಉಚಿತವಾಗಿ ಅಥವಾ ರಿಯಾಯಿತಿ ದರದಲ್ಲಿ ವೈದ್ಯಕೀಯ ಸೇವೆಯನ್ನು ಸಲ್ಲಿಸುತ್ತಾ ಬಂದಿದೆ.
- ಸೇವಾಶ್ರಮವು ಪ್ರಾರಂಭವಾದಾಗಿನಿಂದ ಇಲ್ಲಿಯವರೆಗೆ 1 ಕೋಟಿಗೂ ಹೆಚ್ಚು ರೋಗಿಗಳಿಗೆ ಚಿಕಿತ್ಸೆ ನೀಡಿದೆ.
- ಆಸ್ಪತ್ರೆಯು ರಿಯಾಯಿತಿ ದರದಲ್ಲಿ ಜನಸಾಮಾನ್ಯರಿಗೆ ಸುಲಭವಾಗಿ ನೀಡಲು ಸಾಧ್ಯವಾಗುವಂತೆ ಅತಿಕಡಿಮೆ ಶುಲ್ಕವನ್ನಷ್ಟೇ ವಿಧಿಸುತ್ತಿದೆ.

ನಮ್ಮ ಸೇವಾಕಾರ್ಯಗಳನ್ನು ಮುಂದುವರಿಸಲು ನಿಮ್ಮ ಆರ್ಥಿಕ ನೆರವಿಗಾಗಿ ನಾವು ಕಳಕಳಿಯಿಂದ ವಿನಂತಿಸಿಕೊಳ್ಳುತ್ತಿದ್ದೇವೆ.

	ಚಾಲನೆಯಲ್ಲಿರುವ ಯೋಜನೆಗಳು	ವೆಚ್ಚ (ರೂ.ಗಳಲ್ಲಿ)	ವಾರ್ಷಿಕ ಫಲಾನುಭವಿಗಳ ಸಂಖ್ಯೆ
1.	ಉಚಿತ/ರಿಯಾಯಿತಿ ದರದಲ್ಲಿ ತಪಾಸಣೆ ಮತ್ತು ಚಿಕಿತ್ಸೆ – ಒಳ ಹಾಗೂ ಹೊರ ರೋಗಿಗಳಿಗೆ	2 ಕೋಟಿ/ವರ್ಷಕ್ಕೆ	40,000
2.	ಉಚಿತ ಔಷಧಿ ವಿತರಣೆ	2 ಕೋಟಿ/ವರ್ಷಕ್ಕೆ	50,000
3.	ವಿಶೇಷ ವೈದ್ಯರ ಪೂರಕ ವೇತನ	2 ಕೋಟಿ/ವರ್ಷಕ್ಕೆ	50,000
4.	ಉಚಿತ ಮಧುಮೇಹ ಔಷಧಿ	25 ಲಕ್ಷ /ವರ್ಷಕ್ಕೆ	10,000
5.	ಗೋಶಾಲೆ	25 ಲಕ್ಷ /ವರ್ಷಕ್ಕೆ	
6.	ಗ್ರಾಮೀಣ ಪ್ರದೇಶಗಳಿಗೆ ಸಂಚಾರಿ ವೈದ್ಯಕೀಯ ವಾಹನ	25 ಲಕ್ಷ /ವರ್ಷಕ್ಕೆ	30,000
7.	ಆಸ್ಪತ್ರೆಯ ಪೀಠೋಪಕರಣ ಹಾಗೂ ಸಲಕರಣೆಗಳ ನವೀಕರಣ	5 ಕೋಟಿ	
8.	ಉಚಿತ ಅಥವಾ ಸಬ್ಸಿಡಿ ದರದ ಹಾಸಿಗೆಗಳ ಪೂರೈಕೆಗೆ ದತ್ತಿ ನಿಧಿ (ದಾನಿಗಳ ಹೆಸರುಗಳನ್ನು ಫಲಕಗಳಲ್ಲಿ ಲಗತ್ತಿಸಲಾಗುವುದು)	5 ಲಕ್ಷ (ಒಂದು ಹಾಸಿಗೆಗೆ)	
9.	M. R. I. MAGNETOM Sempra ನಿಧಿ	4 ಕೋಟಿ	1,500
10.	ಕಟ್ಟಡಗಳ ನಿರ್ವಹಣೆ ಹಾಗೂ ದುರಸ್ತಿಕಾರ್ಯ	2 ಕೋಟಿ	
11.	192 Slice Cardiac CT Scanner	5 ಕೋಟಿ	

Account Name	**Ramakrishna Mission Sevashrama**
Account Number	**87322200038824**
Bank	**Canara Bank**
Bank Address	**P O. Kankhal, Dist. Haridwar-249408**
Account Type	**Savings Account**
Bank IFSC	**CNRB0018732**

ನಮ್ಮ ಖಾತೆಗೆ ಹಣವನ್ನು ವರ್ಗಾವಣೆ ಮಾಡಿದ ಬಳಿಕ ದಯವಿಟ್ಟು ನಿಮ್ಮ ಈ ವಿವರಗಳನ್ನು **rkmkankhal@gmail.com** ಈ ಇ-ಮೇಲ್ ವಿಳಾಸಕ್ಕೆ ಕಳುಹಿಸಬೇಕಾಗಿ ವಿನಂತಿ: ದಾನಿಗಳ ಹೆಸರು, ಪೂರ್ಣ ಅಂಚೆ ವಿಳಾಸ, ಯಾವ ಕಾರ್ಯಕ್ಕೆ ದಾನ ಎಂಬ ವಿವರ, ಕಳುಹಿಸಲಾದ ಮೊತ್ತ, ದಿನಾಂಕ, PAN, ಫೋನ್ ನಂ., ಹಾಗೂ ನಿಮ್ಮ ಇ-ಮೇಲ್ ವಿಳಾಸ.

ಸ್ವಾಮಿ ದಯಾಮೂರ್ತ್ಯಾನಂದ, ಕಾರ್ಯದರ್ಶಿಗಳು

ಪ್ರಾರ್ಥನೆ

ಶ್ರೀಶಾರದಾದೇವೀ ಸ್ತೋತ್ರಮ್ - ೧

ಬ್ರಹ್ಮಯುಕ್ತನಿತ್ಯಶಕ್ತಿಸೃಷ್ಟಜೀವಪಾಲಿಕಾಂ
ರಾಮಕೃಷ್ಣಶಕ್ತಿಶುದ್ಧಬುದ್ಧಿಮುಕ್ತಿದಾಯಿಕಾಮ್ ।
ರಾಮಕೃಷ್ಣಭಾವಸಿಕ್ತರಾಮಕೃಷ್ಣವಲ್ಲಭಾಂ
ತಾಂ ನಮಾಮಿ ಸಾರದಾಂ ಹಿ ವಿಶ್ವಾಮೃತರೂಪಿಣೀಮ್ ॥ ೧ ॥

ಬ್ರಹ್ಮದೊಡಗೂಡಿದ ನಿತ್ಯಶಕ್ತಿ ಸ್ವರೂಪಿಣಿಯಾಗಿ, ಸೃಷ್ಟಿಸಿದ ಸಕಲ ಜೀವಿಗಳನ್ನೂ ಪಾಲಿಸುವ, ರಾಮಕೃಷ್ಣರ ಶಕ್ತಿಯಾಗಿ ಶುದ್ಧ ಬುದ್ಧಿಯನ್ನೂ, ಮುಕ್ತಿಯನ್ನೂ ಅನುಗ್ರಹಿಸುವ, ರಾಮಕೃಷ್ಣ ಭಾವದಲ್ಲಿ ತಲ್ಲೀನಳಾಗಿ ಶ್ರೀರಾಮಕೃಷ್ಣರಿಗೆ ಪ್ರಿಯಳಾದ, ವಿಶ್ವಕ್ಕೇ ತಾಯಿಯಾದ ಶಾರದೆಯನ್ನು ನಮಸ್ಕರಿಸುವೆನು.

ಬ್ರಹ್ಮಶಕ್ತಿದಿವ್ಯರೂಪಸರ್ವಸೃಷ್ಟಿಭಾಸಿಕಾಂ
ಜ್ಞಾನಭಕ್ತಿಪೂರ್ಣಮೂರ್ತಿನಿತ್ಯಸತ್ಯಸುಸ್ಥಿರಾಮ್ ।
ಪ್ರೇಮಭಕ್ತಿರಾಗಶುದ್ಧಿನಿತ್ಯಮೋಕ್ಷದಾಯಿನೀಮ್
ತಾಂ ನಮಾಮಿ ಸಾರದಾಂ ಹಿ ವಿಶ್ವಾಮೃತರೂಪಿಣೀಮ್॥ ೨ ॥

ಬ್ರಹ್ಮದ ಶಕ್ತಿಯಾಗಿ ಸೃಷ್ಟಿಸಿದ ಎಲ್ಲದರೊಳಗೂ ದಿವ್ಯವಾದ ರೂಪದಿಂದ ಪ್ರಕಾಶಿಸುವ, ಜ್ಞಾನಭಕ್ತಿಪೂರ್ಣರಾದವರಲ್ಲಿ ನಿತ್ಯ ನಿರಂತರ ಸುಸ್ಥಿರವಾಗಿ ನೆಲೆಸಿರುವ, ಪ್ರೇಮಭಕ್ತಿಯಿಂದ ಕೂಡಿ ಪರಮಾತ್ಮನಲ್ಲಿ ಶುದ್ಧ ಅನುರಾಗ ಹೊಂದಿರುವ, ಜೀವಿಗಳಿಗೆ ಶಾಶ್ವತ ಮೋಕ್ಷವನ್ನು ದಯಪಾಲಿಸುವ, ಇಡೀ ಜಗತ್ತಿಗೆ ಮಾತೃರೂಪಿಣಿಯಾದ ಶಾರದೆಗೆ ನಮಸ್ಕರಿಸುವೆನು.

ರಾಮಕೃಷ್ಣಪೂಜಿತಾಂ ಸುಪಾವನೀಂ ಭವೇಶ್ವರೀ
ದೃಷ್ಟಿಪಾತಶುದ್ಧಿದಾನದಕ್ಷಜನ್ಮಘಾತಿನೀಮ್ ।
ರಾಮಕೃಷ್ಣಶುದ್ಧನಿತ್ಯಭಕ್ತಿದಾನತತ್ಪರಾಂ
ತಾಂ ನಮಾಮಿ ಸಾರದಾಂ ಹಿ ವಿಶ್ವಾಮೃತರೂಪಿಣೀಮ್॥ ೩ ॥



ಶ್ರೀರಾಮಕೃಷ್ಣರ ಪೂಜೆಯನ್ನು ಸ್ವೀಕರಿಸಿದ, ಅತ್ಯಂತ ಪಾವನಳಾದ, ಸಂಸಾರಸಾಗರದ ಮೇಲೆ ಒಡೆತನ ಪಡೆದಿರುವ, ಕೇವಲ ಕೃಪಾಕಟಾಕ್ಷಮಾತ್ರದಿಂದ ಜೀವಿಯು ಮತ್ತೆ ಮತ್ತೆ ಜನ್ಮತಳೆಯದಂತೆ ಮಾಡಬಲ್ಲ, ಶ್ರೀರಾಮಕೃಷ್ಣರಲ್ಲಿ ಶುದ್ಧವಾದ ಸ್ಥಿರಭಕ್ತಿಯನ್ನು ಅನುಗ್ರಹಿಸುವ, ಲೋಕಕ್ಕೇ ಜನನಿಯಾದ ಶಾರದೆಗೆ ನಮಸ್ಕರಿಸುವೆನು.

— ಸ್ವಾಮಿ ಜೀವಾನಂದ

ಸೂಕ್ತಿಪ್ರಭ

ನಮ್ಮ ಅತಿದೊಡ್ಡ ದೌರ್ಬಲ್ಯವೇ, ಹಿಂಜರಿಯುವುದು. ಯಾವಾಗಲೂ ಗೆಲುವಿಗೆ ಅತ್ಯಂತ ಖಚಿತವಾದ ದಾರಿಯೆಂದರೆ, ಇನ್ನೊಂದು ಬಾರಿ ಪ್ರಯತ್ನಿಸುವುದು.

— ಥಾಮಸ್ ಅಲ್ವಾ ಎಡಿಸನ್

ಕಲೆಯೆಂದರೇನು? ಸತ್ಯದ ಕರೆಗೆ ಮಾನವನ ಸೃಜನಾತ್ಮಕವಾದ ಪ್ರತಿಕ್ರಿಯೆಯೇ ಕಲೆ.

—ರವೀಂದ್ರನಾಥ ಟಾಗೋರ್

ಒಬ್ಬ ವ್ಯಕ್ತಿಯು ಅನುಕಂಪ ಹಾಗೂ ಬುದ್ಧಿವಂತಿಕೆಯಿಂದ ಕೂಡಿದ್ದಷ್ಟೂ ಅವನು ಇತರರಲ್ಲಿ ಹೆಚ್ಚು ಹೆಚ್ಚು ಅನುಕಂಪೆಯನ್ನು ಕಾಣಬಲ್ಲ. ಅನುಕಂಪ ನಮ್ಮ ಬದುಕನ್ನು ಶ್ರೀಮಂತಗೊಳಿಸುವುದು. ಅನುಕಂಪದಿಂದ ನಿಗೂಢ ಸಂಗತಿಗಳು ಸ್ಪಷ್ಟವಾಗಿ ತಿಳಿಯುವುದು; ಕಠಿಣವಾದ ಸಂಗತಿಗಳು ಸುಲಭವಾಗುವುವು, ಹಾಗೂ ಜಡವಾದ ಸಂಗತಿಗಳು ಉಲ್ಲಾಸದಿಂದ ತುಂಬುವುವು.

— ಲಿಯೋ ಟಾಲ್‌ಸ್ಟಾಯ್

ಬುದ್ಧಿಯ ಅತಿದೊಡ್ಡ ಕಾರ್ಯವೇನೆಂದರೆ, ಬುದ್ಧಿಯ ಆಚೆಗೂ ಇನ್ನೇನೋ ಇದೆಯೆಂಬುದನ್ನು ಮಾನವನಿಗೆ ತಿಳಿಸಿಕೊಡುವುದು.

—ಬ್ಲೇಸ್ ಪಾಸ್ಕಲ್



ಶ್ರೀಮಾತೆಯವರ ಬೋಧನೆಗಳ ಸಾರ

ಸಾಮಾನ್ಯವಾಗಿ ಮಹಾಪುರುಷರ, ಸಾಧುಸಂತರ ಜೀವನ–ಸಂದೇಶಗಳು ಒಂದು ಕಾಲಕ್ಕೆ ಸೀಮಿತವಾಗಿರದೆ, ಆಯಾ ಕಾಲ–ದೇಶಗಳ ಚೌಕಟ್ಟನ್ನು ಮೀರಿ ಎಲ್ಲ ಕಾಲಕ್ಕೂ, ಎಲ್ಲ ದೇಶಕ್ಕೂ, ಎಲ್ಲ ಸನ್ನಿವೇಶಗಳಿಗೂ ಪ್ರಸ್ತುತವೆನಿಸುತ್ತವೆ. ಅವರು ಕಂಡಿರುವ ಸತ್ಯ, ಅವರ ದೃಷ್ಟಿಕೋನ, ದರ್ಶನ–ಅನುಭವಗಳು ಸಾರ್ವತ್ರಿಕವಾಗಿರುವುದೇ ಇದಕ್ಕೆ ಕಾರಣ. ಆದರೆ, ಸಾಮಾಜಿಕ ಬದಲಾವಣೆಗಳಿಗೆ ತಕ್ಕಂತೆ ಮೌಲ್ಯ, ದೃಷ್ಟಿಕೋನಗಳು ಬದಲಾಗುತ್ತವೆ; ಹಿಂದಿನ ಅನೇಕ ಸಾಮಾಜಿಕ ವಿಚಾರಗಳು ಹೊಸ ಸಂದರ್ಭಗಳಲ್ಲಿ ನಿರುಪಯುಕ್ತವೆನಿಸುತ್ತವೆ. ಮಹಾತ್ಮರುಗಳು ಆಯಾ ಕಾಲ–ದೇಶಗಳಿಗೆ ಬದ್ಧರಾಗಿದ್ದುಕೊಂಡೇ ಜೀವನ ನಡೆಸಿದ್ದರೂ, ಅವರು ಕಂಡ ಸತ್ಯಗಳು ಮಾತ್ರ ಆ ಮಿತಿಯನ್ನು ದಾಟಿ ಜನರನ್ನು ಪ್ರೇರೇಪಿಸಬಲ್ಲವು. ಇದಕ್ಕೆ ಅತ್ಯುತ್ತಮ ಉದಾಹರಣೆ ಶ್ರೀಮಾತೆ ಶಾರದಾದೇವಿಯವರು.

ಪ್ರಪಂಚದ ಹಲವು ಧರ್ಮಗಳಲ್ಲಿ, ಹಲವು ದೇಶಗಳಲ್ಲಿ ಅನೇಕ ಮಂದಿ ಮಹಿಳೆಯರು ಆಧ್ಯಾತ್ಮಿಕ ಶಿಖರವನ್ನು ತಲುಪಿದ ಉದಾಹರಣೆಗಳಿವೆ. ನಮ್ಮಲ್ಲೇ ಗೋದಾದೇವಿ, ಮೀರಾಬಾಯಿ, ಅಕ್ಕಮಹಾದೇವಿಯರು ಆಗಿಹೋಗಿದ್ದಾರೆ. ಪ್ರಾಚೀನ ಕಾಲದಲ್ಲೂ ಗಾರ್ಗಿ, ಮೈತ್ರೇಯಿ, ಸಾವಿತ್ರಿ, ಸೀತೆಯಂತಹ ಅದ್ಭುತ ಮಹಿಳೆಯರಿದ್ದರು. ಸಾಮಾನ್ಯ ಮಹಿಳೆಯರ ಜೀವನಶೈಲಿಯನ್ನು ದಾಟಿ, ತಮ್ಮ ಅದ್ಭುತ ವ್ಯಕ್ತಿತ್ವದಿಂದ ಬೆಳಗಿದ ಇವರುಗಳು ಭಾರತೀಯ ನಾರಿಯ ಆದರ್ಶ ಎಂತಹದು ಎಂಬುದನ್ನು ರೂಪಿಸಿದ್ದಾರೆ. ಆದರೆ ಪ್ರಾಚೀನ ಹಾಗೂ ನೂತನ ಈ ಎರಡೂ ವಿಚಾರ–ಆದರ್ಶಗಳನ್ನು ಸಮನ್ವಯಗೊಳಿಸಿಕೊಂಡು, ಎಂತಹ ಸಂದಿಗ್ಧ ಪರಿಸ್ಥಿತಿಯಲ್ಲೂ ತಮ್ಮ ಸಮತೂಕವನ್ನು ಮೀರದೆ, ಎಲ್ಲ ಸಂಕುಚಿತ ಭಾವಗಳ ಗಡಿಯನ್ನು ದಾಟಿ ಅದ್ವಿತೀಯ ಪ್ರೇಮವನ್ನು ಬೀರಿ, ಜಗತ್ತನ್ನು ತಮ್ಮ ಬದುಕಿನಿಂದ ಬೆಳಗಿಸಿದವರು ಶ್ರೀಮಾತೆ. ಹಿಂದಿನ ಎಲ್ಲ ತಪಸ್ವಿನಿಯರ, ಸಾಧಕಿಯರ, ದೇವ–ದೇವಿಯರ ಜೀವಚೈತನ್ಯವೆಲ್ಲ ಒಗ್ಗೂಡಿ ಬಂದು ಪ್ರಕಟಗೊಂಡ ಮಾತೃರೂಪಿಣಿ ಶಕ್ತಿಯೇ ಶ್ರೀಮಾತೆ ಶಾರದಾದೇವಿಯವರು.

ಶ್ರೀಮಾತೆಯವರ ಅಸಾಧಾರಣ ಜೀವನ

ಶ್ರೀಮಾತೆಯವರ ಉಪದೇಶಗಳು ಅವರ ಜೀವನಕ್ಕಿಂತ ಪ್ರತ್ಯೇಕವಾಗಿ ನಿಲ್ಲುವುದಿಲ್ಲ. ಅವರ ಬಹುತೇಕ ಉಪದೇಶಗಳೂ ಹಾಗೆಯೇ – ಜೀವನದ ಯಾವುದೋ ಸಾಧಾರಣ ಸನ್ನಿವೇಶಗಳಲ್ಲಿ ಮೂಡಿಬಂದ ಮಾತುಗಳು. ಯಾವುದೋ ಸಂದರ್ಭದಲ್ಲಿ ಇತರರಿಗೆ ಪ್ರಾಸಂಗಿಕವಾಗಿ ಹೇಳಿದ ಮಾತುಗಳು, ಆ ಸನ್ನಿವೇಶದಾಚೆಗೂ ಅಪೂರ್ವ ಅರ್ಥವನ್ನು ಸೂಚಿಸುತ್ತವೆ, ಇತರ ಸಂದರ್ಭಗಳಲ್ಲೂ ಮಹತ್ವದ್ದೆನಿಸುತ್ತವೆ. ಆದರೆ ಆಯಾ ಸನ್ನಿವೇಶಗಳಲ್ಲಿ ಅವರು ಆಡಿದ ಮಾತುಗಳನ್ನು ಆ ಸಂದರ್ಭದೊಂದಿಗೇ ಅರಿತುಕೊಳ್ಳುವುದು ಹೆಚ್ಚು ಮುಖ್ಯವೆನಿಸುತ್ತದೆ. ಕೆಲವೊಮ್ಮೆ ಸಂಸಾರಿಗಳಿಗೂ ಸಂನ್ಯಾಸಿಗಳಿಗೂ ವಿರುದ್ಧವೆನ್ನಬಹುದಾದ ರೀತಿಯಲ್ಲಿ ಉಪದೇಶ ನೀಡಿದ್ದರು ಶ್ರೀಮಾತೆ. ಸಂಸಾರಿಗಳಿಗೆ, 'ನೀವೇಕೆ ಸಂಸಾರವನ್ನು ದೂಷಿಸಬೇಕು? ನಿನ್ನ ಕರ್ತವ್ಯ ಮಾಡುತ್ತ, ಎಲ್ಲರೊಡನೆ ಬೆರೆತು ಆನಂದದಿಂದ ಸಾಧನೆ ಮಾಡುತ್ತಿರು' ಎನ್ನುತ್ತಿದ್ದರು. ಆದರೆ ಸಂನ್ಯಾಸಿಗಳಿಗೆ, 'ತ್ಯಾಗಜೀವನವೇ ಅತ್ಯುತ್ತಮ. ಸಂಸಾರದಲ್ಲಿ ಏನಿದೆ? ಬೇರೆಲ್ಲವನ್ನೂ ಬದಿಗಿಟ್ಟು ಭಗವಂತನನ್ನೇ ಆಶ್ರಯಿಸು' ಎನ್ನುತ್ತಿದ್ದರು. *(ನೋಡಿ, ಶಾರದಾದೇವಿ ಜೀವನಗಂಗಾ, ಪು.೪೭೫)* ಇಂತಹ ಉದಾಹರಣೆಗಳಲ್ಲಿ ನಾವು ಸಂದರ್ಭ–ಸನ್ನಿವೇಶಗಳನ್ನು ಗಮನಿಸದಿದ್ದರೆ ತಪ್ಪು ಅರ್ಥ ಉಂಟಾಗುವ ಸಾಧ್ಯತೆಯಿದೆ. ಉಳಿದ ಅನೇಕ ಉಪದೇಶಗಳು ಸಾರ್ವತ್ರಿಕವಾಗಿರುತ್ತವೆ, ಆದ್ದರಿಂದ ಸನ್ನಿವೇಶಗಳನ್ನು ಅರಿತಿಲ್ಲದಿದ್ದೂ ಅವು ಸರಿಯಾದ ಅರ್ಥವನ್ನೇ ನೀಡಬಲ್ಲವು. ಹೀಗೆ ಯಾವುದು ಸಾಂದರ್ಭಿಕ, ಯಾವುದು ಸಾರ್ವತ್ರಿಕ ಎಂದು ಬೇರ್ಪಡಿಸುವುದು ಹೇಗೆ? ಶ್ರೀಮಾತೆಯರ ಜೀವನವನ್ನು ಕುರಿತು ಓದಿ ತಿಳಿದುಕೊಂಡು, ನಮ್ಮ ವಿವೇಚನೆಯಿಂದ ಅವರ ಉಪದೇಶಗಳನ್ನು ಅರ್ಥಮಾಡಿಕೊಳ್ಳುವುದೇ ಇದಕ್ಕೆ ಸರಿಯಾದ ಮಾರ್ಗ.

ಶ್ರೀಮಾತೆಯವರ ಉಪದೇಶಗಳ ಹಿರಿಮೆ

ಗ್ರಾಮೀಣ ಜನಜೀವನದ ನಡುವೆ ಬಾಳಿ ಬದುಕಿದ ಶ್ರೀಮಾತೆಯವರು ತಮ್ಮ ಬಳಿಗೆ ಬಂದವರಿಗೆಲ್ಲ ಆಧ್ಯಾತ್ಮಿಕ ಉಪದೇಶಗಳನ್ನು ನೀಡಿದ್ದರು ಎನ್ನಲಾಗದು; ಆದರೆ ದೀಕ್ಷೆ ಪಡೆದ ಶಿಷ್ಯಂದಿರು, ಸಂನ್ಯಾಸಿ ಶಿಷ್ಯರು, ಶ್ರೀರಾಮಕೃಷ್ಣರ ನೇರ ಶಿಷ್ಯಂದಿರು, ಇತರ ಆಧ್ಯಾತ್ಮಿಕ ಸಾಧಕರಿಗೆ ಅವರು ನೀಡಿದ ಸಲಹೆ, ಮಾರ್ಗದರ್ಶನಗಳು ಅತ್ಯಂತ ಅಮೂಲ್ಯವಾಗಿವೆ. ಆದರೆ ಕೆಲವೊಮ್ಮೆ ಅವರ ಸಾಮಾನ್ಯವಾದ ಮಾತುಗಳೂ ಉಪದೇಶಗಳಂತೆಯೇ ಮಹತ್ವಪೂರ್ಣವಾಗಿವೆ. ಶ್ರೀಮಾತೆಯರು ಸದಾ ಲೌಕಿಕ ಜನಜೀವನದಲ್ಲೇ ಮುಳುಗಿದ್ದರೂ, ಸಕ್ರಿಯವಾಗಿ ತೊಡಗಿಕೊಂಡಿದ್ದರೂ, ಅವರ ಅಂತರಂಗವೆಲ್ಲ ಭಗವನ್ಮಯವಾಗಿದ್ದುದೇ ಇದಕ್ಕೆ

ಕಾರಣ. ಕಸ ಗುಡಿಸುತ್ತಿದ್ದ ವ್ಯಕ್ತಿಯೊಬ್ಬ ತನ್ನ ಕೆಲಸವಾದ ಬಳಿಕ ಕಸಬರಿಕೆಯನ್ನೆಸೆದು ಹೋದ. ''ಇದೆಂಥ ವಿಚಿತ್ರ! ಕೆಲಸವಾಯಿತು ಎಂದು ಆ ವಸ್ತುವನ್ನು ಅಸಡ್ಡೆಯಿಂದ ಬಿಸಾಡಿಬಿಟ್ಟೆ. ಅದನ್ನು ನಿಧಾನವಾಗಿ ಅಲ್ಲೇ ಇಡುವುದಕ್ಕೂ ಬಿಸಾಡುವಷ್ಟೇ ಸಮಯ ಸಾಕಾಗುತ್ತಿತು. ಅದೊಂದು ಕ್ಷುಲ್ಲಕ ವಸ್ತುವೆಂದು ಅದನ್ನು ಹಾಗೆ ತಿರಸ್ಕಾರದಿಂದ ನೋಡಬೇಕೇ? ನಾಳೆ ಮತ್ತೆ ನಿನಗದು ಬೇಡವೆ? ಪ್ರತಿಯೊಂದು ವಸ್ತುವಿಗೂ ಅದರದ್ದೇ ಆದ ಮರ್ಯಾದೆಯಿದೆ'' ಎಂದು ಬುದ್ಧಿ ಹೇಳಿದರು ಶ್ರೀಮಾತೆ. ಜಡವಸ್ತುವಿಗೂ ವ್ಯಕ್ತಿತ್ವ ವಿದೆ, ಅನಂತ ಜಗತ್ತಿನಲ್ಲಿ ಒಂದು ಸಣ್ಣ ಕಣಕ್ಕೂ ಅಸ್ತಿತ್ವವಿದೆ ಎಂದು ಒಬ್ಬ ವೇದಾಂತಿ ಹೇಳಬಲ್ಲ, ಒಬ್ಬ ವಿಜ್ಞಾನಿ ಹೇಳಬಲ್ಲ. ಆದರೆ ಶ್ರೀಮಾತೆ ಹಾಗೆ ಹೇಳಬೇಕಾದರೆ, ಅದಕ್ಕೆ ಅವರ ಸರ್ವ ಸಮದೃಷ್ಟಿಕೋನವೇ ಕಾರಣ. ಆಧ್ಯಾತ್ಮಿಕ ಅನುಭವದ ಆಳ ದಿಂದ ಮೂಡಿಬಂದ ದೃಷ್ಟಿಕೋನವಿದು. ಅವರ ದೈನಂದಿನ ಜೀವನದ ಸಣ್ಣ ಘಟನೆಗಳಲ್ಲೂ ಅದು ವ್ಯಕ್ತವಾಗುತ್ತಿತ್ತು. ಈ ರೀತಿ ಅವರ ಮಾತುಗಳಿಗೆ ಸಾಂದರ್ಭಿಕವಾದ ಸೀಮಿತತೆಯನ್ನು ದಾಟಿದ ಸಮಗ್ರತೆಯಿದೆ.

'ಎಲ್ಲರೂ ತನ್ನ ಮಕ್ಕಳೇ'

ಭಗವದ್ಗೀತೆಯಲ್ಲಿ, 'ಸರ್ವಭೂತಸ್ಥಮಾತ್ಮಾನಂ ಸರ್ವಭೂತಾನಿ ಚಾತ್ಮನಿ । ಈಕ್ಷತೇ ಯೋಗಯುಕ್ತಾತ್ಮಾ ಸರ್ವತ್ರ ಸಮದರ್ಶನಃ', ಹಾಗೂ 'ವಿದ್ಯಾವಿನಯ ಸಂಪನ್ನೇ ಬ್ರಾಹ್ಮಣೇ ಗವಿ ಹಸ್ತಿನಿ । ಶುನಿ ಚೈವ ಶ್ವಪಾಕೇ ಚ ಪಂಡಿತಾಃ ಸಮದರ್ಶಿನಃ' (ವಿದ್ಯಾ ವಿನಯಗಳಿಂದ ಕೂಡಿದ ಬ್ರಾಹ್ಮಣ, ಗೋವು, ಆನೆ, ನಾಯಿ ಮತ್ತು ನಾಯಿಯ ಮಾಂಸವನ್ನು ತಿನ್ನುವವನು – ಎಲ್ಲರಲ್ಲಿಯೂ ಜ್ಞಾನಿಗಳು ಸಮದರ್ಶಿಗಳಾಗಿರುತ್ತಾರೆ) – ಎಂದು 'ಸಮ ದರ್ಶನ' ವನ್ನು ಹೊಂದಿದ ಸಂತರ ಲಕ್ಷಣವನ್ನು ಹೇಳಲಾಗಿದೆ. ಆದರೆ ಈ ಬಗೆಯ ದೃಷ್ಟಿಕೋನವನ್ನು ನಿಜವಾಗಿ ಆಚರಿಸಿದವ ರಿದ್ದಾರೆಯೆ? – ಈ ಸಂದೇಹ ನಮಗೆ ಮೂಡುವುದು. ಸಂತರ, ಮಹಾತ್ಮರ ಜೀವನವನ್ನು ಅರಿತುಕೊಂಡಲ್ಲದೆ ನಮಗೆ ಈ ಶ್ಲೋಕಗಳ ಅರ್ಥ ಮನದಟ್ಟಾಗದು. ಶ್ರೀಮಾತೆಯವರ ಜೀವನ ಈ ಬಗೆಯ ಸಮದರ್ಶನವನ್ನು ತೋರಿಸಿ ಕೊಡಲು ಅತ್ಯುತ್ತಮ ಉದಾಹರಣೆಯಾಗಿದೆ. ಅತಿ ಶ್ರೇಷ್ಠ ಸಂನ್ಯಾಸಿಗಳನ್ನೂ ಶ್ರೀಮಾತೆ ಯವರು ಭೇಟಿ ಮಾಡಿ ಗೌರವ ಸಲ್ಲಿಸಿದ್ದರು; ಶ್ರೀರಾಮಕೃಷ್ಣರ ನೇರ ಶಿಷ್ಯಂದಿರಾದ ಸ್ವಾಮಿ ವಿವೇಕಾನಂದರೇ ಮೊದಲಾದವ ರನ್ನೂ ವಿಶೇಷ ಪ್ರೀತಿಯಿಂದ ಕಂಡಿದ್ದರು. ಅದೇ ರೀತಿ ಅಂತ್ಯ ಜರು, ಅನ್ಯ ಜಾತಿಯರು, ಬೇರೆ ಧರ್ಮಕ್ಕೆ ಸೇರಿದವರು ಕೂಡ ಅವರ ಪ್ರೀತಿಗೆ ಪಾತ್ರರಾಗಿದ್ದರು. ಅಷ್ಟೇಕೆ, ಪ್ರಾಣಿ, ಪಕ್ಷಿ, ಕೀಟಾದಿಗಳನ್ನೂ ಅವರು ತಮ್ಮ ಮಕ್ಕಳೆಂದೇ ಭಾವಿಸುತ್ತಿದ್ದರು. ಶ್ರೀಮಾತೆಯವರು ತಮ್ಮ ಸೇವಕರಾಗಿದ್ದ ಬ್ರಹ್ಮಚಾರಿ ರಾಸಬಿಹಾರಿ ಯೊಂದಿಗೆ ಮಾತುಕತೆಯಾಡುತ್ತಿದ್ದಾಗ ಅವನು ಕೇಳಿದ : 'ನೀವು ಎಲ್ಲರ ತಾಯಿಯೆ?' ಅದಕ್ಕೆ ಶ್ರೀಮಾತೆ, 'ಹೌದು' ಎಂದರು. 'ಈ ಎಲ್ಲ ಜೀವಜಂತುಗಳಿಗೂ ತಾಯೆಯೆ?' ಎಂದು ಕೇಳಿದಾಗ, ''ಹೌದು, ಅವುಗಳಿಗೂ'' ಎಂದರು ಶ್ರೀಮಾತೆ. *(ಶ್ರೀ ಶಾರದಾದೇವಿ ವಚನವೇದ, ಪು.೧೨೭)* ಅಷ್ಟೊಂದು ವಿಶಾಲ ಹೃದಯವನ್ನು ಹೊಂದಿದ್ದ ಶ್ರೀಮಾತೆಯವರು ಎಲ್ಲರನ್ನೂ ತಮ್ಮವರನ್ನಾಗಿ ಮಾಡಿ ಕೊಂಡರು. ಅವರಲ್ಲಿ ಯಾವುದೇ ಭೇದಭಾವನೆ ಇರಲಿಲ್ಲ. ಇದಕ್ಕೆ ಅನುಸಾರವಾಗಿ ಅವರು ನೀಡಿದ ಉಪದೇಶ ಹೀಗಿದೆ: ''ನಿನಗೊಂದು ಮಾತು ಹೇಳುತ್ತೇನೆ, ಕೇಳು. ನಿನಗೇನಾದರೂ ಶಾಂತಿ ಬೇಕಿದ್ದರೆ ಯಾರಲ್ಲೂ ದೋಷ ಕಾಣಬೇಡ. ಒಂದು ವೇಳೆ ದೋಷವನ್ನು ಕಾಣುವುದಾದರೆ ನಿನ್ನ ದೋಷವನ್ನೇ ನೋಡಿಕೊ. ಈ ಇಡೀ ಜಗತ್ತನ್ನೇ ನಿನ್ನದನ್ನಾಗಿ ಮಾಡಲು ಕಲಿತುಕೋ. ನೋಡು, ಇಲ್ಲಿ ಪರಕೀಯರೆಂಬವರು ಯಾರೂ ಇಲ್ಲ. ಈ ಇಡೀ ಜಗತ್ತೇ ನಿನ್ನದು.'' *(ಶಾರದಾದೇವಿ ಜೀವನಗಂಗಾ, ಪು.೨೪೭)*

ಪ್ರಪಂಚದ ಎಲ್ಲ ಸಮಸ್ಯೆಗಳ ಮೂಲವೂ ಇದೇ; ಇದಕ್ಕೆ ಪರಿಹಾರವೂ ಇಲ್ಲೇ ಇದೆ. ಇತರರನ್ನು ದ್ವೇಷಿಸಿದರೆ, ನನ್ನವ ರೆಂದು ಭಾವಿಸದಿದ್ದರೆ ಅನವಶ್ಯಕ ಜಗಳ, ಪೈಪೋಟಿ, ದ್ವೇಷ ಬೆಳೆಯುವುದು. ವ್ಯಕ್ತಿಗಳ, ಜನಾಂಗಗಳ, ದೇಶಗಳ ನಡುವಿನ ಬಿಕ್ಕಟ್ಟಿಗೆ ಇದೇ ಕಾರಣ. ಈ ಭಾವನೆಯನ್ನು ಬಿಟ್ಟು, ಎಲ್ಲರೂ ನನ್ನವರೇ ಎಂದು ಭಾವಿಸಿದರೆ, ಈ ಎಲ್ಲ ಸಮಸ್ಯೆಗಳೂ ಪರಿ ಹಾರವಾಗುವುದಿಲ್ಲವೆ? ಬಸವಣ್ಣನವರ 'ಇವನಾರವ ಇವ ನಾರವ ಎಂದೆನಿಸದಿರಯ್ಯಾ, ಇವ ನಮ್ಮವ ಇವ ನಮ್ಮವ ಎಂದೆನಿಸಯ್ಯಾ' ಎಂಬ ಮಾತಿನ ತಿರುಳೂ ಇದೇ ಆಗಿದೆ. ಆದರೆ ಈ ಮಾತುಗಳ ಅಂತರಾರ್ಥವನ್ನು ಅರಿತು, ಜೀವನದಲ್ಲಿ ಅದನ್ನು ಆಚರಿಸುವವರು ಕೆಲವೇ ಮಂದಿ ಎಂಬುದೇ ಈ ಜಗತ್ತಿನ ದುರಂತ.

'ಕೆಲಸ ಮಾಡು' –ಪ್ರಾಯೋಗಿಕ ಉಪದೇಶ

ತನಗಾಗಿ, ತನ್ನ ಸುಖಕ್ಕಾಗಿ ಎಂಬ ಸ್ವಾರ್ಥಬುದ್ಧಿ ಸ್ವಲ್ಪವೂ ಇಲ್ಲದೆ, ಎಲ್ಲವನ್ನೂ ಇತರರಿಗಾಗಿ ಮಾಡಿದವರು ಶ್ರೀಮಾತೆ. ಶ್ರೀರಾಮಕೃಷ್ಣರು ತೀರಿಕೊಂಡ ಸಂದರ್ಭದಲ್ಲಿ ದುಃಖ ತಡೆಯ ಲಾಗದೆ, ದೇಹವನ್ನೇ ಬಿಟ್ಟುಬಿಡುತ್ತೇನೆ ಎಂದುಕೊಂಡಿದ್ದರಂತೆ ಶ್ರೀಮಾತೆ. ಆಗ ಶ್ರೀರಾಮಕೃಷ್ಣರೇ ಅವರಿಗೆ ಆದೇಶ ನೀಡಿದರು – 'ಇಲ್ಲ, ನೀನು ಬದುಕಬೇಕು. ಕ್ಷುಲ್ಲಕ ಜೀವನ ನಡೆಸುತ್ತಿರುವ ಜನರಿಗೆ ನೀನು ದಾರಿ ತೋರಿಸಬೇಕು' ಎಂದು. ಅದನ್ನು ಪಾಲಿಸಿ ದರು ಶ್ರೀಮಾತೆ. ಮುಂದಿನ ಸುದೀರ್ಘ ಜೀವನದುದ್ದಕ್ಕೂ ಶ್ರೀರಾಮಕೃಷ್ಣರು ಕಲಿಸಿಕೊಟ್ಟ ಆಧ್ಯಾತ್ಮಿಕ ಪ್ರೀತಿಯನ್ನೇ ಉಸಿರಾ ಡುತ್ತ, ಸಮಸ್ತ ಜಗತ್ತಿನ ಮಂಗಳವನ್ನೇ ಬಯಸುತ್ತ, ಪ್ರತಿ ಯೊಂದು ಜೀವಿಗೂ ಅದರದರ ಮಾರ್ಗದಲ್ಲಿ ನೆರವಾಗುತ್ತ ಶ್ರೀಮಾತೆ ಬದುಕಿದರು. ಕೆಲಸವಿಲ್ಲದೆ ಒಂದು ಕ್ಷಣವೂ ಕುಳಿತವ ರಲ್ಲ ಅವರು. ಸಾಂಸಾರಿಕ ತಾಪತ್ರಯದ ನಡುವೆ, ತಮ್ಮ ಬಳಿಗೆ ಬರುತ್ತಿದ್ದ ಅನೇಕ ಭಕ್ತರ ನಡುವೆ, ದಿನನಿತ್ಯದ ಕೆಲಸಗಳಾದ ಅಡುಗೆ, ಸ್ವಚ್ಛಗೊಳಿಸುವುದು ಇತ್ಯಾದಿಗಳ ನಡುವೆ ಅವರು ಲಕ್ಷ ಲಕ್ಷ ಜಪ, ಧ್ಯಾನ ಮಾಡುತ್ತಿದ್ದರು. ಪ್ರತಿಯೊಬ್ಬರ ಒಳಿತಿಗಾಗಿ ಅವರು ಪ್ರಾರ್ಥಿಸುತ್ತಿದ್ದರು. ಈ ಹಿನ್ನೆಲೆಯಲ್ಲಿ ಅವರ ಈ ಉಪ

ದೇಶವನ್ನು ಗಮನಿಸಬೇಕು: ''ಕೆಲಸ ಮಾಡದಿದ್ದರೆ ಮನಸ್ಸು ಚೆನ್ನಾಗಿರುತ್ತದೆಯೆ? ಆದ್ದರಿಂದ ಕಲಸ ಮಾಡಬೇಕು. ಅದರಿಂದ ಮನಸ್ಸು ಸುಸ್ಥಿತಿಯಲ್ಲಿರುತ್ತದೆ.'' *(ಶ್ರೀಶಾರದಾದೇವಿ ವಚನವೇದ, ಪು.೧೭೨)*

ತ್ಯಾಗ, ವೈರಾಗ್ಯ ಬೋಧನೆಯಿಂದ ಅನೇಕ ಬಾರಿ ವ್ಯಾವಹಾರಿಕ, ಲೌಕಿಕ ಜೀವನವನ್ನು ಬಿಟ್ಟುಬಿಡಬೇಕೆಂಬ ಭಾವನೆ ಮೂಡಿ ಬರುವುದುಂಟು. ಆದರೆ ಸಹಜವಾಗಿಯೇ ಕರ್ಮವು ಬಿದ್ದುಹೋಗಬೇಕು, ಅಲ್ಲಿಯತನಕವೂ ನಿಷ್ಕಾಮಭಾವದಿಂದ ಕರ್ಮ ಮಾಡಬೇಕು ಎಂಬುದೇ ಜ್ಞಾನಿಗಳ ಬೋಧನೆ. ಆದ್ದರಿಂದ ಮೋಕ್ಷಕ್ಕಾಗಿ ಕರ್ಮವನ್ನೇ ಬಿಟ್ಟುಬಿಡಬೇಕೆಂಬ ತತ್ತ್ವಭಾವನೆ ಹಲವರಲ್ಲಿದೆ. ತಾನಾಗಿ ಕರ್ಮದ ಬಂಧನ ಕಳಚಿಹೋಗುವವರೆಗೂ ಕರ್ಮಮಾಡುತ್ತಿರಬೇಕು, ಆ ಕರ್ಮವನ್ನೇ ಭಗವದರ್ಪಣೆ ಮಾಡಿದರೆ ಅದರಿಂದ ಬಂಧನವುಂಟಾಗದು ಎಂಬ ಗೀತೆಯ ಉಪದೇಶವನ್ನೇ ಶ್ರೀಮಾತೆಯವರು ಪ್ರತಿಧ್ವನಿಸುತ್ತಾರೆ. ಶಾಸ್ತ್ರಾಧ್ಯಯನ ಮಾಡಿದವರಲ್ಲ ಶ್ರೀಮಾತೆ; ಆದರೆ ಎಲ್ಲ ಶಾಸ್ತ್ರಗಳ ತಿರುಳನ್ನೇ ಅವರು ಬದುಕಿ ತೋರಿಸಿದರು.

ಸಹನೆಯ ಮಹತ್ವ

ಶ್ರೀಮಾತೆಯವರು ಜೀವಿಸಿದ್ದ ಗ್ರಾಮೀಣ ಪರಿಸರದಲ್ಲಿ ಹತ್ತು ಹಲವು ಮಂದಿ ಆರ್ತರು, ದುಃಖಿತರು, ಸಾಂಸಾರಿಕ ಜಂಜಾಟಗಳಲ್ಲಿ ನೊಂದು ಬೆಂದವರು ಇರುತ್ತಿದ್ದರು. ಶ್ರೀಮಾತೆಯವರ ಮನೆಯಲ್ಲೇ ಹತ್ತಾರು ಸಮಸ್ಯೆ, ಜಗಳ, ದುಃಖಸಂಕಟಗಳಿದ್ದವು. ಅವೆಲ್ಲವನ್ನೂ ಸರಿದೂಗಿಸಿಕೊಂಡು, ಅನೇಕ ಮಂದಿ ಅತಿಥಿ ಅಭ್ಯಾಗತರನ್ನೂ ನೋಡಿಕೊಳ್ಳುತ್ತ, ಜೊತೆಗೆ ತಮ್ಮ ಸಾಧನೆಯನ್ನೂ, ಮಾಡುತ್ತ ಹೋಗಬೇಕಾದರೆ ಶ್ರೀಮಾತೆಯವರ ಸಹನೆ ಅದೆಂತಹದಿರಬೇಕು! ''ಶ್ರೀರಾಮಕೃಷ್ಣರು ಹೇಳುತ್ತಿದ್ದರು, 'ಸ, ಶ, ಷ – ಅಂತ ಮೂರು ಬಗೆಯ ಸಕಾರಗಳಿವೆ' ಅಂತ. (ಬಂಗಾಳಿಯಲ್ಲಿ ಮೂರು ಅಕ್ಷರಗಳ ಉಚ್ಚಾರವೂ ಒಂದೇ. 'ಸ' ಎಂದರೆ ಸಹಿಸು ಎಂದರ್ಥ) ಯಾರು ಸಹಿಸುವನೋ ಅವನು ಮಾತ್ರ ಉಳಿದಾನು.''*(ಅಲ್ಲೇ, ಪು.೧೭೨)* ನಳಿನಿಯಂಥ ಹಟಮಾರಿ, ಶ್ರೀಮಾತೆಯವರ ತಮ್ಮಂದಿರ ಸ್ವಾರ್ಥಬುದ್ಧಿ, ಹಲವು ರೀತಿಯಲ್ಲಿ ತೊಂದರೆ ನೀಡುವ ಹಳ್ಳಿಯ ಜನರು – ಇವರೆಲ್ಲರ ನಡುವೆ ಆಧ್ಯಾತ್ಮಿಕ ಸಾಧನೆ ಮಾಡಲು ಶ್ರೀಮಾತೆಯವರು ಪ್ರತಿಕ್ಷಣವೂ ಸಹನೆ, ತಾಳ್ಮೆ ಹೊಂದಿರಬೇಕಾಗಿದ್ದಿತು. ಆದರೆ ಅದನ್ನು ಅವರು ಪ್ರಯತ್ನಪೂರ್ವಕ ರೂಢಿಸಿಕೊಳ್ಳಬೇಕಾಗಿರಲಿಲ್ಲ, ಅದು ಅವರ ಸಹಜ ಗುಣವಾಗಿತ್ತು. ಈ ರೀತಿ ನಮ್ಮ ಸ್ವಭಾವವೇ ಶಾಂತವೂ, ಸಹನೆ-ತಾಳ್ಮೆಗಳಿಂದ ಕೂಡಿದ್ದೂ ಆಗಿದ್ದರೆ ಅದು ಸಾಧನೆಗೆ ಅತ್ಯಂತ ಉತ್ತಮವೆಂದು ಶ್ರೀಮಾತೆಯವರು ಹೇಳುತ್ತಿದ್ದರು.

ಶ್ರದ್ಧೆ, ಭಕ್ತಿಯ ಶುದ್ಧ ಮಾರ್ಗ

ಎಲ್ಲರಿಗೂ ಸಹಜವಾಗಿ ಆಚರಿಸಬಹುದಾದ ಶುದ್ಧ ಭಕ್ತಿಯ ಮಾರ್ಗವನ್ನು ಶ್ರೀಮಾತೆಯವರು ಉಪದೇಶಿಸುತ್ತಿದ್ದರು. ಸರಳ, ಅಕೃತ್ರಿಮ ನಡವಳಿಕೆ ಅವರ ಜೀವನದಲ್ಲಿ ಹಾಸುಹೊಕ್ಕಾಗಿತ್ತು. ಅವರು ನೈವೇದ್ಯ ಮಾಡುವ ವಿಧಾನವನ್ನು ಕುರಿತು ಹೇಳುವಾಗ ಹೇಳುತ್ತಾರೆ, ವಿಧಿಪೂರ್ವಕ ಮಂತ್ರವನ್ನು ಹೇಳಿ ನೈವೇದ್ಯ ಮಾಡಿದ ಬಳಿಕ ಭಗವಂತ ನಮ್ಮ ಕರೆಯನ್ನು ಮನ್ನಿಸಿ ಬರುತ್ತಾನೆ, ನಾವು ಪ್ರೀತಿಯಿಂದ ನೀಡಿದ ಆಹಾರವನ್ನು ಸ್ವೀಕರಿಸುತ್ತಾನೆ ಎಂಬುದನ್ನು ಭಾವಿಸಿಕೊಳ್ಳಬೇಕು. ಶ್ರೀಮಾತೆಯವರು ಹೇಳುತ್ತಾರೆ, ''ಆತ್ಮೀಯವಾಗಿ ಕರೆದು ಹೇಳಬೇಕು, 'ಬನ್ನಿ, ಆಹಾರ ಸ್ವೀಕರಿಸಿ, ಊಟಕ್ಕೆ ಸಮಯವಾಯಿತು' ಅಂತ. ಭಗವಂತ ನಮ್ಮವನೇ ಅಲ್ಲವೆ?'' ಸ್ವತಃ ಶ್ರೀಮಾತೆಯವರೇ ಪೂಜೆ ಮಾಡುವಾಗ ಶ್ರೀರಾಮಕೃಷ್ಣರನ್ನು, ಗೋಪಾಲನನ್ನು ಹಾಗೆ ಕರೆಯುತ್ತಿದ್ದರು. ಇದು ಭಾವಪೂರ್ಣ ಪೂಜೆಯ ವಿಧಾನ. ಇಲ್ಲಿ ಮಂತ್ರ-ತಂತ್ರಗಳ ಭರಾಟೆಯಿಲ್ಲ; ವಿಧಿವಿಧಾನಗಳ ಅಡಚಣೆಯಿಲ್ಲ. ಭಕ್ತಿ ನಿರರ್ಗಳವಾಗಿ ಉಕ್ಕಿ ಹರಿಯುತ್ತದೆ. ಒಂದೆಡೆ ಅವರು ಹೇಳುತ್ತಾರೆ, ''ವೃಂದಾವನದ ಗೊಲ್ಲ ಹುಡುಗರು ಶ್ರೀಕೃಷ್ಣನನ್ನು ಜಪ-ಧ್ಯಾನಗಳಿಂದ ಪಡೆದರೆ? ಇಲ್ಲ, ಅವರು, 'ಬಾರೋ, ತಿನ್ನೋ; ಇದನ್ನು ತೊಗೊಳ್ಳೋ' – ಎನ್ನುತ್ತ, ಅಂಥ ಪ್ರೀತಿಯಿಂದ ತಮ್ಮ ಶ್ರೀಕೃಷ್ಣನನ್ನು ಪಡೆದರು.'' *(ಅಲ್ಲೇ, ಪು.೧೪೯)*

ಸ್ತ್ರೀಶಕ್ತಿಯ ಮರುಪ್ರತಿಷ್ಠಾಪನೆ

ಶ್ರೀಮಾತೆಯವರಿಗೆ ಶ್ರೀರಾಮಕೃಷ್ಣರೇ ಸರ್ವಸ್ವವಾಗಿದ್ದರು. ಎಲ್ಲ ದೇವದೇವಿಯರನ್ನೂ ಅವರಲ್ಲೇ ಕಂಡರು. ಆಧುನಿಕ ಜಗತ್ತಿಗೆ ಆಧ್ಯಾತ್ಮಿಕ ಆದರ್ಶವಾಗಿ ಶ್ರೀರಾಮಕೃಷ್ಣರ ಎರಕದಲ್ಲೇ ಸಾಧಕರು ಜೀವನವನ್ನು ರೂಪಿಸಿಕೊಳ್ಳಬೇಕೆಂದು ಶ್ರೀಮಾತೆಯವರು ಸ್ಪಷ್ಟವಾಗಿ ಹೇಳುತ್ತಾರೆ. ಸರ್ವಧರ್ಮ ಸಮಭಾವ, ಎಲ್ಲ ಯೋಗಗಳ ಸಮನ್ವಯ, ಶುದ್ಧ ತ್ಯಾಗಜೀವನ, ಎಲ್ಲಕ್ಕಿಂತ ಹೆಚ್ಚಾಗಿ ಭಗವಂತನಲ್ಲಿ ಶರಣಾಗತಿ — ಇವನ್ನು ಶ್ರೀರಾಮಕೃಷ್ಣರ ಆದರ್ಶಗಳಿಗೆ ಅನುಗುಣವಾಗಿ ಬೋಧಿಸಿದರು ಶ್ರೀಮಾತೆ. ಸ್ವಾಮಿ ಶಾರದಾನಂದರು ಹೇಳುವಂತೆ, ಶ್ರೀರಾಮಕೃಷ್ಣರ ಸಹಧರ್ಮಿಣಿಯಾಗಿದ್ದರೂ ಶ್ರೀಮಾತೆಯವರು ತಮ್ಮ ಸ್ವಂತಿಕೆ, ತಮ್ಮ ಜೀವನದ ವಿಶಿಷ್ಟತೆಯನ್ನು ವಿಭಿನ್ನವಾಗಿ ವ್ಯಕ್ತಪಡಿಸುತ್ತಾರೆ. ಅವರ ಮಾತೃಭಾವವು ಅಭಿವ್ಯಕ್ತಿಯ ಪರಾಕಾಷ್ಠೆಯನ್ನು ಹೊಂದಿದಾಗ, ಅದು ಶ್ರೀರಾಮಕೃಷ್ಣರ ಆದೇಶ, ಅಭಿಪ್ರಾಯಗಳನ್ನೂ ದಾಟಿ ಹೋಗುವುದು. ಆಧುನಿಕ ಜಗತ್ತಿಗೆ ಭಾರತದ ಕೊಡುಗೆ ಸ್ತ್ರೀಶಕ್ತಿಯ ಮರುಪ್ರತಿಷ್ಠಾಪನೆ ಎಂಬುದನ್ನು ಶ್ರೀಮಾತೆಯವರು ತಮ್ಮ ಉಜ್ವಲ ಆಧ್ಯಾತ್ಮಿಕ ಜೀವನದದಿಂದ ತೋರಿಸಿಕೊಟ್ಟಿದ್ದಾರೆ. ✷

ಡಿಸೆಂಬರ್ ತಿಂಗಳ ಕಾರ್ಯಕ್ರಮಗಳು

೮	ಶುಕ್ರವಾರ	ಏಕಾದಶಿ
೨೧	ಗುರುವಾರ	ಸ್ವಾಮಿ ಪ್ರೇಮಾನಂದ ಜಯಂತಿ
೨೩	ಶನಿವಾರ	ಏಕಾದಶಿ
೨೪	ಭಾನುವಾರ	ಕ್ರಿಸ್ಮಸ್ ಈವ್

ಸಂಸಾರದಲ್ಲಿ ಆಧ್ಯಾತ್ಮಿಕತೆ



✻ **ಭಕ್ತ:** ಮಹಾಶಯರೆ, ಸಂಸಾರಿ ಗಳಿಗೆ ಉಪಾಯವೇನು?

ಶ್ರೀರಾಮಕೃಷ್ಣರು: ಸಾಧುಸಂಗ ಮಾಡು ತ್ತಿರಬೇಕು; ಆಧ್ಯಾತ್ಮಿಕ ವಿಷಯಗಳನ್ನು ಸತತ ಕೇಳುತ್ತಿರಬೇಕು. ಅವರು ಕಾಮಕಾಂಚನದ ಮತ್ತಿನಿಂದ ಉನ್ಮತ್ತರಾಗಿದ್ದಾರೆ. ಉನ್ಮತ್ತನಿಗೆ ಅಕ್ಕಿ ತೊಳೆದ ನೀರನ್ನು ಸ್ವಲ್ಪಸ್ವಲ್ಪವಾಗಿ ಕೊಡುತ್ತ ಕೊಡುತ್ತ ಬಂದ ಹಾಗೆ ಕ್ರಮಕ್ರಮೇಣ ಸರಿ ಯಾದ ಪ್ರಜ್ಞೆ ಉಂಟಾಗಿಬಿಡುತ್ತದೆ.

✻ ಸಂಸಾರಿಯು ಸದ್ಗುರುವಿನಿಂದ ಉಪ ದೇಶ ಪಡೆಯಬೇಕು. ಸದ್ಗುರುವಿಗೆ ಲಕ್ಷಣಗಳಿವೆ. ಯಾರು ಕಾಶಿಗೆ ಹೋಗಿ ಅದನ್ನು ಚೆನ್ನಾಗಿ ನೋಡಿ ಬಂದಿರುವರೊ, ಅವರಿಂದ ಕಾಶಿಯ ವಿಷಯವಾಗಿ ತಿಳಿದುಕೊಳ್ಳಬೇಕು. ಬರೀ ಪುಸ್ತಕಪಾಂಡಿತ್ಯ ಯಾವ ಪ್ರಯೋಜನಕ್ಕೂ ಬಾರದು. ಯಾರಿಗೆ ಈ ಸಂಸಾರ ಅನಿತ್ಯ ಎಂಬ ಬೋಧೆಯಾಗಿಲ್ಲವೊ, ಅಂಥ ಪಂಡಿತನ ಉಪದೇಶ ಸ್ವೀಕರಿಸುವುದು ಯುಕ್ತವಾದುದಲ್ಲ. ಪಂಡಿತನು ವಿವೇಕ-ವೈರಾಗ್ಯಸಂಪನ್ನನಾಗಿದ್ದರೆ ತಾನೇ ಆತ ಉಪದೇಶ ಕೊಡಲು ಅರ್ಹನಾಗುತ್ತಾನೆ?

✻ ಪ್ರಾಪಂಚಿಕರು ಕಾಮಕಾಂಚನದಿಂದ ಮತ್ತರಾಗಿದ್ದಾರೆ; ಆಧ್ಯಾತ್ಮಿಕ ಭಾವನೆಗಳು ಅವರ ತಲೆಗೆ ಹೋಗವು. ಅದಕ್ಕಾಗಿಯೆ ನನಗೆ ಯುವಕರನ್ನು ಕಂಡರೆ ಬಲು ಪ್ರೀತಿ. ಅವರ ಅಂತರ್ಯ ವನ್ನು ಕಾಮಕಾಂಚನ ಇನ್ನೂ ಹೊಕ್ಕಿರುವುದಿಲ್ಲ. ಅವರು ಒಳ್ಳೆಯ ಪಾತ್ರೆ; ಭಗವಂತನ ಕೆಲಸಕಾರ್ಯಗಳಿಗೆ ಒದಗಬಹುದು. ಆದರೆ ಪ್ರಾಪಂಚಿಕರ ಅಂತರ್ಯದಲ್ಲಿರುವ ಕೆಲಸಕ್ಕೆ ಬಾರದ ವಸ್ತುಗಳನ್ನು ಬೇರ್ಪಡಿಸುತ್ತಾ ಹೋಯಿತು ಅಂದರೆ ಕೊನೆಗೆ ಅವರ ಅಂತರ್ಯವೇ ಖಾಲಿಯಾಗಿಬಿಡುತ್ತದೆ. ಕೊನೆಗೆ ಅವ ರನ್ನು ಒಂದು ವಿಧದ ಮೂಳೆಪ್ರಾಧಾನ್ಯವಾಗಿರುವ ಮೀನಿಗೆ ಹೋಲಿಸಬಹುದು. ಅದರಲ್ಲಿರುವ ಮಾಂಸದ ಭಾಗ ಅಷ್ಟು ಅಲ್ಪ, ಮಾಂಸ ಇಲ್ಲ ಅಂತಲೇ ಬೇಕಾದರೆ ಹೇಳಬಹುದು.

✻ ಯುವಕರಿಗೂ ಸಂಸಾರಿಗಳಿಗೂ ಇರುವ ಅಂತರವನ್ನು ನೀನೇ ನೋಡು. ಈ ಪಂಡಿತ ಹಗಲೂ ಇರುಳೂ ದುಡ್ಡು ಅನ್ನುತ್ತಲೇ ಇದ್ದಾನೆ. ಹೊಟ್ಟೆಗಾಗಿ ಕಲ್ಕತ್ತಕ್ಕೆ ಬಂದಿದ್ದಾನೆ; ಇಲ್ಲದೆ ಇದ್ದರೆ ಈತನ ಮನೆಯವರು ಹೊಟ್ಟೆ ತಾಳ ಹಾಕಬೇಕಾಗುತ್ತದೆ. ಅದಕ್ಕಾಗಿ ಈತ ಹಾಗೂ ಹೀಗೂ ಮಾಡಿ ಸಂಪಾದಿಸಬೇಕಾಗು ತ್ತದೆ. ಮನಸ್ಸನ್ನು ಏಕಾಗ್ರಮಾಡಿ ಭಗವಚ್ಚಿಂತನೆ ಮಾಡುವುದಕ್ಕೆ ಈತನಿಗೆ ಸಮಯವೆಲ್ಲಿ? ಆದರೆ ಯುವಕರ ಹೃದಯವನ್ನು ಕಾಮಕಾಂಚನ ಇನ್ನೂ ಸ್ಪರ್ಶಮಾಡಿಲ್ಲ; ಇಚ್ಛೆ ಪಟ್ಟರೆ ಅವರು ಭಗವಂತನ ಕಡೆ ಮನಸ್ಸನ್ನು ತಿರುಗಿಸಬಲ್ಲರು.

✻ ಕಾಮಕಾಂಚನದಲ್ಲಿ ಆಸಕ್ತವಾಗಿರುವ 'ಅಹಂ' ಮಾತ್ರ ಕೆಟ್ಟ 'ಅಹಂ'. ನಾನು ಭಗ ವಂತನ ದಾಸ ಎಂಬ 'ಅಹಂ' ಕೆಟ್ಟದೇನಲ್ಲ. ಬಾಲಕನ 'ಅಹಂ' ಕೂಡ ಕೆಟ್ಟದಲ್ಲ. ಆತ ಯಾವ ಗುಣಗಳಿಗೂ ವಶನಲ್ಲ. ಮಕ್ಕಳು ಈ ನಿಮಿಷ ಪರಸ್ಪರ ಜಗಳ ಕಾಯುತ್ತವೆ; ಮರು ನಿಮಿಷ ಒಂದಾಗುತ್ತವೆ. ಈ ಕ್ಷಣದಲ್ಲಿ ಬಹಳ ಕಷ್ಟಪಟ್ಟು ಆಟದ ಮನೆ ಕಟ್ಟುತ್ತವೆ; ಮರುಕ್ಷಣ ತಾವೇ ಅದನ್ನು ತುಳಿದುಹಾಕಿಬಿಡುತ್ತವೆ. ದಾಸನ 'ಅಹಂ' ಬಾಲಕನ 'ಅಹಂ' ಇವುಗಳಿಂದ ಯಾವ ಕೆಡುಕೂ ಸಂಭವಿಸದು. ಯಾವ ರೀತಿಯಾಗಿ ಕಲ್ಲುಸಕ್ಕರೆ ಸಿಹಿ ಪದಾರ್ಥಗಳ ಗುಂಪಿಗೆ ಸೇರಿಲ್ಲವೊ, ಅದೇ ರೀತಿಯಾಗಿ ಈ ವಿಧದ 'ಅಹಂ', 'ಅಹಂ' ಗುಂಪಿಗೆ ಸೇರಿಲ್ಲ. ಉಳಿದ ಸಿಹಿಪದಾರ್ಥಗಳು ಅನಾರೋಗ್ಯ ವನ್ನು ತರುತ್ತವೆ; ಆದರೆ ಕಲ್ಲುಸಕ್ಕರೆ ಆಮ್ಲಹಾರಿ. ಅಥವಾ ಇದು ಓಂಕಾರದ ಹಾಗೆ. ಅದು ಶಬ್ದಗಳ ಗುಂಪಿಗೆ ಸೇರಿಲ್ಲ.

✻ ಅಪ್ರಾಪ್ತ ವಯಸ್ಕನಿಗೆ ಮಾತ್ರ ರಕ್ಷಕನನ್ನು ನಿಯಮಿಸು ತ್ತಾರೆ. ಹುಡುಗ ತಾನೇ ತನ್ನ ಸ್ವತ್ತನ್ನು ಕಾಪಾಡಿಕೊಳ್ಳಲಾರ; ಆದ್ದರಿಂದ ದೊರೆ ಆತನ ಸಂರಕ್ಷಣೆಯ ಭಾರವನ್ನು ಹೊತ್ತು ಕೊಳ್ಳುತ್ತಾನೆ. ನಾವು ನಮ್ಮ ಅಹಂಕಾರವನ್ನು ತ್ಯಜಿಸದ ಹೊರತು ಭಗವಂತ ನಮ್ಮಗಳ ಭಾರವನ್ನು ಹೊತ್ತುಕೊಳ್ಳಲೊಲ್ಲ.

✻ ಭಗವಂತನೇ ಪ್ರತಿಯೊಂದನ್ನೂ ಮಾಡುತ್ತಿದ್ದಾನೆ. ನಾವು ಆತನ ಕೈಯ ಯಂತ್ರಗಳು ಮಾತ್ರ. ಕಾಳೀದೇವಾಲಯದ ಎದು ರಿಗೆ ಕೆಲವು ಸಿಖ್ ಮತದವರು ನನಗೆ ಹೇಳಿದರು, 'ಭಗವಂತ ದಯಾಮಯ' ಅಂತ. ನಾನು ಕೇಳಿದೆ, 'ಯಾರಿಗೆ ಆತ ದಯಾ ಮಯ?' ಅಂತ. ಅವರು ಹೇಳಿದರು, 'ಏಕೆ ಪೂಜ್ಯರೆ, ನಮ್ಮೆಲ್ಲ ರಿಗೂ' ಅಂತ. ನಾನು ಹೇಳಿದೆ, 'ನಾವೆಲ್ಲರೂ ಆತನ ಮಕ್ಕಳು. ಮಕ್ಕಳ ಮೇಲೆ ದಯೆ ತೋರಿಸುವುದು ಎಂದರೇನು? ಮಕ್ಕಳ ಯೋಗಕ್ಷೇಮ ನೋಡಿಕೊಳ್ಳುವುದು ತಂದೆಯ ಕರ್ತವ್ಯ; ಆತ ನೋಡಿಕೊಳ್ಳದೆ, ಪಕ್ಕದ ಕೇರಿಯವರು ಬಂದು ನೋಡಿಕೊಳ್ಳು ತ್ತಾರೇನು? ಒಳ್ಳೆಯದು, ಯಾರು ಭಗವಂತ ದಯಾಮಯ ಅಂತ ಹೇಳುತ್ತಾರೊ ಅವರ ತಲೆಗೆ, ತಾವು ಭಗವಂತನ ಮಕ್ಕಳೇ ವಿನಾ ಬೇರೆ ಯಾರ ಮಕ್ಕಳೂ ಅಲ್ಲ ಎಂಬ ಭಾವನೆ ಬರುತ್ತಿಲ್ಲ ವೇನು?'

'**ಶ್ರೀರಾಮಕೃಷ್ಣ ವಚನವೇದ**'ದಿಂದ

ನಮ್ಮ 'ಅತ್ತೆ' ಶ್ರೀಮಾತೆ

ಮೂಲ ಬಂಗಾಳಿ : **ಗೋಪಾಲಚಂದ್ರ ಮಂಡಲ್** ಅನುವಾದ : **ಸ್ವಾಮಿ ಜ್ಞಾನಯೋಗಾನಂದ**

ನಾನು ಈಗ ಹೇಳುತ್ತಿರುವುದು ೧೯೧೫ ರಿಂದ ೧೯೧೮ರ ನಡುವಿನ ಸಮಯದಲ್ಲಿ ನಡೆದ ವಿಷಯವನ್ನು ಕುರಿತು. ಆಗ ನಾನು ದೊಡ್ಡವನಾಗಿದ್ದೆ. ೧೬-೧೭ ವರ್ಷ ವಯಸ್ಸು. ಬಹುತೇಕ ಎಲ್ಲವೂ ನನಗೆ ನೆನಪಿನಲ್ಲಿದೆ. ಶ್ರೀಮಾತೆಯವರ ಹೊಸ ಮನೆಯ ನಿರ್ಮಾಣವಾದುದು ನನಗೆ ನೆನಪಿದೆ. ಶರತ್ ಮಹಾರಾಜ್ (ಸ್ವಾಮಿ ಶಾರದಾನಂದರು) ಜಯರಾಮಬಾಟಿಗೆ ಬಂದು, ಅಲ್ಲಿ ತಂಗಿದ್ದರು. ಮಾಸ್ಟರ್ ಮಹಾಶಯ (ಶ್ರೀ 'ಮ') ಅವರು ಕೂಡ ಬಂದಿದ್ದರು. ರಾಧುವಿನ ಕಥೆ, ಅವಳ ಗಂಡನ ವಿಷಯ ಎಲ್ಲವೂ ಚೆನ್ನಾಗಿ ನೆನಪಿದೆ. ಎಲ್ಲಕ್ಕಿಂತ ಹೆಚ್ಚಾಗಿ ಶ್ರೀಮಾತೆ ಶಾರದಾದೇವಿಯರು ನಮ್ಮ ಪಾಲಿಗೆ 'ಅತ್ತೆ'ಯಾಗಿದ್ದರು ಎಂಬ ವಿಷಯ ನೆನಪಾಗುವುದು.

ನಾವು ಶ್ರೀಮಾತೆಯವರನ್ನು 'ಅತ್ತೆ' ಎಂದೇ ಕರೆಯುತ್ತಿದ್ದೆವು. ನನ್ನ ತಾಯಿಯವರನ್ನು ಅವರು 'ಸೊಸೆ' ಎಂದು ಕರೆಯುತ್ತಿದ್ದರು; ಹಾಗೂ ನನ್ನ ಅಜ್ಜಿಯನ್ನು 'ಚಿಕ್ಕಮ್ಮ' ಎಂದು ಕರೆಯುತ್ತಿದ್ದರು. ನನ್ನ ತಂದೆ ಭೂಷಣ ಮಂಡಲ್ ಅವರು ವಯಸ್ಸಿನಲ್ಲಿ ಶ್ರೀಮಾತೆಯವರಿಗಿಂತ ತುಸು ಚಿಕ್ಕವರಾಗಿದ್ದರು. ನನ್ನ 'ಅತ್ತೆ'ಯನ್ನು ನನ್ನ ತಂದೆ 'ಅಕ್ಕ' ಎಂದೇ ಕರೆಯುತ್ತಿದ್ದರು. ನನ್ನ ಅಜ್ಜಿ ಸತ್ಯಭಾಮಾ ಮಂಡಲ್, ನನ್ನ 'ಅತ್ತೆ'ಯನ್ನು ದಕ್ಷಿಣೇಶ್ವರಕ್ಕೆ ಕರೆದುಕೊಂಡು ಹೋಗುತ್ತಿದ್ದರು. 'ಅತ್ತೆ' ಕೂಡ ಜಯರಾಮಬಾಟಿಯಿಂದ ಕಾಮಾರಪುಕುರ ಅಥವಾ ಶಿಹೋರ್‌ಗೆ ಹೋಗುವಾಗ ನನ್ನ ಅಜ್ಜಿಯನ್ನು ಜೊತೆಯಲ್ಲಿ ಕರೆದುಕೊಂಡು ಹೋಗುತ್ತಿದ್ದರು. ಅತ್ತೆಯವರ ಹೊಸ ಮನೆಯ ಪಕ್ಕದಲ್ಲಿದ್ದ 'ಪುಣ್ಯಪುಕುರ' ಕೆರೆಯ ತೀರದಲ್ಲೇ ನಮ್ಮ ಮನೆಯಿದ್ದುದು. ಅತ್ತೆಯವರ ವಿಚಾರವಾಗಿ ನಮಗೆ ಏನೊಂದೂ ಅರ್ಥವಾಗುತ್ತಿರಲಿಲ್ಲ; ಅವರು ಏನನ್ನೂ ಬಿಟ್ಟುಕೊಡುತ್ತಿರಲಿಲ್ಲ. ಅನಂತರ ನಮಗೆ ತಿಳಿಯಿತು, ಅಷ್ಟು ಸರಳವಾಗಿ ಇರುವುದೂ ಸಾಮಾನ್ಯರ ಕೈಯಲ್ಲಿ ಸಾಧ್ಯವಿಲ್ಲದ ಮಾತು ಎಂದು. ಅವರ ಜೀವನದ ಸಾಮಾನ್ಯ ಘಟನೆಗಳನ್ನು ಕೂಡ ಈಗ ನೆನಪಿಸಿಕೊಂಡರೆ, ಅವೆಲ್ಲ ಅಸ್ವಾಭಾವಿಕವೆಂದೇ ಅನ್ನಿಸುತ್ತದೆ. ಅವರಂತೂ ಮನುಷ್ಯರಲ್ಲ. ಆದ್ದರಿಂದಲೇ ಅವರು ಅಷ್ಟೊಂದು ನಿರಾಡಂಬರದಿಂದ, ಅತ್ಯಂತ ಸಹಜವಾಗಿ ಸರಳ ಜೀವನವನ್ನು ನಡೆಸಿಕೊಂಡು ಹೋಗುವುದಕ್ಕೆ ಸಾಧ್ಯವಾಯಿತು!



ಅವರು ನಮ್ಮ ಮನೆಗೆ ಅನೇಕ ಬಾರಿ ಬಂದು ಹೋಗುತ್ತಿದ್ದರು. ಊಟ ಇತ್ಯಾದಿಗಳೆಲ್ಲ ಮುಗಿದ ಮೇಲೆ, ಸಂಜೆ ಹೊತ್ತು ಕೆಲವೊಮ್ಮೆ ಬರುತ್ತಿದ್ದರು. ನನ್ನ ತಾಯಿ, ಅಜ್ಜಿಯವರೊಂದಿಗೆ ಮಾತುಕತೆ ನಡೆಸುತ್ತಿದ್ದರು. ಒಂದೊಂದು ಬಾರಿ, ಹಠಾತ್ತಾನೆ ಕಲ್ಕತ್ತೆಯಿಂದ ನಾಲ್ಕು-ಐದು ಜನ ಭಕ್ತರು ಬಂದುಬಿಡುತ್ತಿದ್ದರು. 'ಅತ್ತೆ'ಯವರು ಬಂದು ನನ್ನ ತಾಯಿಗೆ ಹೇಳುತ್ತಿದ್ದರು: ''ಅಮ್ಮಾ, ಸೊಸೆ, ಸ್ವಲ್ಪ ಸೊಪ್ಪು-ತರಕಾರಿ ಇದ್ದರೆ ಕೊಡು. ದೂರದ ಊರಿನಿಂದ ನಾಲ್ಕೈದು ಜನ ನನ್ನ ಮಕ್ಕಳು (ಶಿಷ್ಯಂದಿರು) ಬಂದಿದ್ದಾರೆ.'' ನನ್ನ ತಾಯಿ ಅವಸರವಾಗಿ ಆಲೂಗಡ್ಡೆ, ಹೀರೇಕಾಯಿ, ಕುಂಬಳಕಾಯಿ - ಹೀಗೆ ಏನಿತ್ತೋ ಅದನ್ನು ತಂದು ಕೊಡುತ್ತಿದ್ದರು. ಒಂದು ದಿನ ಸಾಯಂಕಾಲ ನಾನು ಸೋರೆಕಾಯಿಯನ್ನು ಕೊಯ್ದು ತಂದು ಶ್ರೀಮಾತೆಯವರಿಗೆ ಕೊಟ್ಟಿದ್ದೆ-

ನನಗದು ನೆನಪಿದೆ. ಅವರು ಹೇಗೆ ಸಾಮಾನ್ಯ ಸಂಗತಿಯನ್ನು ಅಸಾಮಾನ್ಯಗೊಳಿಸಿ ತಮ್ಮಂದಿರ ಸಂಸಾರವನ್ನು ಬೆಳಗುತ್ತಿದ್ದರೋ, ಅದೇ ರೀತಿ ಅವರು ಯಾವ ಭಕ್ತರಿಗೂ ಸಂಸಾರವೆಂಬುದು ಬಂಧನವೆಂದು ತಿಳಿಯಹೇಳುತ್ತಿರಲಿಲ್ಲ.'ಅತ್ತೆ'ಯವರ ತಮ್ಮಂದಿರ ಸಂಸಾರವೋ, ತುಂಬಾ ದೊಡ್ಡದು. ಅನೇಕ ಮಕ್ಕಳು ಮಂದಿ. ಆದರೆ ತಮ್ಮಂದಿರ ಕೆಲಸ, ಉದ್ಯೋಗ ಹೇಳುವಷ್ಟೇನೂ ಚೆನ್ನಾಗಿರಲಿಲ್ಲ.

ಶ್ರೀಮಾತೆಯವರ ಪ್ರೀತಿ, ಮಮತೆ ಇವು ಮನುಷ್ಯರ ಮೇಲೆ ಮಾತ್ರವಲ್ಲದೆ ಪ್ರಾಣಿಪಕ್ಷಿಗಳ ತನಕವೂ ವ್ಯಾಪಿಸಿತ್ತು. ಅವರ ಗಿಣಿ ಗಂಗಾರಾಮನ ವಿಷಯವಾಗಿ ಅವರ ಜೀವನ ಚರಿತ್ರೆಯಿಂದ ಎಲ್ಲರೂ ಓದಿ ತಿಳಿದಿದ್ದಾರೆ. ಅವರ ಬಳಿ ಅನೇಕ ಬೆಕ್ಕುಗಳೂ ಇದ್ದವು. ಐದು–ಆರು ಇದ್ದಿರಬಹುದು. 'ಅತ್ತೆ' ಯವರು ಊಟಕ್ಕೆ ಕುಳಿತಾಗ ಅವರ ಬಳಿ ಈ ಬೆಕ್ಕುಗಳು ಕುಳಿತಿರುತ್ತಿದ್ದವು. 'ಅತ್ತೆ'ಯವರ ಊಟವಾದ ನಂತರ, ಅವುಗಳ ಎಲೆಗೂ ಅನ್ನ ಬಡಿಸುತ್ತಿದ್ದರು. ಅವುಗೆಳೆಂತಹ ಭಾಗ್ಯಶಾಲಿಗಳು! 'ಅತ್ತೆ'ಯವರ ಬಳಿ ನಾಲ್ಕು ಎತ್ತುಗಳಿದ್ದವು – ಮಹಂತ, ಮಹಾರಾಜ್, ಲಕ್ಷ್ಮೀಕಾಂತ ಹಾಗೂ ಇಂದ್ರರಾಜ. ಅವರು ಸಂಸಾರದ ಎಲ್ಲ ಕೆಲಸಗಳ ನಡುವೆಯೂ ಒಂದು ಬಾರಿ ದನಕರುಗಳ ಬಗ್ಗೆ ಕಾಳಜಿ ವಹಿಸಿ ನೋಡಿಕೊಳ್ಳುತ್ತಿದ್ದರು. ಅನ್ನದ ಗಂಜಿಯನ್ನು ಕುಡಿಸುವಂತೆ, ಅವುಗಳ ಬಳಿಗೆ ಬಂದು, ಬಳಿಕ ಅವುಗಳ ಕುತ್ತಿಗೆ, ಕೆನ್ನೆ ಇವನ್ನೆಲ್ಲ ಕೈಯಿಂದ ತಡವುತ್ತಿದ್ದರು. ಒಂದೊಂದು ಬಾರಿ ಅವುಗಳ ಕೋಡುಗಳಿಗೆ ಎಣ್ಣೆ ಹಚ್ಚುತ್ತಿದ್ದರು.

ದನಕರುಗಳನ್ನು ನೋಡಿಕೊಳ್ಳಲು ಇದ್ದ ಹುಡುಗನ ಹೆಸರು ದೀನೂ ಎಂದು. ಅವನು ನಮ್ಮ ವಯಸ್ಸಿನವನೇ. ಅವನು ಇಂದು ಬದುಕಿದ್ದರೆ, ಅವನಿಂದ ಎಲ್ಲರೂ 'ಅತ್ತೆ'ಯವರ ಬಗ್ಗೆ ಅನೇಕ ವಿಷಯಗಳನ್ನು ಕೇಳಿ ತಿಳಿಯಬಹುದಾಗಿತ್ತು. 'ಅತ್ತೆ' ಯವರಿಗೆ ಅವನ ಮೇಲೆ ತುಂಬಾ ಪ್ರೀತಿ. ದೀನುವಿನ ಬಗ್ಗೆ ಒಂದು ಘಟನೆ ನೆನಪಿಗೆ ಬರುತ್ತದೆ. ಅವನು ಬೆಳಿಗ್ಗೆ ತಿಂಡಿ ಮಾಡಿದ ಬಳಿಕ, ಎಂಟು ಗಂಟೆಯ ಸುಮಾರಿಗೆ ದನಗಳನ್ನು ಬಯಲಿನ ಕಡೆಗೆ ಮೇಯಿಸಲು ಕೊಂಡೊಯ್ಯುತ್ತಿದ್ದ. ಸುಮಾರು ಒಂದು ಘಂಟೆಯ ಹೊತ್ತಿಗೆ ಮರಳುತ್ತಿದ್ದ. ಬಳಿಕ ದನಗಳನ್ನು ಕಟ್ಟಿಹಾಕಿ, ಸ್ನಾನ ಮಾಡಿ ಬಂದು ಊಟ ಮಾಡುತ್ತಿದ್ದ. 'ಅತ್ತೆ' ಯವರು ಎಲ್ಲರ ಊಟ ಮುಗಿದಿದ್ದರೂ, ದೀನುವಿಗಾಗಿ ಕಾದು ಕುಳಿತಿರುತ್ತಿದ್ದರು. ಒಂದು ದಿನ ದೀನೂ ಬರಲು ತುಂಬ ತಡವಾಗಿಬಿಟ್ಟಿತು. ಅವನು ಬಯಲಿಗೆ ಹೋಗಿ, ಉಳಿದ ದನ ಕಾಯುವ ಹುಡುಗರೊಂದಿಗೆ ಗೋಲಿ ಆಟ ಆಡುತ್ತಿದ್ದ. ಅಂದು ಆಟವಾಡುತ್ತಲೇ ಇದ್ದವನು, ಮರಳುವಾಗ ತುಂಬ ತಡವಾಗಿಬಿಟ್ಟಿತು. ಅತ್ತೆಯವರು ತುಂಬಾ ಹೊತ್ತು ಕಾದು ಕುಳಿತ್ತಿದ್ದು, ಆಗಲೇ ಮೂರು ಗಂಟೆ ಆಗಿಬಿಟ್ಟಿತ–ಮನೆಯ ಹೆಣ್ಣುಮಕ್ಕಳೆಲ್ಲ ಒತ್ತಾಯಿಸಿದಾಗ, ದೀನುವಿಗಾಗಿ ಊಟವನ್ನು ಮುಚ್ಚಿ ಇಟ್ಟು, ಎಲ್ಲರೂ ಜೊತೆಗೆ ಊಟಕ್ಕೆ ಕುಳಿತರು. ಆಗಲಷ್ಟೇ ದೀನು ಮರಳಿದ. ಅವನನ್ನು ನೋಡಿದ ಅತ್ತೆಯವರು ಹೇಳಿದರು, ''ಏನು ಮಗೂ, ಇಷ್ಟು ತಡ ಮಾಡಿಬಿಟ್ಟೆಯಲ್ಲ! ನೋಡು ಅವರೆಲ್ಲ ಒತ್ತಾಯ ಮಾಡಿ ನನ್ನನ್ನು ಊಟಕ್ಕೆ ಕುಳ್ಳಿರಿಸಿದರು. ನಿನ್ನ ಊಟವನ್ನು ನಾನು ಮುಚ್ಚಿಟ್ಟಿದ್ದೇನೆ. ನೀನು ಸ್ನಾನ ಮಾಡಿ ಬಂದು, ಮುಚ್ಚಿದ ತಟ್ಟೆಯನ್ನು ತೆಗೆದುಕೊಂಡು ಊಟ ಮಾಡಿಕೋ.'' ದೀನೂ ಬೇಗನೇ ಸ್ನಾನ ಮಾಡಿ ಬಂದು ಊಟಕ್ಕೆ ಕುಳಿತ; ಅತ್ತೆ ಕೂಡ ಊಟ ಮಾಡತೊಡಗಿದರು. ದೀನುವಿನ ಊಟ ಸುಮಾರಾಗಿ ಮುಗಿಯುತ್ತ ಬಂದಿತ್ತು. ಅತ್ತೆ ಹೇಳಿದರು, ''ಮಗೂ ದೀನು, ಇನ್ನೂ ಸ್ವಲ್ಪ ಅನ್ನ ಹಾಕಿಸಿಕೊಳ್ಳುತ್ತೀಯಾ'' ದೀನೂ ತಡವರಿಸಲಾರಂಭಿಸಿದ. ಏಕೆಂದರೆ ಅತ್ತೆ ಊಟಮಾಡುತ್ತಿದ್ದಾರೆ, ಅನ್ನ ಬಡಿಸಲು ಪಕ್ಕದಲ್ಲಿ ಬೇರೆ ಯಾರೂ ಇರಲಿಲ್ಲ. ಅತ್ತೆಯವರ ಊಟ ಇನ್ನೂ ಮುಗಿದಿಲ್ಲ. ಅವರಿಗೆ ವಯಸ್ಸಾಗಿದೆ, ಬಾಯಲ್ಲಿ ಹಲ್ಲುಗಳಿಲ್ಲ. ಹೀಗಾಗಿ ಅವರ ಊಟ ನಿಧಾನವಾಗುತ್ತಿದೆ. ಅವನ ಗೊಂದಲ ತಿಳಿದು ಅತ್ತೆ ದೀನೂಗೆ ಹೇಳಿದರು: ''ಮಗೂ, ತಟ್ಟೆಯನ್ನು ಇತ್ತ ತೆಗೆದುಕೊಂಡು ಬಾ ಮತ್ತೆ.'' ದೀನು ತಟ್ಟೆಯನ್ನು ಹತ್ತಿರಕ್ಕೆ ತಂದ. ಅತ್ತೆಯವರು ತಮ್ಮ ತಟ್ಟೆಯಿಂದ ಸ್ವಲ್ಪ ಅನ್ನವನ್ನು ದೀನುವಿನ ತಟ್ಟೆಗೆ ಹಾಕಿದರು. ದೀನೂ ಅದನ್ನು ಅತ್ಯಂತ ತೃಪ್ತಿಯಿಂದ ಊಟ ಮಾಡಿದ. ಮರುದಿನ ಅತ್ತೆಯವರು ಏಕಾಂತದಲ್ಲಿ ಸಿಕ್ಕಿದಾಗ ದೀನೂ ಕೇಳಿದ: ''ಅಲ್ಲಮ್ಮಾ, ಒಂದು ಮಾತು ಕೇಳಲೆ?'' ಅತ್ತೆ ಹೇಳಿದರು: ''ಹೇಳಲ್ಲ ಮತ್ತೆ, ಅದೇನು ಹೇಳುತ್ತೀಯೋ!''

ದೀನೂ : ''ಅಮ್ಮಾ ನಿಮಗೆ ಅಡುಗೆ ಬೇರೆ ಮಾಡುತ್ತೀರಾ? ನಮ್ಮ ಅಡುಗೆ ಬೇರೆ ಮಾಡಲಾಗುತ್ತದೆಯೆ?''

ಅತ್ತೆ : ''ಅದೇನು ಮಗೂ? ಇದೇಕೆ ಹೀಗೆ ಕೇಳುತ್ತೀಯಾ?''

ದೀನೂ : ''ಹಾಗಿದ್ದರೆ ನಿನ್ನೆ ನಿಮ್ಮ ತಟ್ಟೆಯಿಂದ ಕೊಟ್ಟ ಅನ್ನ ಅಷ್ಟೊಂದು ಚೆನ್ನಾಗಿತ್ತಲ್ಲ, ಏಕೆ? ಅಂಥ ಅನ್ನವನ್ನು ನಾನು ಜೀವನದಲ್ಲಿ ಎಂದಿಗೂ ತಿಂದಿಲ್ಲಮ್ಮಾ.''

ಅತ್ತೆ : ''ಇಲ್ಲ ಮಗೂ! ಒಂದೇ ಪಾತ್ರೆಯಲ್ಲಿ ಅನ್ನ ಬೇಯಿಸುತ್ತೇವೆ. ನಿಮಗೆ ಯಾವ ಪಾತ್ರೆಯಿಂದ ಅನ್ನ ಬಡಿಸಿದೆವೋ, ಅದೇ ಪಾತ್ರೆಯಿಂದಲೇ ನಾನೂ ಅನ್ನ ಹಾಕಿಸಿಕೊಂಡೆ.''

ಅತ್ತೆಯವರು ತಮ್ಮ ದೈವೀ ಮಹಿಮೆಯನ್ನು ಅಡಗಿಸಿಟ್ಟುಕೊಂಡರು. ಅವರ ಪ್ರಸಾದವಾಗಿ ಸ್ವೀಕರಿಸಿದ ಅನ್ನ ಅಮೃತಕ್ಕೆ ಸಮಾನ ಎಂಬುದು ಪಾಪ, ದೀನುವಿಗೆ ಹೇಗೆ ಅರ್ಥವಾಗಬೇಕು! ದೀನುವಂತೂ ಮಹಾ ಭಾಗ್ಯವಂತ – ಅವರ ಮಹಾ ಪ್ರಸಾದವನ್ನೇ ಪಡೆದನಲ್ಲ!

ಅತ್ತೆಯವರು ಜಾತ್ರಾ(ನಾಟಕ) ನೋಡುವುದನ್ನು ಬಹಳ ಇಷ್ಟಪಡುತ್ತಿದ್ದರು. ಆ ದಿನಗಳಲ್ಲಿ ಹಳ್ಳಿಗಳಲ್ಲಿ ಇಂದಿನಂತೆ ರೇಡಿಯೋ ಅಥವಾ ಸಿನಿಮಾ ಇತ್ಯಾದಿಗಳು ಇರಲಿಲ್ಲ. ಹೀಗಾಗಿ ಹಳ್ಳಿಯಲ್ಲಿ ಏನಾದರೂ ಹಬ್ಬಹರಿದಿನಗಳು ಇದ್ದಾಗ, ಬಾವುಲ್ ಹಾಡು, ತರಜಾ (ಆಶುಕವಿತೆ-ಹಾಡುಗಳ ಸ್ಪರ್ಧೆ), ಜಾತ್ರಾ, ರಾಮಾಯಣ ಗಾನ, ಚಬ್ಬಿಶ್ ಪ್ರಹರ್, ಮನಸಾರ್ ಪಾಂಚಾಲಿ ಇತ್ಯಾದಿಗಳು ನಡಯುತ್ತಿದ್ದವು. 'ಚಬ್ಬಿಶ್ ಪ್ರಹರ್' (೨೪ ಗಂಟೆಗಳು)ನಲ್ಲಿ ಭಾಗವತದ ಕಥೆ ನಡೆಸಿಕೊಡಲು ನದಿಯಾ ಜಿಲ್ಲೆಯ ನಾರಾಯಣಪುರದ ತಂಡ, ಪಶ್ಚಿಮದ ರಾಮಡಿಯಾ ತಂಡ ಹಾಗೂ ಬರಣಡಂಗಾದ ತಂಡಗಳು ಬರುತ್ತಿದ್ದವು. ಜ್ಯೇಷ್ಠಮಾಸದಲ್ಲಿ ಹಳ್ಳಿಯಲ್ಲಿ ಶೀತಲಾಮಾತೆಯ ಪೂಜೆ ನಡೆಯುತ್ತಿತ್ತು. ಆಗ 'ಚಬ್ಬಿಶ್ ಪ್ರಹರ್' ಅಥವಾ ಜಾತ್ರಾ ನಡೆಯುತ್ತಿತ್ತು. ಆಶ್ವೀಜ-ಕಾರ್ತಿಕ ಮಾಸದಲ್ಲಿ ಸಿಂಹವಾಹಿನೀದೇವಿಯ ಮಂದಿರದಲ್ಲಿ ರಾಮಾಯಣ ಗಾನ ಹಾಗೂ ಜಾತ್ರಾ ನಡೆಯುತ್ತಿತ್ತು. ರಾಮಾಯಣ ಗಾನ ಮಾಡಲು ಪುಕುರಿಯಾದ ಬಾಂಕೂ ಘೋಷಾಲ್ ಹಾಗೂ ಭುರಸುವೋದ ಸತೀಶ ಆಚಾರ್ಯ ಬರುತ್ತಿದ್ದರು. ಅವರಿಗೆ ಅತ್ತೆಯವರ ಮೇಲೆ ಅತ್ಯಂತ ಶ್ರದ್ಧಾಭಕ್ತಿಗಳಿದ್ದವು. ಎರಡು ಬಗೆಯ ಜಾತ್ರಾ ನಡೆಯುತ್ತಿತ್ತು-ಕೃಷ್ಣ ಜಾತ್ರಾ ಹಾಗೂ ಸಾಧಾರಣ ಜಾತ್ರಾ. ಕೃಷ್ಣ ಜಾತ್ರಾ ನಡೆಸಿಕೊಡಲು ಸಿಹೋರ್‌ನ ರಾಮಭುತೋರ್‌ನ ತಂಡ, ಹಾಗೂ ಬೇಜೋ ಸಂತೋಷಪುರದ ನಳಿನೀ ಮಂಡಲ್ ಹಾಗೂ ಅನುಕೂಲ ಮಂಡಲ್ ಇವರ ತಂಡ ಬರುತ್ತಿದ್ದವು. ಹಲವು ಬಾರಿ ಜಗದ್ಧಾತ್ರೀ ಪೂಜೆಯ ಸಮಯದಲ್ಲಿ ಕೃಷ್ಣಜಾತ್ರಾ ನಡೆದುದನ್ನು ನಾನು ನೋಡಿದ್ದೇನೆ. ನನಗೆ ನೆನಪಿರುವಂತೆ, ಜಾತ್ರೆಯ ವಿಷಯಗಳು ಹೆಚ್ಚಾಗಿ ಪ್ರಹ್ಲಾದ ಚರಿತೆ, ಧ್ರುವಚರಿತೆ, ನಿಮಾಯಿ ಸಂನ್ಯಾಸ, ನವಾಬ ಸಿರಾಜದ್ದೌಲ ಇತ್ಯಾದಿ ಇರುತ್ತಿದ್ದವು.

ಸಾಧಾರಣ ಜಾತ್ರೆಗಾಗಿ ಕುಮುಡಸೇ-ಕಾನ್ಪುರದ ತಂಡ, ರಾಮಜೀವನಪುರದ ತಂಡ, ಬಗಛಡಿಯ ತಂಡ ಇತ್ಯಾದಿಗಳು ಬಂದು ಜಯರಾಮಬಾಟಿಯಲ್ಲಿ ಜಾತ್ರೆ ಮಾಡಿದ್ದವು. ಜಗದ್ಧಾತ್ರೀಪೂಜೆಯ ಸಮಯದಲ್ಲಿ ಬಾವುಲ್ ಹಾಡು ಹಾಗೂ ತರಜಾ ನಡೆಯುತ್ತಿದ್ದವು. ಬಾವುಲ್ ಹಾಡನ್ನು ಹಾಡಲು ಕ್ಷುದಿರಾಮ ಗೋದ್ ಹಾಗೂ ಸಾಥವೇಡೆಯ ಲಾಲೂ ಜೇಲೇ ಬರುತ್ತಿದ್ದರು. ಅತ್ತೆಯವರಿಗೆ ಲಾಲೂ ಮೇಲೆ ತುಂಬಾ ಪ್ರೀತಿ. ಸಾತವೇಡೆಯ ಪಾಂಚೂರಾಯ್, ಮುಯಿದಾಡಾದ ಮೃಗೇಂದ್ರ ಧಾಡಾ ಮುಂತಾದವರು ತರಜಾ ಹಾಡುತ್ತಿದ್ದರು. ಮಾನಸಾದೇವಿಯ ಮಂದಿರದಲ್ಲಿ ನಡುನಡುವೆ ಮನಸಾ ಪಾಂಚಾಲೀ ಗಾನ ಹಾಗೂ ಮನಸಾ ಭಾಸಾನದ ಹಾಡು ನಡೆಯುತ್ತಿತ್ತು. ಆ ತಂಡಗಳ ಹೆಸರು ನೆನಪಿಲ್ಲ; ಆದರೆ ಬೆಂಗಾಯಿ ಊರಿನ ಪಾಂಚಾಲಿ ತಂಡ ಎಂದು ಜನರು ಹೇಳುತ್ತಿದ್ದರು. ಚಿಕ್ಕಂದಿನಲ್ಲಿ ಅತ್ತೆ ಹಲವು ಬಾರಿ ಜಾತ್ರಾ, ರಾಮಾಯಣಗಾನ, ಬಾವುಲ್ ಹಾಡು, ತರಜಾ ಇತ್ಯಾದಿಗಳನ್ನೆಲ್ಲ ಕೇಳುತ್ತಿದ್ದುದ್ದನ್ನು ನಾನು ಕಂಡಿದ್ದೇನೆ. ಆ ಸಮಯದಲ್ಲೆಲ್ಲ ನೀರಿನ ಹೂಜಿ, ವೀಳೆಯದ ಡಬ್ಬ ಅವರೊಂದಿಗೆ ಇರುತ್ತಿದ್ದವು. ಕಾರ್ಯಕ್ರಮವನ್ನು ಪೂರ್ತಿಯಾಗಿ ನೋಡಿದ ಮೇಲೆ ಅವರು ಮನೆಗೆ ಮರಳುತ್ತಿದ್ದರು. ಆ ಕಾಲದಲ್ಲಿ ಹೆಚ್ಚಾಗಿ ಈ ಕಾರ್ಯಕ್ರಮಗಳೆಲ್ಲ ರಾತ್ರಿ ಹೊತ್ತಿನಲ್ಲೇ ಆರಂಭವಾಗುತ್ತಿದ್ದವು. ನಸುಕಿನಲ್ಲಿ ಕೊನೆಗೊಳ್ಳುತ್ತಿದ್ದವು. ರಾತ್ರಿಯೆಲ್ಲ ಎಚ್ಚರವಿದ್ದು ಜಾತ್ರಾ ನೋಡಿದ್ದರೂ, ಬೆಳಗಿನ ಹೊತ್ತು ಸರಿಯಾದ ಸಮಯಕ್ಕೆ ಅವರು ಎದ್ದುಬಿಡುತ್ತಿದ್ದರು; ನಿತ್ಯಪೂಜೆ ಹಾಗೂ ಸಂಸಾರದ ಕೆಲಸಗಳನ್ನು ಮಾಡುತ್ತಿದ್ದರು.

ಅತ್ತೆಯವರ ಎಲ್ಲ ಸೊಸೆಯಂದಿರನ್ನು ಹಾಗೂ ಅವರ ಗಂಡಂದಿರನ್ನು ನಾನು ನೋಡಿದ್ದೇನೆ. ರಾಧುವಂತೂ ಅತ್ತೆಯವರಿಗೆ ಸಾಕಷ್ಟು ಕಾಟ ಕೊಟ್ಟುಬಿಟ್ಟಳು. ಅದನ್ನು ನೋಡಿ ನಮಗೆಲ್ಲ ತುಂಬ ಸಂಕಟವಾಗುತ್ತಿತ್ತು. ಕೋಪವೂ ಬರುತ್ತಿತ್ತು. ಲಲಿತ ಬಾಬು[○], ಶರತ್ ಮಹಾರಾಜ್, ಮಾಸ್ಟರ್ ಮಹಾಶಯ ಇವರೆಲ್ಲ ಬಂದಾಗ ಜಯರಾಮಬಾಟಿಯಲ್ಲಿ ಎಂಥ ಆನಂದದ ಜಾತ್ರೆ ನಡೆಯುತ್ತಿತ್ತು! ಈಗಂತೂ ಕಲ್ಕತ್ತಾದಿಂದ ಪ್ರತಿದಿನವೂ ಎಷ್ಟೋ ಮಂದಿ ಭಕ್ತರು ಜಯರಾಮ ಬಾಟಿಗೆ ಬರುತ್ತಿದ್ದಾರೆ. ಆದರೆ ಆಗಿನ ಕಾಲದಲ್ಲಿ ಪರಿಸ್ಥಿತಿ ಬೇರೆಯಾಗಿತ್ತು. ಮೊದಮೊದಲು ಅತ್ತೆಯವರ ಮನೆಯಲ್ಲಿ ದನಕರುಗಳಿರಲಿಲ್ಲ. ಕಲ್ಕತ್ತೆಯಿಂದ ಭಕ್ತರು ಬಂದರೆ ಚಹಾ ಮಾಡಬೇಕಿತ್ತು-ಅದಕ್ಕೆ ಹಾಲು ಬೇಕು. ಆಗ ಅತ್ತೆ ಗಯಲಾಪಾಡಾಗೆ ಓಡಿ ಹೋಗುತ್ತಿದ್ದರು. ಲಬೂನಾಗ್, ಶ್ರೀರಾಮನಾಗ್, ಬಿಹಾರಿ ಮಾಲ್ - ಇವರೆಲ್ಲ ಹಾಲಿನ ವ್ಯಾಪಾರ ಮಾಡುತ್ತಿದ್ದರು. ಗಯಲಾದ ಸೊಸೆ ಆಹ್ಲಾದಿನಿ, ನಯನಾ ಇವರೆಲ್ಲ ಅತ್ತೆಯವರನ್ನು 'ಮಾ-ಠಾಕೂರನ್'('ಶ್ರೀಮಾತೆ' ಅಥವಾ 'ಜಗನ್ಮಾತೆ' ಎಂದರ್ಥ) ಎಂದು ಕರೆಯುತ್ತಿದ್ದರು. ಗಯಲಾದ ಸೊಸೆಯರೊಂದಿಗೆ ಅತ್ತೆಯವರು ತುಂಬಾ ಅನ್ಯೋನ್ಯವಾಗಿದ್ದರು. ಅವರಲ್ಲಿ ದನಗಳು ಕರು ಹಾಕಿಬಿಟ್ಟರೆ, ಅವರು ಅತ್ತೆಯವರ ಮನೆಯಲ್ಲಿ ಶ್ರೀರಾಮಕೃಷ್ಣರ ನೈವೇದ್ಯ ಮಾಡಲು ಹಾಲು ತಂದುಕೊಡುತ್ತಿದ್ದರು. ಇದ್ದಕ್ಕಿದ್ದಂತೆ ಹಾಲು ಬೇಕಾಗಿ ಬಂದರೆ ಅತ್ತೆಯವರಿಗೆ ಯಾರೂ ಇಲ್ಲವೆನ್ನುತ್ತಿರಲಿಲ್ಲ. ಅವರ ತಮ್ಮಂದಿರು ಅಥವಾ ಅವರ ಮಕ್ಕಳಿಗೆ ಯಾರೂ ಏನನ್ನೂ ಸಾಮಾನ್ಯವಾಗಿ ಕೊಡುತ್ತಿರಲಿಲ್ಲ. ಅವರೆ

○ ಲಲಿತ ಮೋಹನ ಚಟ್ಟೋಪಾಧ್ಯಾಯ. ಅವನು ಹಾಗೂ ಅವನ ಪತ್ನಿ ಶ್ರೀಮಾತೆಯವರಿಂದ ಮಂತ್ರದೀಕ್ಷೆ ಪಡೆದು ಅವರ ಶಿಷ್ಯರಾಗಿದ್ದರು. ಶ್ರೀಮಾತೆಯವರ ಸೇವೆಗೆ ಅವನು ಯಾವಾಗಲೂ ಕಾತರನಾಗಿರುತ್ತಿದ್ದ. ಶ್ರೀಮಾತೆಯವರಿಗೆ ಮೊದಲ ಬಾರಿಗೆ ಗ್ರಾಮೋಫೋನ್ ಕೇಳಿಸಲೆಂದು ಅದನ್ನು ಜಯರಾಮಬಾಟಿಗೆ ತಂದಿದ್ದ. ಗ್ರಾಮೋಫೋನ್ ಕೇಳಲು ಶ್ರೀಮಾತೆಯವರ ಮನೆಯ ಮುಂದೆ ಜನರು ಗುಂಪಾಗಿ ಸೇರುತ್ತಿದ್ದರು. *(-ಸಂ.)*

ಲ್ಲರೂ ಅತ್ತೆಯವರಿಗೆ ಎಲ್ಲವನ್ನೂ ಕೊಡಲು ಬಯಸುತ್ತಿದ್ದರು. ಹಾಗೆ ಕೊಟ್ಟ ಬಳಿಕ ಅವರು ಧನ್ಯರೆನಿಸಿ ಹೋಗುತ್ತಿದ್ದರು.

ಒಂದು ಘಟನೆ ನೆನಪಾಗುತ್ತಿದೆ. ಇದನ್ನು ನನ್ನ ಅಜ್ಜಿಯವರು ಹೇಳಿದ್ದರು. ಅಜ್ಜಿ ಹೀಗೆಂದರು: ''ನೋಡು, ಮುಖರ್ಜಿಯವರ ಸಾರು (ಶಾರದಾ) ಇದ್ದಾಳಲ್ಲ, ಅವಳು ಅವಳಲ್ಲ, ನಿನಗೆ ಮುಂದೆ ಗೊತ್ತಾದೀತು. ಅವಳು ದೇವತೆಯೇ! ಒಂದು ಬಾರಿ ಎರಡು ವರ್ಷಗಳ ಕಾಲ, ಮೇಲಿಂದ ಮೇಲೆ ಬರಗಾಲ ಬಂತು. ಮಳೆಯ ಸುದ್ದಿಯೇ ಇಲ್ಲ. ಗದ್ದೆ ಬಯಲಿನ ಫಸಲೆಲ್ಲವೂ ಅಲ್ಲಿಯೇ ಒಣಗಿಹೋದವು. ಆಮೋದರ ನದಿಯ ತೀರದಲ್ಲಿ ಏನೋ ಒಂದಿಷ್ಟು ಭೂಮಿಯ ಧಾನ್ಯ ಉಳಿದಿತ್ತು. ಅವೂ ಮುಗಿಯುತ್ತ ಬಂದಿತ್ತು. ಭಾದ್ರಪದದಲ್ಲೂ ಕೂಡ ಮಳೆಯಾಗಲಿಲ್ಲ. ಗ್ರಾಮದ ಮುಖಂಡರೆಲ್ಲ ಸೇರಿ ಒಂದು ದಿನ ಮಾತುಕತೆ ನಡೆಸಿದರು – ಈಗ ಮಳೆಯಾಗದಿದ್ದರೆ, ಊಟವಿಲ್ಲದೆ ಮಕ್ಕಳು ಮರಿಗಳೆಲ್ಲ ಸತ್ತುಹೋಗುವವು ಎಂದು. (ಆಗಿನ ಕಾಲದಲ್ಲಿ ಹಳ್ಳಿಯಲ್ಲಿ ಗ್ರಾಮದ ಮುಖಂಡರು ಆಗಿದ್ದವರು–ರಾಜಕುಮಾರ ಮುಖ್ಯೋಪಾಧ್ಯಾಯ, ಶಿವರಾಮ ಬಂದ್ಯೋಪಾಧ್ಯಾಯ, ಸತೀಶ ಸಾಮುಯಿ, ಕೇದಾರ್ ಘೋಷ್, ಕೈಲಾಸ ಮಂಡಲ್, ಮಾಖನ್ ಮಂಡಲ್, ಯೋಗೀಂದ್ರ ವಿಶ್ವಾಸ್, ನಗೇಂದ್ರ ರಾಯೇನ್–ಮುಂತಾದವರು) ಅವರೆಲ್ಲ ಹೋಗಿ ಸಾರುವನ್ನು ಭೇಟಿಯಾದರು. ಸಾರು ಹೇಳಿದಳು, ''ಠಾಕೂರರಿಗೆ ಪ್ರಾರ್ಥನೆ ಮಾಡುತ್ತೇನೆ.'' ಮರುದಿನವೇ ಮುಸಲಧಾರೆಯಂತೆ ಮಳೆಯಾಯಿತು. ಆ ವರ್ಷ ಈ ಭೂಮಿಯಲ್ಲಿ ಫಸಲು ಬಂದಂತೆ ಇನ್ನೆಂದಿಗೂ ಬಂದಿಲ್ಲ. ದೈವೀ ಮಹಾತ್ಮೆ ಅಂತ ಯಾವುದಕ್ಕೆ ಹೇಳುತ್ತಾರೆ, ಗೊತ್ತಾಯಿತೆ?'' ಈ ಘಟನೆಯನ್ನು ನಾವು ಭಾನು ಅತ್ತೆಯವರಿಂದಲೂ ಕೇಳಿದ್ದೇವೆ.

ಈಗ ನನ್ನ ವಯಸ್ಸು ಸುಮಾರು ೯೬; [೨] ಈಗಂತೂ ಚೆನ್ನಾಗಿ ಬದುಕಿ ಉಳಿದಿದ್ದೇನೆ. 'ಅತ್ತೆ'ಯವರ ಆಶೀರ್ವಾದಿಂದ ಹೀಗಿದ್ದೇನೆ. ನಮ್ಮ ನೆಲದಲ್ಲಿ ಅತ್ತೆಯವರ ಪಾದಧೂಳಿ ಬಿದ್ದಿದೆ. ಒಂದೊಂದು ಬಾರಿ ಅವರು ನನ್ನ ತಾಯಿಯವರೊಂದಿಗೆ ಮಾತುಕತೆ ನಡೆಸುವಂತೆ, ಅಂಗಳದಲ್ಲಿ ಅಜ್ಜಿಯವರೊಂದಿಗೆ ಮಾತನಾಡುತ್ತಿರುವಂತೆ ಕಂಡಿದ್ದೇನೆ. ಕಣ್ಣು ಮುಚ್ಚಿದರೆ ಸಾಕು, ಎಲ್ಲವೂ ಜೀವಂತವಾಗಿ ನನ್ನ ಕಣ್ಣ ಮುಂದೆ ಬಂದು ನಿಲ್ಲುತ್ತವೆ. ನಮಗೆ ಆಗ ಅರ್ಥವಾಗಲಿಲ್ಲ, ಅದರೆ ನಾವು ಸಾಕ್ಷಾತ್ ಜಗಜ್ಜನನಿಯನ್ನೇ ನೋಡಿದ್ದೇವೆ, ಅವರ ಪಾದಗಳನ್ನೇ ಸ್ಪರ್ಶಿಸಿದ್ದೇವೆ! ಆದ್ದರಿಂದಲೇ ಇಷ್ಟು ವಯಸ್ಸಾದರೂ ನಾನು ಇಷ್ಟೊಂದು ಚೆನ್ನಾಗಿದ್ದೇನೆ. ಎಷ್ಟೋ ಹಿಂದಿನ ಕಥೆ, ಆದರೆ ಅದೆಲ್ಲವೂ ನನ್ನ ಮನಸ್ಸಿನಲ್ಲಿ ದೃಢವಾಗಿ ಅಲಂಕೃತವಾಗಿ ನಿಂತಿವೆ. ಅವರ ಕೃಪೆ ನಮ್ಮೆಲ್ಲರ ಸುತ್ತ ಹಬ್ಬಿದೆಯೆಂದು ನನಗೆ ಗೊತ್ತು. ನಮ್ಮ ಕುಟುಂಬದಲ್ಲಿ ಇಂದು ಏನೇನು ಏಳಿಗೆಯುಂಟಾಗಿವೆ, ಎಲ್ಲವೂ 'ಅತ್ತೆ'ಯವರ ಆಶೀರ್ವಾದದಿಂದಲೇ ನಡೆದಿವೆ. ಪರಲೋಕವೊಂದಿದ್ದರೆ, ಅಲ್ಲೂ ನಾನು ಅತ್ತೆಯವರ ಚರಣಗಳ ಆಶ್ರಯವನ್ನೇ ಬಯಸುವೆ. ಅವರ ಬಳಿ ಇದೇ ನನ್ನ ಪ್ರಾರ್ಥನೆ. ✷

---

೨ ೧೯೬೫ರ ಜುಲೈ ೬ರಂದು ಲೇಖಕರು ತೀರಿಕೊಂಡರು. *(–ಸಂ.)*

ಸಂಗ್ರಹ: *ಅಧ್ಯಾಪಕ ತಡಿತ್‌ಕುಮಾರ್ ಬಂದ್ಯೋಪಾಧ್ಯಾಯ*

ದಿನಾಂಕ: *೧೯೬೫ರ ಜನವರಿ ೧–೨*

ಶ್ರೀಮಾತೆಯವರ ಉಪದೇಶಗಳು



✽ **ಶಿಷ್ಯ :** ಯಾವಾಗ ಸಾಧನೆಗೆ ಸಮಯವನ್ನು ಮಾಡಿಕೊಳ್ಳಬೇಕು?

ಶ್ರೀಮಾತೆ : ಸಂಧಿಕಾಲವು ಭಗವಂತನನ್ನು ಕರೆಯಲು ಅತ್ಯಂತ ಪ್ರಶಸ್ತವಾದ ಸಮಯ. ರಾತ್ರಿ ಕಳೆದು ಬೆಳಗಾಗುತ್ತದೆ; ದಿನ ಕಳೆದು ರಾತ್ರಿಯಾಗುತ್ತದೆ — ಇದೇ ಸಂಧಿಕಾಲ. ಈ ಸಮಯದಲ್ಲಿ ಮನಸ್ಸು ಪವಿತ್ರವಾಗಿರುತ್ತದೆ.

✽ (ಮನಸ್ಸಿನ ದೌರ್ಬಲ್ಯದ ಬಗ್ಗೆ) ಮಗೂ, ಅದು ಪ್ರಕೃತಿ ನಿಯಮ. ಹೇಗೆ ಅಮಾವಾಸ್ಯೆ, ಹುಣ್ಣಿಮೆ ಎನ್ನುವುದಿದೆಯೋ ಹಾಗೆ ಮನಸ್ಸೂ ಕೆಲವೊಮ್ಮೆ ಉನ್ನತ ಭಾವದಿಂದ ಇರುತ್ತದೆ, ಕೆಲವೊಮ್ಮೆ ಕೆಟ್ಟ ಭಾವನೆಗಳಿಂದ ತುಂಬಿರುತ್ತದೆ.

✽ **ಶಿಷ್ಯ :** ಸಂಸಾರದಲ್ಲಿ ಇರುವುದರಿಂದ ಏನನ್ನೂ ಸಾಧಿಸಲಾಗದು.

ಶ್ರೀಮಾತೆ : ಸಂಸಾರವೆಂದರೆ ದೊಡ್ಡ ಕೆಸರಿನ ಕೊಳ. ಅದರಲ್ಲಿ ಬಿದ್ದುಬಿಟ್ಟರೆ ಏಳುವುದು ಅತ್ಯಂತ ಕಷ್ಟ. ಬ್ರಹ್ಮ, ವಿಷ್ಣು ಮೊದಲಾದವರೇ ಅದರಲ್ಲಿ ಸಿಕ್ಕು ಉಸಿರುಗಟ್ಟಿ ಹೋಗುತ್ತಾರೆ ಎಂದ ಮೇಲೆ ಮನುಷ್ಯ ಎಷ್ಟರವನು! ಭಗವಂತನ ನಾಮಸ್ಮರಣೆ ಮಾಡು. ಅವನ ನಾಮಜಪ ಮಾಡುತ್ತ ಒಂದು ದಿನ ಅವನು ಸಂಸಾರವನ್ನು ಕತ್ತರಿಸಿಬಿಡುತ್ತಾನೆ. ಅವನು ತಾನಾಗಿ ಅದನ್ನು ಕತ್ತರಿಸದಿದ್ದರೆ ಹೇಗೆ ತಾನೇ ಉದ್ಧಾರ ಆಗಬಹುದು? ಆದ್ದರಿಂದ ಭಗವಂತನಲ್ಲಿ ದೃಢವಾದ ವಿಶ್ವಾಸವನ್ನು ಹೊಂದಿರು. ಸಂಸಾರದಲ್ಲಿ ಮಕ್ಕಳಿಗೆ ತಾಯಿತಂದೆಯರು ಹೇಗೆ ಆಶ್ರಯಸ್ಥಾನವೋ ಹಾಗೆ ನೀನು ಶ್ರೀರಾಮಕೃಷ್ಣರನ್ನು ಆಶ್ರಯಸ್ಥಾನವೆಂದೇ ತಿಳಿ.

('ಶ್ರೀಶಾರದಾದೇವಿ ವಚನವೇದ', ಪು. ೪೫೩ –೫೪)

ಶ್ರೀ ಶಾರದಾದೇವಿಯವರ ಕಾಶೀಯಾತ್ರೆ

ಸ್ವಾಮಿ ರಾಘವೇಶಾನಂದ

ಶ್ರೀರಾಮಕೃಷ್ಣರ ಮಹಾಸಮಾಧಿಯ ನಂತರ ಶ್ರೀಮಾತೆಯವರು ಕಾಶಿ, ವೃಂದಾವನ ಮೊದಲಾದ ತೀರ್ಥಕ್ಷೇತ್ರಗಳಿಗೆ ಯಾತ್ರೆ ಹೋಗಿದ್ದರು. ಈ ಬಗ್ಗೆ ವಿವರಿಸಿರುವ ಪೂಜ್ಯ ಸ್ವಾಮೀಜಿಯವರು ಉದಕಮಂಡಲ ರಾಮಕೃಷ್ಣ ಮಠದ ಮುಖ್ಯಸ್ಥರು. ಉತ್ತಮ ವಾಗ್ಮಿಗಳು ಮತ್ತು ಸಂಘಟಕರಾಗಿರುವ ಸ್ವಾಮೀಜಿಯವರು ಹಲವಾರು ಪುಸ್ತಕಗಳನ್ನು ಬರೆದಿದ್ದಾರೆ.

ಶ್ರೀಮಾತೆ ಶಾರದಾದೇವಿಯವರು ೧೮೮೬ರ ತಮ್ಮ ತೀರ್ಥಯಾತ್ರೆಯ ಸಂದರ್ಭದಲ್ಲಿ ಕಾಶಿಗೆ ಹೋದರು. ಅವರು ಮೊದಲ ಬಾರಿಯ ತಮ್ಮ ಕಾಶಿಯಾತ್ರೆಯ ಸಮಯದಲ್ಲಿ ೧೦ ದಿವಸಗಳ ಕಾಲ ಕಾಶಿಯಲ್ಲಿದ್ದರು.

ಮಹಾಪುರುಷರುಗಳು ಪವಿತ್ರ ಸ್ಥಳಗಳಿಗೆ ಭೇಟಿಕೊಟ್ಟು ಅಂತಹ ಸ್ಥಳಗಳನ್ನು ಪವಿತ್ರಗೊಳಿಸುತ್ತಾರೆ ಎಂದು ಶಾಸ್ತ್ರಗಳು ತಿಳಿಸುತ್ತವೆ. ತಮ್ಮ ಭಕ್ತಿ ಮತ್ತು ಆರಾಧನೆ, ಜಪ ಮತ್ತು ಧ್ಯಾನ, ಪ್ರಾರ್ಥನೆ ಮತ್ತು ಕಣ್ಣೀರು, ಉಪವಾಸ ಮತ್ತು ಕಾಠಿಣ್ಯ, ಜಾಗರಣೆ ಮತ್ತು ಹಂಬಲಗಳ ಮೂಲಕ ಯಾತ್ರಿಕರು ಪ್ರಪಂಚದ ಪವಿತ್ರ ಸ್ಥಳಗಳನ್ನು ಇನ್ನಷ್ಟು ಪವಿತ್ರಗೊಳಿಸುತ್ತಾರೆ. ಬೃಂದಾವನ, ಅಯೋಧ್ಯೆ ಮತ್ತು ದ್ವಾರಕೆ ಹಾಗೂ ಭಾರತದ ಇತರ ಪವಿತ್ರ ಸ್ಥಳಗಳು ಯುಗಯುಗಾಂತರಗಳಿಂದ ಯಾತ್ರಾರ್ಥಿಗಳನ್ನು ಆಕರ್ಷಿಸಿವೆ.

ಗೃಹಸ್ಥರು ಇಂತಹ ಪವಿತ್ರ ಸ್ಥಳಗಳಿಗೆ ಭೇಟಿ ನೀಡುವುದರಿಂದ ಅದು ಅವರ ಮನೆ ಮತ್ತು ಕುಟುಂಬದೊಂದಿಗಿನ ಬಾಂಧವ್ಯವನ್ನು ಕಡಿತಗೊಳಿಸುತ್ತದೆ ಮತ್ತು ದೇವರ ಮೇಲಿನ ಹಂಬಲವನ್ನು ಹೆಚ್ಚಿಸುತ್ತದೆ. ಪ್ರಪಂಚದಿಂದ ದೂರವಿರುವುದರಿಂದ ಭಕ್ತನ ದೈವೀ ಆನಂದದ ಅನುಭವವು ಸುಲಭವಾಗಿ ಸಾಧ್ಯವಾಗುತ್ತದೆ.

ಶ್ರೀಮಾತೆಯವರು ಕಲ್ಕತ್ತೆಯಿಂದ ಕಾಶಿಗೆ ಹೋಗುವಾಗ, ಅಲ್ಲಿ ಆಗಲೇ ರಾಮಕೃಷ್ಣ ಮಠ ಸ್ಥಾಪಿತವಾಗಿತ್ತು. ಶ್ರೀಮಾತೆಯವರು ಅಲ್ಲಿಗೆ ತಲುಪಿ ವಿಶ್ರಾಂತಿ ತೆಗೆದುಕೊಂಡು, ಬಳಿಕ 'ಲಕ್ಷ್ಮೀ ನಿವಾಸ'ಕ್ಕೆ ಹೊರಟರು. ಇದು ಕಲ್ಕತ್ತದ ಒಬ್ಬ ಭಕ್ತರು ಕಟ್ಟಿಸಿದ ಹೊಸ ಮನೆ. ಅಲ್ಲಿ ಶ್ರೀಮಾತೆಯವರು ಸುಮಾರು ಎರಡೂವರೆ ತಿಂಗಳು ಉಳಿದುಕೊಂಡರು. ಆ ಮನೆಯ ವಿಶಾಲವಾದ ಜಗಲಿಯನ್ನು ನೋಡಿ ಬಹಳ ಆನಂದಪಟ್ಟು ಹೇಳಿದರು: ''ನಮಗೆ ಬಹಳ ವಿಶಾಲವಾದ ಸ್ಥಳ ಸಿಕ್ಕಿದೆ. ನಿಜಕ್ಕೂ ನಮ್ಮ ಅದೃಷ್ಟ. ಸಂಕುಚಿತವಾದ ಸ್ಥಳ ಮನಸ್ಸನ್ನು ಸಂಕುಚಿತಗೊಳಿಸುತ್ತದೆ. ವಿಶಾಲವಾದ ಸ್ಥಳ ಮನಸ್ಸನ್ನು ವಿಶಾಲಗೊಳಿಸುತ್ತದೆ.''



ಮಾರನೆಯ ದಿನ ವಿಶ್ವನಾಥ, ಅನ್ನಪೂರ್ಣೆಯ ದರ್ಶನ ಮಾಡಲು ದೇವಸ್ಥಾನಕ್ಕೆ ಹೋದರು. ಶಿವನಿಗೆ ಮಾಡಿದ ಸಂಧ್ಯಾರತಿಯನ್ನು ನೋಡುತ್ತಾ ಸಮಾಧಿಸ್ಥರಾದರು. ಬಹಳ ಅಂತರ್ಮುಖಿಯಾಗಿಬಿಟ್ಟಿದ್ದುದ್ದರಿಂದ, ಹೊರಪ್ರಪಂಚವನ್ನೇ ಮರೆತರು. ತಮ್ಮ ನಿವಾಸಕ್ಕೆ ಹಿಂದಿರುಗಲು ಬಹಳ ಕಷ್ಟವಾಯಿತು. ನಂತರ ಹೇಳಿದರು: ''ಶ್ರೀರಾಮಕೃಷ್ಣರೇ ನನ್ನನ್ನು ಕೈಹಿಡಿದು ಕರೆದುಕೊಂಡು ಬಂದರು.''

ಸ್ವಾಮಿ ಅದ್ಭುತಾನಂದರು ಈ ಘಟನೆಯ ಬಗ್ಗೆ ನಂತರ ಹೀಗೆ ಹೇಳಿದರು: ''ಒಂದು ಸಂಜೆ ಶ್ರೀಮಾತೆಯ ಜೊತೆ ನಾವು ವಿಶ್ವನಾಥ ಮಂದಿರಕ್ಕೆ ಸಂಧ್ಯಾರತಿಯನ್ನು ನೋಡಲು ಹೋಗಿದ್ದೆವು.

ಶ್ರೀಮಾತೆಯವರು ಬಾಹ್ಯಾವಸ್ಥೆಯನ್ನು ಕಳೆದುಕೊಂಡಿದ್ದರು. ಬಹಳ ಭಾರವಾದ ಹೆಜ್ಜೆಯನ್ನಿಡುತ್ತಾ ಬಹಳ ವೇಗವಾಗಿ ನಡೆದರು. ಎಷ್ಟು ವೇಗವೆಂದರೆ ನಮಗೆ ಅವರ ವೇಗಕ್ಕೆ ನಡೆಯುವುದು ಬಹಳ ಕಷ್ಟವಾಗಿತ್ತು. ನಿವಾಸ ತಲುಪಿದ ತಕ್ಷಣ, ಮಂಚದ ಮೇಲೆ ಮಲಗಿಬಿಟ್ಟರು. ಒಂದು ಮಾತನ್ನೂ ಆಡಲಿಲ್ಲ. ಸುಮಾರು ಮಧ್ಯರಾತ್ರಿಯ ಒಳಗಾಗಿ ಎದ್ದು ಕುಳಿತು ಧ್ಯಾನಸ್ಥರಾದರು. ಮಾರನೆಯ ದಿನ ಬೆಳಗ್ಗೆ ಗೋಲಾಪ್ ಮಾ, ಅವರನ್ನು ಎಚ್ಚರಗೊಳಿಸಲು ಮತ್ತೆ ಮತ್ತೆ ಕೂಗಿದರು. ಆದರೂ ಅವರು ಮೇಲೇಳಲು ಬಹಳ ಹೊತ್ತೇ ಹಿಡಿಯಿತು.''

ಮತ್ತೊಂದು ದಿನ ಸ್ವಾಮಿ ಭಾಸ್ಕರಾನಂದರೆಂಬ ಸಂತರನ್ನು ಭೇಟಿ ಮಾಡಲು ಹೊರಟರು. ಅವರೊಬ್ಬರು ಕಾಶಿಯಲ್ಲಿ ವಾಸ ಮಾಡುತ್ತಿದ್ದ ಮಹಾ ಸಂತರು. ಅವರು ಯಾವಾಗಲೂ ಪೂರ್ಣ ನಗ್ನರಾಗಿಯೇ ಇರುತ್ತಿದ್ದರು. ಅವರನ್ನು ಶ್ರೀಮಾತೆ ಭೇಟಿ ಮಾಡಿದಾಗ ಅವರು, ''ತಾಯೇ, ನನ್ನ ನಗ್ನಾವಸ್ಥೆಯನ್ನು ನೋಡಿ ಸಂಕೋಚಪಟ್ಟುಕೊಳ್ಳಬೇಡಿ. ತಾವೆಲ್ಲರೂ ಜಗನ್ಮಾತೆಯ ಪ್ರತೀಕಗಳು. ಸಂಕೋಚಪಡಬೇಕಾದ ಆವಶ್ಯಕತೆಯೇ ಇಲ್ಲ. ನನ್ನ ಜನನಾಂಗ ಮತ್ತೊಂದು ಕೈಬೆರಳಿನಂತೆ ಅಷ್ಟೇ''. ಶ್ರೀಮಾತೆಯವರು ಅಲ್ಲಿಂದ ಹಿಂದಿರುಗಿದ ಮೇಲೆ ಹೇಳಿದರು. ''ಅವರು ಎಂತಹ ಶಾಂತ, ದೊಡ್ಡ ಮಹಾತ್ಮರು! ಚಳಿಗಾಲ, ಬೇಸಿಗೆ, ಎಲ್ಲಾ ಕಾಲದಲ್ಲಿಯೂ ನಗ್ನರಾಗಿಯೇ ಇರುತ್ತಾರೆ.''

ಅವರು ಕಾಶಿಯಲ್ಲಿದ್ದಾಗ ಒಬ್ಬ ನೇಪಾಳೀ ಸಂನ್ಯಾಸಿನಿ ಅಗಾಗ್ಗೆ ಬಂದು ಶ್ರೀಮಾತೆಯವರನ್ನು ಭೇಟಿ ಮಾಡುತ್ತಿದ್ದರು. ಈ ಸಂನ್ಯಾಸಿನಿ ಹಲವಾರು ರೀತಿಯ ಪೂಜೆಗಳನ್ನೂ ಆಧ್ಯಾತ್ಮಿಕ ಸಾಧನೆಗಳನ್ನೂ ಅರಿತವಳಾಗಿದ್ದಳು. ಅವಳು ಶ್ರೀಮಾತೆಯವರ ಆಗಿನ ಮನಃಸ್ಥಿತಿಯನ್ನು ಗಮನಿಸಿದರು ಮತ್ತು ಅವರಿಗೆ ಪಂಚತಪಸ್ಸನ್ನು ಮಾಡಲು ತಿಳಿಸಿದರು.

ಒಂದಿ ದಿನ ಶ್ರೀಮಾತೆಯವರು ಶ್ರೀರಾಮಕೃಷ್ಣ ಮಹಾ ಸಂಘಕ್ಕೆ ಸೇರಿದ ರಾಮಕೃಷ್ಣ ಸೇವಾಶ್ರಮಕ್ಕೆ ಭೇಟಿಯಿತ್ತರು. ಈ ಆಶ್ರಮದಲ್ಲಿ ಸತತವಾಗಿ ರೋಗಿಗಳ ಶುಶ್ರೂಷೆ ನಡೆಯುವ ಆಸ್ಪತ್ರೆಯಿದೆ. ಅಲ್ಲಿಯ ಸ್ವಾಮಿ ಅಚಲಾನಂದರು ಶ್ರೀಮಾತೆಯವರನ್ನು ಬರಮಾಡಿಕೊಂಡು ಅವರನ್ನು ಪಲ್ಲಕ್ಕಿಯಲ್ಲಿ ಕೂರಿಸಿಕೊಂಡು ಆಶ್ರಮದ ಸುತ್ತಮುತ್ತಲೆಲ್ಲವನ್ನೂ ತೋರಿಸಿಕೊಂಡು ಬಂದರು. ಶ್ರೀಮಾತೆಯವರು ಬಾಲಕಿಯಂತೆ ಕುತೂಹಲವನ್ನು ತೋರಿಸುತ್ತಾ ಪ್ರತಿಯೊಂದು ವಿಷಯವನ್ನೂ ವಿವರವಾಗಿ ಕೇಳಿ ತಿಳಿದುಕೊಳ್ಳುತ್ತಿದ್ದರು. ಶ್ರೀಮಾತೆಯವರು ಅಲ್ಲಿಂದ ಹಿಂದಿರುಗಿದ ಮೇಲೆ ಮನಸಾರೆ ತಮ್ಮ ಸಂತೋಷವನ್ನು ವ್ಯಕ್ತಪಡಿಸಿದರು. ಅವರು ಹೇಳಿದ ಮಾತು ಕಾಶಿಗೆ ಇನ್ನೂ ಹೆಚ್ಚು ಮೆರುಗು ಕೊಟ್ಟಿತು: ''ಶ್ರೀರಾಮಕೃಷ್ಣರು ಸ್ವತಃ ಇಲ್ಲಿ ವಿರಾಜಮಾನರಾಗಿದ್ದಾರೆ. ಲಕ್ಷ್ಮಿ ಇಲ್ಲಿ ಪೂರ್ಣರೂಪದಿಂದ ನೆಲೆಗೊಂಡಿದ್ದಾಳೆ.''

ನಂತರ ಶ್ರೀಮಾತೆಯವರು ಸೇವಾಶ್ರಮ ಹೇಗೆ ರೂಪುಗೊಂಡಿತು ಎನ್ನುವುದರ ಬಗ್ಗೆ ಪೂರ್ಣ ವಿವರ ತಿಳಿಯಲು ಇಷ್ಟಪಟ್ಟರು. ಆಶ್ರಮದ ಮುಖ್ಯಸ್ಥರಾಗಿದ್ದ ಸ್ವಾಮಿ ಅಚಲಾನಂದರು ಆಶ್ರಮ ನಿರ್ಮಾಣದ ಪೂರ್ಣಕಥೆಯನ್ನು ವಿವರಿಸಿದಾಗ ಶ್ರೀಮಾತೆಯವರು ಉದ್ಗರಿಸಿದರು: ''ಆಹ! ಎಷ್ಟು ಚೆನ್ನಾಗಿದೆ ಈ ಸ್ಥಳ! ನನಗೆ ಇಲ್ಲೇ ಕಾಶಿಯಲ್ಲೇ ಇದ್ದುಬಿಡೋಣ ಅನ್ನಿಸುತ್ತಿದೆ!'' ನಂತರ ಸುಪ್ರೀತರಾದ ಶ್ರೀಮಾತೆಯವರು ತಮ್ಮ ನಿವಾಸಕ್ಕೆ ಹಿಂದಿರುಗಿದರು. ಅವರು ಹೋದ ಸ್ವಲ್ಪ ಹೊತ್ತಿನಲ್ಲೇ ಶಿಷ್ಯನೊಬ್ಬ ಒಂದು ಹತ್ತು ರೂಪಾಯಿ ನೋಟನ್ನು ತಂದು ಸೇವಾಶ್ರಮದ ಅಧ್ಯಕ್ಷರ ಕೈಯಲ್ಲಿಟ್ಟು ಹೇಳುತ್ತಾನೆ: ''ಶ್ರೀಮಾತೆಯವರು ಇದನ್ನು ಕಳುಹಿಸಿದ್ದಾರೆ. ಸೇವಾಶ್ರಮಕ್ಕೆ ಇದು ಅವರ ಕಾಣಿಕೆ. ದಯವಿಟ್ಟು ಸ್ವೀಕರಿಸಿಬೇಕು'' ಎಂದು. ಶ್ರೀಮಾತೆಯವರು ಕೊಟ್ಟ ಆ ಹತ್ತು ರೂಪಾಯಿಯ ಹಿನ್ನೆಲೆಯಲ್ಲಿರುವ ಅವರ ಅಪಾರ ಕೃಪೆಯನ್ನು ಗಮನಿಸಬೇಕು. ಅವರು ಅಂದು ಕೊಟ್ಟ ಆ ಹತ್ತು ರೂಪಾಯಿ ನೋಟು ಇಂದಿಗೂ ಅಲ್ಲಿದೆ. ಅದನ್ನು ತುಂಬಾ ಜೋಪಾನವಾಗಿ ಸಂರಕ್ಷಿಸಿ ಇಡಲಾಗಿದೆ.

ಒಬ್ಬ ಭಕ್ತ ಒಮ್ಮೆ ಅವರನ್ನು ಆ ಸೇವಾಶ್ರಮದ ಭೇಟಿಯ ಬಗ್ಗೆ ವಿಚಾರಿಸಿದ. ಆಗ ಶ್ರೀಮಾತೆಯವರು ಹೇಳಿದರು: ''ಅಲ್ಲಿ ಶ್ರೀರಾಮಕೃಷ್ಣರೇ ಸ್ವತಃ ಇರುವ ಹಾಗೆ ನಾನು ಕಂಡೆ. ಇವೆಲ್ಲ ಅವರ ಕಾರ್ಯವೇ ಸರಿ'' ಎಂದರು. ಸ್ವಾಮಿ ಬ್ರಹ್ಮಾನಂದರು ಬೆಳಗಿನ ವಾಯುಸಂಚಾರದ ಸಮಯದಲ್ಲಿ ಶ್ರೀಮಾತೆಯವರು ವಾಸವಾಗಿದ್ದ ಲಕ್ಷ್ಮೀನಿವಾಸಕ್ಕೆ ಭೇಟಿಕೊಟ್ಟು ಅಲ್ಲಿ ಗೋಲಾಪ್ ಮಾ ಮೂಲಕ ಶ್ರೀಮಾತೆಯವರ ದೇಹಾರೋಗ್ಯದ ಕುರಿತು ಕೇಳಿ ತಿಳಿದುಕೊಳ್ಳುತ್ತಿದ್ದರು. ಅಂದು ಗೋಲಾಪ್ ಮಾ ಮಹಡಿಯ ಮೇಲಿನಿಂದಲೇ ಬ್ರಹ್ಮಾನಂದರನ್ನು ಕೇಳಿದಳು, ''ರಾಖಾಲ್, ಶ್ರೀಮಾತೆಯವರು ನಿನ್ನನ್ನು ಕೇಳುತ್ತಿದ್ದಾರೆ, 'ಶಕ್ತಿಯನ್ನು ಮೊದಲು ಪೂಜಿಸುತ್ತಾರಲ್ಲ ಏಕೆ?' ಅಂತ.'' ಅದಕ್ಕೆ ಸ್ವಾಮಿ ಬ್ರಹ್ಮಾನಂದರು ಹೇಳುತ್ತಾರೆ: ''ಏಕೆಂದರೆ ಬ್ರಹ್ಮಜ್ಞಾನದ ಕೀಲಿಕೈ ಇರುವುದು ಆದ್ಯಾಶಕ್ತಿಯಾದ ಜಗನ್ಮಾತೆಯ ಕೈಯಲ್ಲಿ ತಾನೆ! ಜಗನ್ಮಾತೆ ಕೃಪೆ ಮಾಡಿ ಬಾಗಿಲು ತೆಗೆಯದಿದ್ದರೆ ಬೇರೆ ದಾರಿಯೇ ಇಲ್ಲ'' ಎಂದು.

ಶ್ರೀಮಾತೆಯವರು ಕಾಶಿಯ ಹಲವಾರು ದೇವದೇವಿಯವರ ದರ್ಶನ ಮಾಡಿದರು. ಒಂದು ಸಂಜೆ ಕಾಶಿಯ ಕೇದಾರನಾಥ ದೇವಸ್ಥಾನಕ್ಕೆ ಹೋದರು. ಅಲ್ಲಿ ಸಂಧ್ಯಾರತಿಯನ್ನು ನೋಡಿದರು. ಶ್ರೀಮಾತೆಯವರು ಕೇದಾರನಾಥನನ್ನು ನೋಡಿ ಹೇಳುತ್ತಾರೆ: ''ಅಲ್ಲಿನ ಹಿಮಾಲಯದ ಕೇದಾರನಾಥ, ಇಲ್ಲಿ ಕಾಶಿಯ ಕೇದಾರನಾಥ – ಇಬ್ಬರೂ ಒಂದೇ: ಇಬ್ಬರಿಗೂ ಸಂಬಂಧವಿದೆ. ಈ ಕೇದಾರನಾಥನನ್ನು ನೋಡಿದರೆ ಆ ಕೇದಾರನಾಥನನ್ನು ನೋಡಿದಂತೆಯೇ. ಇದು ತುಂಬಾ ಜಾಗೃತ ದೇವತೆ'' ಎಂದು.

ಶ್ರೀಮಾತೆಯವರು ಕಾಶಿಯಲ್ಲಿ ಇಬ್ಬರು ಸಾಧುಗಳನ್ನು ಸಂದರ್ಶಿಸಿದರು. ಅವರಲ್ಲಿ ಒಬ್ಬರು ನಾನಕ ಪಂಥಿ ಸಾಧು; ಇನ್ನೊಬ್ಬರು ಚಮೇಲಿಪುರಿ. ಈ ನಾನಕ ಪಂಥಿ ಸಾಧುಗಳು ಗಂಗೆಯ ದಡದ ಮೇಲೆ ವಾಸವಾಗಿರುತ್ತಿದ್ದರು. ಶ್ರೀಮಾತೆಯವರು ಅವರ ಪಾದಗಳಲ್ಲಿ ಒಂದು ರೂಪಾಯಿ ಕಾಣಿಕೆ ಇಟ್ಟು ನಮಸ್ಕರಿಸಿದರು. ಚಮೇಲಿಪುರಿಗಳು ತುಂಬಾ ಮುದುಕರು. ಅವರನ್ನು ಸಂದರ್ಶಿಸಿದಾಗ ಗೋಲಾಪ್ ಮಾ ಅವರನ್ನು ಕೇಳುತ್ತಾಳೆ: ''ನಿಮಗೆ ಊಟ ಯಾರು ಕೊಡುತ್ತಾರೆ?'' ಎಂದು. ಅದಕ್ಕೆ ಆ ಸಾಧುಗಳು ದೃಢಭಾವದಿಂದ ಹೇಳುತ್ತಾರೆ: ''ಮತ್ತಿನ್ನಾರು? ನಮ್ಮ ದುರ್ಗಾಮಾಯಿಯೇ ಕೊಡುತ್ತಾಳೆ''ಎಂದು. ಈ ಮಾತುಗಳನ್ನು ಹೇಳುವಾಗ ಆ ಸಾಧುಗಳ ಧ್ವನಿಯಲ್ಲಿ ದೃಢ ವಿಶ್ವಾಸವನ್ನು ಕಾಣಬಹುದಾಗಿತ್ತು. ಆ ಸಾಧುಗಳ ಅಪರಿಮಿತ ವಿಶ್ವಾಸ ಶ್ರೀಮಾತೆಯವರಿಗೆ ಸಂತಸ ತಂದಿತ್ತು. ನಂತರ ಹೇಳುತ್ತಾರೆ: ''ಆಹ! ಮುದುಕನ ಮುಖವೇ ನನ್ನ ಕಣ್ಣ ಮುಂದೆ ಬರುತ್ತಿದೆ. ಮುದುಕನಾದರೂ ಮುಖದಲ್ಲಿ ಮಗುವಿನ ಕಳೆ!'' ಎಂದು. ಮಾರನೆಯ ದಿನ ಶ್ರೀಮಾತೆಯವರು ಆ ಸಾಧುಗಳಿಗೆ ಒಂದಿಷ್ಟು ಕಿತ್ತಳೆ ಹಣ್ಣು, ಸಿಹಿತಿಂಡಿ, ಒಂದು ಕಂಬಳಿ ಇವನ್ನೆಲ್ಲ ಕಳುಹಿಸಿಕೊಟ್ಟರು.

ಮರುದಿನ ಭಕ್ತರೊಬ್ಬರು, ''ಇನ್ನೂ ಕೆಲವು ಸಾಧುಗಳನ್ನು ಸಂದರ್ಶಿಸೋಣವೆ?'' ಎಂದು ಕೇಳಿದರು. ಅದಕ್ಕೆ ಶ್ರೀಮಾತೆಯವರು ಹೇಳುತ್ತಾರೆ: ''ಇನ್ನಾವ ಸಾಧುಗಳನ್ನು ನಾನು ನೋಡಬೇಕಾಗಿದೆ? ಆ ಸಾಧುಗಳನ್ನು ನಾನು ನೋಡಿದೆನಲ್ಲ, ನಿಜಕ್ಕೂ ಸಾಧುಗಳು ಅಂದರೆ ಅವರು.''

ಒಂದು ದಿನ ಅವರು ಕಾಶಿಯ ಸ್ಥಳಪುರಾಣವನ್ನು ತಿಳಿಸುವ ಕಾಶೀಕಾಂಡವನ್ನು ಓದಿಸಿ ಕೇಳಿದರು. ಮತ್ತೊಂದು ದಿನ ಶ್ರೀಕೃಷ್ಣನ ದಿವ್ಯಲೀಲೆಗಳನ್ನು ಅವರಿಗಾಗಿ ಅಭಿನಯಿಸಿ ತೋರಿಸಲಾಯಿತು. ಶ್ರೀಕೃಷ್ಣ ಹಾಗೂ ರಾಧೆಯ ಪಾತ್ರಗಳನ್ನು ಅಭಿನಯಿಸಿ ತೋರಿಸಿದ ಇಬ್ಬರು ಹುಡುಗರಿಗೆ ಶ್ರೀಮಾತೆಯವರು ಕಾಣಿಕೆ ಕೊಟ್ಟು ನಮಸ್ಕರಿಸಿದರು.

ಇನ್ನೊಂದು ದಿನ ಎರಡು ಗಂಟೆಗಳ ಕಾಲ ಭಾಗವತ ವಾಚನವನ್ನು ಕೇಳಿದರು. ಇದಲ್ಲದೆ ಪ್ರತಿದಿನ ಸಾಯಂಕಾಲ ಸ್ವಾಮಿ ಗಿರಿಜಾನಂದರು ಶ್ರೀಮಾತೆಯವರಿಗೆ ಭಾಗವತವನ್ನು ಓದಿ ಹೇಳುತ್ತಿದ್ದರು. ಶ್ರೀಮಾತೆಯವರು ಅಲ್ಲಿದ್ದಾಗಲೇ ಅವರ ಜನ್ಮದಿನ ಬಂತು. ಅದನ್ನು ಆಶ್ರಮದ ಸಾಧುಗಳು ಬಹಳ ಸಂಭ್ರಮದಿಂದ ಆಚರಿಸಿದರು.

ಮತ್ತೊಂದು ದಿನ ಕಾಶಿಯ ಕೆಲವು ಸ್ಥಳೀಯ ಮಹಿಳೆಯರು ಶ್ರೀಮಾತೆಯವರನ್ನು ನೋಡುವುದಕ್ಕೆಂದು ಬಂದರು. ಅಲ್ಲಿ ಅವರು ಕಂಡದ್ದೇನೆಂದರೆ, ಶ್ರೀಮಾತೆಯವರು ರಾಧಿ ಹಾಗೂ ಭೂದೇವ ಅವರಿಗೆ ತಲೆ ಬಾಚುವುದು, ಬಟ್ಟೆ ತೊಡಿಸುವುದು ಇದೇ ಮೊದಲಾದ ಕೆಲಸದಲ್ಲಿ ಮಗ್ನರಾಗಿದ್ದರು. ಇದನ್ನೆಲ್ಲ ನೋಡಿದ ಆ ಮಹಿಳೆಯರಿಗೆ ಅನ್ನಿಸಿತು, ಇದೂ ಒಂದು ಸಂಸಾರವೇ ಎಂದು. ಆ ಮಹಿಳೆಯರಲ್ಲಿ ಒಬ್ಬಳಂತೂ ಒದರಿಯೇ ಬಿಟ್ಟಳು: ''ಅಮ್ಮ, ಇದೇನಿದು? ನೀವು ಕೂಡ ಈ ಮಾಯೆಯೊಳಗೆ ಗಾಢವಾಗಿ ಮುಳುಗಿಬಿಟ್ಟಿದ್ದೀರಲ್ಲಾ!'' ಎಂದು. ಅದಕ್ಕೆ ಶ್ರೀಮಾತೆಯವರು ಶಾಂತವಾಗಿಯೇ ಉತ್ತರಿಸಿದರು: ''ಏನು ಮಾಡಲಿ ಹೇಳು? ಸ್ವತಃ ನಾನೇ ಮಾಯೆ!'' ಎಂದು. ಟೀಕೆ ಮಾಡಿದ ಮಹಿಳೆ ತೆಪ್ಪಗಾದಳು.

ಇನ್ನೊಂದು ದಿನ ಮತ್ತೆ ಕೆಲವು ಸ್ತ್ರೀಯರು ಶ್ರೀಮಾತೆಯ ದರ್ಶನಕ್ಕೆ ಬಂದರು. ಶ್ರೀಮಾತೆಯವರು ಕಾಶಿಯ ಆ ಹೊಸ ಮನೆಯ ವಿಶಾಲವಾದ ಜಗಲಿಯ ಒಂದು ಬದಿಯಲ್ಲಿ ಕುಳಿತಿದ್ದರು. ಮತ್ತೊಂದು ಬದಿಯಲ್ಲಿ ಗೋಲಾಪ್ ಮಾ ಹಾಗೂ ಮತ್ತಿತರ ಭಕ್ತೆಯರು ಕುಳಿತಿದ್ದರು. ಗೋಲಾಪ್ ಮಾ ದಷ್ಟಪುಷ್ಟಳಾಗಿ ಬೆಳೆದವಳಾಗಿದ್ದಳು. ಬಂದಿದ್ದವರು ಗೋಲಾಪ್ ಮಾಳನ್ನೇ ಶ್ರೀಮಾತೆಯವರೆಂದು ಭಾವಿಸಿ ನಮಸ್ಕರಿಸಲು ಹೋದರು. ಗೋಲಾಪ್ ಮಾ ತಕ್ಷಣ ಅರ್ಥಮಾಡಿಕೊಂಡು, ''ನೋಡಿ, ಶ್ರೀಮಾತೆಯವರು ಅಲ್ಲಿ ಕುಳಿತಿದ್ದಾರೆ'' ಎಂದು ಕೈ ತೋರಿಸಿದರು. ಆದರೂ ಆ ಮಹಿಳೆ ಅವರ ಮಾತನ್ನು ನಂಬಲಿಲ್ಲ. ಅಲ್ಲೇ ಕುಳಿತು ಗೋಲಾಪ್ ಮಾ ಜೊತೆ ಸಂಭಾಷಣೆಗೆ ತೊಡಗಿದಳು. ಆಗ ಗೋಲಾಪ್‌ಮಾ ಪುನಃ ಒತ್ತಿ ಹೇಳಿದರು: ''ನಾನಲ್ಲ ಶ್ರೀಮಾತೆ. ಅಲ್ಲಿ ಕುಳಿತಿದ್ದಾರಲ್ಲ, ಅವರು ಶ್ರೀಮಾತೆಯವರು'' ಎಂದು. ಆಗ ವಿಧಿಯಿಲ್ಲದೆ ಅವಳು ಶ್ರೀಮಾತೆಯವರ ಬಳಿಗೆ ಹೋದಳು. ಆದರೆ ಶ್ರೀಮಾತೆಯವರು ಈ ತಮಾಷೆಯನ್ನು ಇನ್ನಷ್ಟು ನೋಡೋಣ ಎಂದು ಆ ಮಹಿಳೆಗೆ ಹೇಳುತ್ತಾರೆ: ''ಇಲ್ಲ, ಇಲ್ಲ, ಅವರೇ ಶ್ರೀಮಾತೆಯವರು'' ಎಂದು. ಈಗ ಈ ಮಹಿಳೆಗೆ ಕಷ್ಟಕ್ಕಿಟ್ಟುಕೊಂಡಿತು – ನಿಜವಾದ ಶ್ರೀಮಾತೆಯವರು ಯಾರು ಎಂದು. ಅವರನ್ನು ಕೇಳಿದರೆ ಇವರನ್ನು ತೋರಿಸುತ್ತಾರೆ! ಇವರನ್ನು ಕೇಳಿದರೆ ಅವರನ್ನು ತೋರಿಸುತ್ತಾರೆ! ಇದರಿಂದಾಗಿ ಅವಳಿಗೆ ಸ್ವಲ್ಪ ನಾಚಿಕೆಯೂ ಆಯಿತು. ಆದ್ದರಿಂದ ಆಕೆ, ತಾನು ಇವರ ಮಾತಿಗೆ ಕಿವಿಗೊಡಬಾರದು, ತಾನು ಮೊದಲ ನೋಟದಲ್ಲೇ ಯಾರನ್ನು ಶ್ರೀಮಾತೆಯವರು ಎಂದು ತಿಳಿದುಕೊಂಡಿದ್ದನೋ ಅವರೇ ಶ್ರೀಮಾತೆಯವರು ಎಂದು ನಿರ್ಧಾರ ಮಾಡಿಕೊಂಡು ಗೋಲಾಪ್ ಮಾಳ ಹತ್ತಿರ ಬಂದಳು. ಆಗ ಗೋಲಾಪ್ ಮಾ ಆಕೆಗೆ ಕೊಂಚ ಗದರಿಸಿ ಹೇಳುತ್ತಾಳೆ: ''ಏನು, ನಿನಗೆ ಅಷ್ಟೂ ಗೊತ್ತಾಗುವುದಿಲ್ಲವೇ? ಶ್ರೀಮಾತೆಯವರ ಮುಖದಲ್ಲಿ ಬೆಳಗುವ ಆ ದಿವ್ಯಕಳೆಯನ್ನು ಗುರುತಿಸುವುದಕ್ಕಾಗುವುದಿಲ್ಲವೇ ನಿನಗೆ? ಮನುಷ್ಯರು ಯಾರಾದರೂ ಹಾಗೆ ಇರುವುದಕ್ಕೆ ಸಾಧ್ಯವೇನು?'' ಎಂದು. ನಿಜಕ್ಕೂ ಶ್ರೀಮಾತೆಯವರ ಕಣ್ಣುಗಳು ತುಂಬಾ ಅಪೂರ್ವ, ಅಸದೃಶ, ಪರಮ ಶಾಂತ. ಶ್ರೀಮಾತೆಯವರು ಕಾಶೀಯಾತ್ರೆಯನ್ನು ಮುಗಿಸಿ ಅಲ್ಲಿಂದ ಬೃಂದಾವನಕ್ಕೆ ತೆರಳಿದರು.

'ಶ್ರೀರಾಮಕೃಷ್ಣ ವಚನವೇದ'
ಭಾವಧಾರೆ - 32

ಸ್ವಾಮಿ ನಿತ್ಯಸ್ಥಾನಂದ



ಕ್ಷಮೆಯಿದ್ದರೆ ಕ್ಷೇಮ

ಈ ಸಂದರ್ಭದಲ್ಲಿ ನಾವು ಸ್ಮರಿಸಿಕೊಳ್ಳಬೇಕಾದ ಒಂದು ಮುಖ್ಯ ಗುಣ ಇತರರ ತಪ್ಪನ್ನು ಕ್ಷಮಿಸುವ ಮನೋಭಾವ. ಯೇಸುಕ್ರಿಸ್ತರು ಹೇಳುತ್ತಾರೆ: ''ನೀನು ಇತರರ ತಪ್ಪನ್ನು ಕ್ಷಮಿಸದಿದ್ದರೆ ಭಗವಂತನೂ ನಿನ್ನ ತಪ್ಪನ್ನು ಕ್ಷಮಿಸುವುದಿಲ್ಲ.'' ಈ ವಿಷಯಕ್ಕೆ ಸಂಬಂಧಿಸಿದ ಒಂದು ಕಥೆ ಬೈಬಲ್ಲಿನಲ್ಲಿ ಬರುತ್ತದೆ. ಒಬ್ಬ ರೈತನು ಶ್ರೀಮಂತನೊಬ್ಬನಿಂದ ಸಾಲ ತೆಗೆದುಕೊಂಡಿದ್ದನು. ಅನೇಕ ದಿನಗಳಾದರೂ, ವಾಯಿದೆ ಮೀರಿದ್ದರೂ, ಸಾಲ ತೀರಿಸಲಿಲ್ಲ. ಶ್ರೀಮಂತನು ರೈತನ ಮನೆಗೆ ಸಾಲ ವಸೂಲಿ ಮಾಡಲು ಹೋಗಿ, 'ನಿನ್ನನ್ನು ಮನೆಯಿಂದ ಹೊರಹಾಕಿ, ನಿನ್ನ ಎಲ್ಲ ಆಸ್ತಿಪಾಸ್ತಿಗಳನ್ನೂ ವಶಪಡಿಸಿಕೊಳ್ಳುತ್ತೇನೆ' ಎಂದು ಬೆದರಿಕೆ ಹಾಕಿದನು. ರೈತನು ತನ್ನ ಕಷ್ಟಸುಖಗಳನ್ನು ಹೇಳಿಕೊಂಡು ಈ ಬಾರಿ ತನ್ನನ್ನು ಕ್ಷಮಿಸಬೇಕೆಂದು ಅಂಗಲಾಚಿ ಬೇಡಿಕೊಂಡನು. ಶ್ರೀಮಂತ ಕನಿಕರದಿಂದ ಅವನನ್ನು ಕ್ಷಮಿಸಿ ಹೊರಟುಹೋದನು.

ಆ ರೈತನು ಇನ್ನೊಬ್ಬ ರೈತನಿಗೆ ಸಾಲ ಕೊಟ್ಟಿದ್ದನು. ಅದನ್ನು ವಸೂಲಿ ಮಾಡಲು ಆತನ ಮನೆಗೆ ಹೋದನು. ಆ ರೈತನು ತನ್ನ ತಾಪತ್ರಯಗಳನ್ನು ಅವನ ಮುಂದೆ ತೋಡಿಕೊಂಡು, ''ಸದ್ಯದ ಪರಿಸ್ಥಿತಿಯಲ್ಲಿ ನನಗೆ ಸಾಲ ತೀರಿಸಲಾಗುವುದಿಲ್ಲ. ದಯವಿಟ್ಟು ಕ್ಷಮಿಸಿ'' ಎಂದು ಎಷ್ಟೇ ಕಾಡಿ ಬೇಡಿದರೂ ಕೇಳದೆ, ಸಾಲ ಕೊಟ್ಟ ರೈತನು ಕೋಪೋದ್ರಿಕ್ತನಾಗಿ, ಅವನನ್ನು ಥಳಿಸಿ, ಮನೆಯಿಂದ ಹೊರಹಾಕಿದನು. ಈ ಸುದ್ದಿಯನ್ನು ತಿಳಿದ ಶ್ರೀಮಂತನು ತನ್ನಿಂದ ಸಾಲವನ್ನು ಪಡೆದಿದ್ದ ರೈತನ ಬಳಿಗೆ ಹೋಗಿ, ಕೋಪದಿಂದ ಕೆಂಡಮಂಡಲನಾಗಿ, ''ದುಷ್ಟ! ನಾನು ನಿನ್ನನ್ನು ಕ್ಷಮಿಸಿದರೂ ನೀನು ಆ ರೈತನನ್ನು ಕ್ಷಮಿಸಲಿಲ್ಲವಲ್ಲ! ನೀನು ಕ್ಷಮಾರ್ಹನಲ್ಲ'' ಎಂದು ಗುಡುಗಿ, ಅವನ ಆಸ್ತಿಪಾಸ್ತಿಯನ್ನೆಲ್ಲ ಮುಟ್ಟುಗೋಲು ಹಾಕಿಕೊಂಡು ಅವನನ್ನು ಊರಿನಿಂದಲೇ ಓಡಿಸಿದನು.

ಕ್ಷಮಾಗುಣದ ಕೊರತೆಯಿಂದಾಗಿ ಅನೇಕರು ಇತರರಿಂದ ತಮಗಾದ ತೊಂದರೆ ಅನ್ಯಾಯಗಳನ್ನು ಮೆಲುಕುಹಾಕುತ್ತ ತಮ್ಮನ್ನು ತಾವೇ ನೋಯಿಸಿಕೊಳ್ಳುತ್ತಿರುತ್ತಾರೆ. ಇತರರಿಂದ ತಮಗಾದ ನೋವನ್ನು ಚಿಂತಿಸುತ್ತ, ಶಪಿಸುತ್ತಾ ಆ ನೋವನ್ನು ಇನ್ನೂ ತೀವ್ರಗೊಳಿಸುತ್ತಾರೆ. ಅದು ಗಾಯದ ಮೇಲೆ ಬರೆಹಾಕಿದಂತಾಗುತ್ತದೆ. ಈ ಗಾಯಕ್ಕೆ ಎರಡು ಪರಮೌಷಧಿಗಳು: ಕ್ಷಮಾಗುಣ ಮತ್ತು ಪ್ರಾರ್ಥನೆ. ಯಾರಿಂದ ನಮಗೆ ನೋವಾಗಿದೆಯೋ ಅವರಿಗಾಗಿಯೂ ನಾವು ಪ್ರಾರ್ಥಿಸಬೇಕು. ಏಕೆಂದರೆ ತಮ್ಮೊಳಗೇ ಯಾವುದೋ ನೋವಿಲ್ಲದೆ ಯಾರೂ ಇತರರನ್ನು ಉದ್ದೇಶಪೂರ್ವಕವಾಗಿ ನೋಯಿಸುವುದಿಲ್ಲ. ಈ ರೀತಿಯ ಪ್ರಾರ್ಥನೆಯಿಂದ ಅವರಿಗೂ ಪ್ರಯೋಜನವಾಗಬಹುದು, ನಮಗಂತೂ, ಮನಸ್ಸಮಾಧಾನದ ರೂಪದಲ್ಲಿ , ಪ್ರಯೋಜನವಾಗಿಯೇ ಆಗುತ್ತದೆ.

ಗುರು-ಕರ್ತ-ತಂದೆ

ಶ್ರೀರಾಮಕೃಷ್ಣರು: ''ನನ್ನ ಭಾವ ಏನು ಗೊತ್ತೆ? ನಾನು ಉಂಡು, ತಿಂದು ಆನಂದದಿದ್ದೇನೆ. ಉಳಿದುದೆಲ್ಲ ಭಗವತಿಗೇ ಗೊತ್ತು. ಈ ಮೂರು ಮಾತುಗಳನ್ನು – ಗುರು, ಕರ್ತ, ತಂದೆ ಎಂಬುವನ್ನು ಎತ್ತಿತು ಎಂದರೆ ನನಗೆ ಮುಳ್ಳು ಚುಚ್ಚಿದಂತೆ ಆಗುತ್ತದೆ.

''ಇರತಕ್ಕ ಗುರು ಕೇವಲ ಒಬ್ಬನೇ ಒಬ್ಬ. ಆತನೇ ಸಚ್ಚಿದಾನಂದ. ಆತ ಮಾತ್ರವೇ ಶಿಕ್ಷಣ ಕೊಡಬಲ್ಲ. ನನ್ನದು ಸಂತಾನ ಭಾವ. ಮಾನವನ ಅಂತಸ್ಸಿನಲ್ಲಿರುವ ಗುರುಗಳು ಲಕ್ಷಗಟ್ಟಲೇ ಸಿಗುತ್ತಾರೆ. ಎಲ್ಲರಿಗೂ ಗುರು ಆಗಬೇಕು ಅಂತ ಇಚ್ಛೆ. ಆದರೆ ಶಿಷ್ಯನಾಗಬೇಕು ಅಂತ ಯಾರಿಗೆ ತಾನೆ ಇಚ್ಛೆ ಇದೆ?''

ಶ್ರೀರಾಮಕೃಷ್ಣರದು ಸಂತಾನ ಭಾವ – ಮಗುವಿನ ಸ್ವಭಾವ. ಒಂದು ಮಗು ಉಂಡು ತಿಂದು ಆನಂದದಿಂದಿರುತ್ತದೆ. ಅದಕ್ಕೆ ಯಾವ ಹೊರೆಯೂ ಇಲ್ಲ. 'ಅಹಂ'ನ ಹೊರೆಯಿಲ್ಲ. ಈ ಹೊರೆ ಇದ್ದರೆ ಗುರು, ಕರ್ತ, ತಂದೆ ಮುಂತಾದ ಭಾವಗಳು ಬಂದು ಸೇರಿಕೊಳ್ಳುತ್ತವೆ. ಆಗ ಹೊರೆ ಇನ್ನಷ್ಟು ಅಧಿಕವಾಗುತ್ತದೆ.

ಗುರು: ಬೇರೆಯವರಿಗೆ ಉಪದೇಶ ಮಾಡುವ ಹುಚ್ಚು, ಇತರರನ್ನು ಉದ್ಧಾರ ಮಾಡುವ ತವಕ, ತನ್ನ ಉದ್ಧಾರದ ಕಡೆಗೆ ಗಮನವಿಲ್ಲ. ಇದನ್ನು Savior Complex ಎಂದು ಕರೆಯುತ್ತಾರೆ. ಒಬ್ಬರು ಹಿರಿಯ ಸ್ವಾಮಿಗಳು ಹೇಳಿದ ಮಾತು ಈ ಸಂದರ್ಭದಲ್ಲಿ ನೆನಪಿಗೆ ಬರುತ್ತದೆ: ''ಉಪದೇಶ ಮಾಡುವುದೆಂದರೆ ತನಗೆ ಬೇಡದುದನ್ನು ಇತರರಿಗೆ ನೀಡುವುದು.'' ಇದು ತುಂಬ ವಿಚಾರಾರ್ಹವಾದ ವಿಷಯ. ನಾವು ಸಾಮಾನ್ಯವಾಗಿ ನಮಗೆ ಅತ್ಯಂತ ಆವಶ್ಯಕವಾದುದನ್ನು ಇತರರಿಗೆ ಕೊಡುವುದಿಲ್ಲ. ಉಪದೇಶಿಸುವ ವಿಷಯವು ನಮಗೆ ಅತ್ಯಂತ ಆವಶ್ಯಕವಾದುದಾದರೆ ಅದನ್ನು ನಾವೇ ಅನುಭವಿಸಿ ತೃಪ್ತಿಪಡುತ್ತೇವೆ, ಇತರರಿಗೆ ಹೇಳುವುದರಲ್ಲಿ ಉತ್ಸುಕರಾಗಿರುವುದಿಲ್ಲ.

ಶ್ರೀರಾಮಕೃಷ್ಣರಲ್ಲಿ ಗುರುಭಾವವಿತ್ತು ನಿಜ, ಅವರೂ ಸಾಕಷ್ಟು ಉಪದೇಶಗಳನ್ನು ನೀಡಿದ್ದಾರೆ. ಆದರೆ ಅವು ತಮ್ಮ ಜೀವನಾನುಭವದಿಂದ ತುಂಬಿ ತುಳುಕಿದ ಮಾತುಗಳು – ಸೂರ್ಯನಿಂದ ಬೆಳಕು ಹರಿದು ಬರುವಂತೆ. ಅವರ ಗುರುಭಾವದ ಹಿಂದೆ ಅಹಂಭಾವ ಇರಲಿಲ್ಲ.

ಕರ್ತ: ಅಧಿಕಾರದ ಹುಚ್ಚು. ಮೇಲಧಿಕಾರದಲ್ಲಿರುವವರನ್ನು ಕರ್ತಗಳು ಎಂದು ಕರೆಯುತ್ತಾರೆ. ಉನ್ನತ ಅಧಿಕಾರದಲ್ಲಿರುವವರಿಗೆ ಮಾತ್ರ ಈ ಹುಚ್ಚು ಇರುತ್ತದೆ ಎಂದೇನೂ ಅಲ್ಲ. ಸಾಮಾನ್ಯವಾಗಿ ಎಲ್ಲರಲ್ಲೂ ತಾರತಮ್ಯದಿಂದ ಇದು ಇರುತ್ತದೆ. ಇತರರ ಮೇಲೆ ಅಧಿಕಾರ ಚಲಾಯಿಸುವ ಪ್ರವೃತ್ತಿಯನ್ನು ಹೆಚ್ಚು ಕಡಿಮೆ ಎಲ್ಲರಲ್ಲೂ ಕಾಣಬಹುದು. ಗುಲಾಮನೂ ಕೂಡ ತನ್ನ ಕೆಳಗಿರುವವರ ಮೇಲೆ ದಬ್ಬಾಳಿಕೆ ನಡೆಸಲು ಪ್ರಯತ್ನಿಸುತ್ತಾನೆ. ಎಲ್ಲರಿಗೆ ಸ್ವಾತಂತ್ರ್ಯವನ್ನು ಭರಿಸಲಾಗುವುದಿಲ್ಲ. ಅದರಿಂದ ದೂರವಾಗಲು ಕೆಲವರು ಇತರರ ಮೇಲೆ ದಬ್ಬಾಳಿಕೆ ನಡೆಸುತ್ತಾರೆ; ಮತ್ತೆ ಕೆಲವರು ಇತರರ ಕೈಆಳಾಗುತ್ತಾರೆ. ಈ ಮೂಲಕ ಅವರು ಪರಾವಲಂಬಿಗಳಾಗುತ್ತಾರೆ. ಶ್ರೀರಾಮಕೃಷ್ಣರು ಮುಕ್ತರು, ಸ್ವಾತಂತ್ರ್ಯಪ್ರಿಯರು. ಇತರರು ತಮ್ಮ ಅಧೀನರಾಗಿರುವುದನ್ನೂ ತಾವು ಇತರರಿಗೆ ಅಧೀನರಾಗಿರುವುದನ್ನೂ ಅವರು ಸುತರಾಂ ಇಷ್ಟಪಡುತ್ತಿರಲಿಲ್ಲ. ಆದ್ದರಿಂದಲೇ ಅವರು 'ಕರ್ತ' ಸ್ಥಾನವನ್ನು ಇಷ್ಟಪಡಲಿಲ್ಲ.

ತಂದೆ: ಇತರರ ಮೇಲೆ ಶಿಸ್ತನ್ನು ಬಲಾತ್ಕಾರವಾಗಿ ಹೇರುವ ಪ್ರವೃತ್ತಿ. ಇದು ತಂದೆಯ ಸ್ವಭಾವ. ನಮಗೆ ತಿಳಿದಿರುವಂತೆ, ಶ್ರೀರಾಮಕೃಷ್ಣರಿಗೆ ಇದು ಸಾಧ್ಯವೇ ಇರಲಿಲ್ಲ. ಅವರ ಸರಳತೆ, ನಮ್ರತೆ ಇದಕ್ಕೆ ಅವಕಾಶ ಕೊಡುತ್ತಿರಲಿಲ್ಲ.

ಲೋಕಶಿಕ್ಷಣ

ಶ್ರೀರಾಮಕೃಷ್ಣರು: ''ಲೋಕಶಿಕ್ಷಣ ಬಹಳ ಕಠಿಣವಾದ ಕೆಲಸ. ಭಗವಂತ ತನ್ನ ಸಾಕ್ಷಾತ್ಕಾರ ಕೊಟ್ಟು ಆದೇಶವೀಯುವುದಾದರೆ ಮನುಷ್ಯ ಲೋಕಶಿಕ್ಷಣ ಕಾರ್ಯವನ್ನು ಮಾಡಬಲ್ಲ. ನಾರದ ಶುಕದೇವಾದಿಗಳಿಗೆ ಭಗವಂತನಿಂದ ಆದೇಶ ದೊರೆತಿತ್ತು. ಶಂಕರಾಚಾರ್ಯರಿಗೂ ದೊರೆತಿತ್ತು. ಆದೇಶವಿಲ್ಲದೆ ಇತ್ತು ಎಂದರೆ, ಯಾರು ತಾನೆ ನಿನ್ನ ಮಾತಿಗೆ ಬೆಲೆ ಕೊಡುತ್ತಾರೆ?''

ಲೋಕಶಿಕ್ಷಣ ನಿಜವಾಗಿಯೂ ಅಸಾಧ್ಯವೆ? ಅದು ತಪ್ಪೆ? ಮುಂತಾದ ಅನೇಕ ಪ್ರಶ್ನೆಗಳು ಮನಸ್ಸಿಗೆ ಬರುತ್ತದೆ. ಉಪಾಧ್ಯಾಯರು ಅನೇಕ ವಿಷಯಗಳನ್ನು ಬೋಧಿಸುತ್ತಾರೆ, ಅವರು ಬೋಧಿಸಲೇಬೇಕು. ಅದು ಅವರ ಕರ್ತವ್ಯ, ಅದನ್ನೇ ಸೇವಾದೃಷ್ಟಿಯಿಂದ ನೋಡಿದರೆ ಉತ್ತಮ. ಆದರೆ ಶ್ರೀರಾಮಕೃಷ್ಣರು ಇಲ್ಲಿ ಲೌಕಿಕ ಶಿಕ್ಷಣದ ಕುರಿತಾಗಿ ಹೇಳುತ್ತಿಲ್ಲ, ಆಧ್ಯಾತ್ಮಿಕ ಶಿಕ್ಷಣದ ಕುರಿತಾಗಿ ಹೇಳುತ್ತಿದ್ದಾರೆ. ಈ ಶಿಕ್ಷಣವನ್ನು ನೀಡಲು ವ್ಯಕ್ತಿಯು ತಾನೇ ಆ ಅನುಭವವನ್ನು ಪಡೆದಿರಬೇಕು ಎಂಬುದನ್ನು ಶ್ರೀರಾಮಕೃಷ್ಣರು ಸೂಚಿಸುತ್ತಿದ್ದಾರೆ. ಏಕೆಂದರೆ ಇದು ಅನುಭವದ ವಿಷಯ, ಕೇವಲ ಬೌದ್ಧಿಕ ವಿಷಯವಲ್ಲ. ಲೌಕಿಕ ವಿಷಯವನ್ನು ಪುಸ್ತಕ ಜ್ಞಾನದ ಮೂಲಕ ಬೋಧಿಸಬಹುದು. ಅನುಭವದ ವಿಷಯವನ್ನು ಬೋಧಿಸಬೇಕಾದರೆ ಒಬ್ಬನು ತಾನೇ ಅನುಭವಿಸಿರಬೇಕು. ಸಂಗೀತವನ್ನು ಸೈದ್ಧಾಂತಿಕವಾಗಿ ಇತರರಿಗೆ ಬೋಧಿಸಬಹುದು, ಆದರೆ ಇತರರಿಗೆ ಹಾಡುವುದನ್ನು ಹೇಳಿಕೊಡಬೇಕಾದರೆ ತಾನೇ ಸಂಗೀತಗಾರನಾಗಿರಬೇಕು, ಸೈದ್ಧಾಂತಿಕವಾಗಿ ಸಂಗೀತಜ್ಞಾನ ಇಲ್ಲದಿದ್ದರೂ ನಡೆಯುತ್ತದೆ. ಹಾಗೆಯೇ ಲೋಕಶಿಕ್ಷಣಕ್ಕೆ ಶಾಸ್ತ್ರಜ್ಞಾನಕ್ಕಿಂತ ಮುಖ್ಯವಾಗಿ ಅನುಭವಜ್ಞಾನ ಬೇಕಾಗುತ್ತದೆ. ನಾವು ಆಧ್ಯಾತ್ಮಿಕ ಜೀವನದಲ್ಲಿ ಮುಂದುವರಿದಂತೆ ನಮಗೆಷ್ಟು ಅನುಭವವಾಗುತ್ತದೋ ಅಷ್ಟರ ಮಟ್ಟಿಗೆ ಸಹಾಯ ಮಾಡಬಹುದು, ಗುರುಭಾವದಿಂದಲ್ಲ.

ಲೋಕಶಿಕ್ಷಣ ಎಷ್ಟು ಕಠಿಣ ಎಂಬುದಕ್ಕೆ ಸ್ವಾಮಿ ಗಂಭೀರಾನಂದರು ಹೇಳಿದ ಕಥೆಯನ್ನು ಕೇಳಿ: ಒಂದು ದಿನ ಶ್ರೀಕೃಷ್ಣನು ಉದ್ಧವನನ್ನು ಕುರಿತು ಹೇಳಿದನು: 'ನನ್ನ ಉಪದೇಶಗಳೆಲ್ಲವೂ ಗೀತೆ, ಭಾಗವತಗಳಲ್ಲಿ ಉಕ್ತವಾಗಿವೆ. ಆದರೂ ನನ್ನದೊಂದು ಕೊನೆಯ ಸಂದೇಶವಿದೆ. ಅದನ್ನು ಹೇಳಿ ಈ ಪ್ರಪಂಚವನ್ನು ಬಿಟ್ಟು ಹೋಗುತ್ತೇನೆ.' ಆ ಸಂದೇಶ ಯಾವುದೆಂದು ಉದ್ಧವನು ಕೇಳಿದಾಗ ಶ್ರೀಕೃಷ್ಣನು ಹೇಳಿದನು: 'ನೋಡು, ನಾನೇ ಈ ಜಗತ್ತಿಗೆ ಪ್ರಭು. ನಾನು ಮನುಷ್ಯದೇಹವನ್ನು ಧರಿಸಿರುವುದು ಜನರ ಕಷ್ಟಪರಿಹಾರಕ್ಕಾಗಿ. ಆದರೂ ಜನರು ನನಗೆ ಭಯಪಡುತ್ತಾರೆ! ನನ್ನಿಂದ ಯುದ್ಧ ವಿನಾಶಗಳು ಉಂಟಾಗುತ್ತವೆ ಎಂದು ಅವರು ಭಾವಿಸುತ್ತಾರೆ. ಮಹಿಳೆಯರು ನನ್ನನ್ನು ನೋಡಿದಾಕ್ಷಣ ಬಾಗಿಲು ಕಿಟಕಿಗಳನ್ನು ಮುಚ್ಚುತ್ತಾರೆ. ಅಂದು ನನಗೆ ತುಂಬ ಹಸಿವಾಗಿತ್ತು. ಓರ್ವ ಮುದುಕಿ ಹಾಲು ಕರೆಯುತ್ತಿದ್ದುದನ್ನು ನೋಡಿದೆ. 'ನನಗೆ ತುಂಬ ಹಸಿವಾಗಿದೆ, ಏನಾದರೂ ತಿನ್ನುವು

ದಕ್ಕೆ ಕೊಡುತ್ತೀಯಮ್ಮ?' ಎಂದು ಆಕೆಯನ್ನು ಕೇಳಿದ ಕೂಡಲೆ ಹಾಲಿನ ಕುಡಿಕೆಯನ್ನು ಅಲ್ಲಿಯೇ ಬಿಟ್ಟು ಮನೆಯೊಳಗೆ ಓಡಿ ಬಾಗಿಲು ಹಾಕಿಕೊಂಡಳು. ಅಷ್ಟೊಂದು ಭಯ ನನ್ನನ್ನು ಕಂಡು! ನಾನು ಜಗತ್ತಿನ ಹಿತಕ್ಕಾಗಿ ಅಷ್ಟೊಂದು ಪ್ರಯತ್ನಪಟ್ಟೆ. ಆದರೂ ಜನ ನನ್ನನ್ನು ಒಂದು ಅಪಶಕುನ ಎಂದು ಪರಿಗಣಿಸುತ್ತಾರಲ್ಲ! ಎಂದು ದುಃಖವಾಯಿತು. ನನ್ನ ಈ ಜೀವನದ ಕೊನೆಗಾಲದಲ್ಲಿ ನಾನು ಹೇಳುವುದೇನೆಂದರೆ: ನಾನು ಜಗತ್ತಿಗೇ ಒಡೆಯನಾಗಿದ್ದರೂ ಜಗತ್ತಿನ ನೋವು ಮತ್ತು ದುಃಖಗಳನ್ನು ಹೋಗಲಾಡಿಸಲು ನನಗೆ ಸಾಧ್ಯವಾಗಲಿಲ್ಲ. ಆದ್ದರಿಂದ ಯಾರೂ ಈ ಜಗತ್ತಿಗೆ ಒಳ್ಳೆಯದನ್ನು ಮಾಡಲಾರರು.'

ಲೋಕದ ಡೊಂಕನ್ನು ತಿದ್ದಲು ಹೋದರೆ, ನಮ್ಮ ಡೊಂಕು ಅಧಿಕವಾಗುತ್ತದೆ.

ಸಮಾಜ ಸೇವೆ

ಶ್ರೀರಾಮಕೃಷ್ಣರು: ''ಒಮ್ಮೆ ಶಂಭುಮಲ್ಲಿಕ ತಾನು ಕಟ್ಟಿಸಬೇಕೆಂದಿರುವ ಆಸ್ಪತ್ರೆ, ಔಷಧಾಲಯ, ಸ್ಕೂಲು, ರಸ್ತೆ, ಕೊಳ ಇವೇ ಮೊದಲಾದವುಗಳ ಮಾತು ಎತ್ತಿದ. ನಾನು ಆತನಿಗೆ ಹೇಳಿದೆ: 'ಆ ವಿಧದ ಕೆಲಸಗಳಿಗಾಗಿ ಸುಮ್ಮನೆ ಹುಡುಕಿಕೊಂಡು ಹೋಗಬೇಡ. ತಾನಾಗಿಯೇ ಬರುವ ಮತ್ತು ಅತ್ಯಾವಶ್ಯಕವಾಗಿರುವ ಕೆಲಸ ಕಾರ್ಯಗಳನ್ನು ಮಾತ್ರ ಮಾಡು – ನಿಷ್ಕಾಮ ಭಾವನೆಯಿಂದ.' ಬೇಕೂ ಅಂತ ಹೆಚ್ಚಾಗಿ ಕೆಲಸಕಾರ್ಯ ಗಂಟು ಹಾಕಿಕೊಳ್ಳುವುದು ಶ್ರೇಯಸ್ಕರವಲ್ಲ. ಹಾಗೆ ಮಾಡಿದರೆ ಭಗವಂತನನ್ನು ಮರೆತು ಬಿಡಬೇಕಾಗುತ್ತದೆ. ಒಮ್ಮೆ ಕೆಲವರು ಕಾಳೀಘಟ್ಟಕ್ಕೆ ಬಂದರು. ಅವರ ಇಡೀ ಸಮಯವೆಲ್ಲ ದಾನಧರ್ಮಾದಿ ಕಾರ್ಯಗಳಲ್ಲೇ ಕಳೆದುಹೋಯಿತು. ಅವರಿಗೆ ಭಗವತಿಯ ದರ್ಶನ ಮಾಡುವುದಕ್ಕೆ ಸಮಯವೇ ಸಿಗಲಿಲ್ಲ!... ಅದಕ್ಕಾಗಿಯೇ ನಾನು ಶಂಭುಮಲ್ಲಿಕನಿಗೆ ಹೇಳಿದೆ: 'ಒಂದು ಪಕ್ಷ ನಿನಗೆ ಭಗವಂತನ ಸಾಕ್ಷಾತ್ಕಾರ ಆಯಿತು ಅನ್ನು; ಆಗ ನೀನು ಆತನನ್ನು ನಿನಗೆ ಕೆಲವು ಆಸ್ಪತ್ರೆ, ಔಷಧಾಲಯ ಇವೇ ಮೊದಲಾದವನ್ನು ಕಟ್ಟಿಸಿ ಕೊಡುವಂತೆ ಕೇಳಿಕೊಳ್ಳುತ್ತೀಯಾ?' ಭಕ್ತ ಎಂದಿಗೂ ಹಾಗೆ ಮಾಡುವುದಿಲ್ಲ. ಅದಕ್ಕೆ ಬದಲು ಆತನನ್ನು ಪ್ರಾರ್ಥನೆ ಮಾಡಿಕೊಳ್ಳುತ್ತಾನೆ: 'ಹೇ ಭಗವಂತ, ನಿನ್ನ ಪಾದಪದ್ಮಗಳಲ್ಲಿ ನನಗೊಂದು ಸ್ಥಾನ ಕೊಡು. ನನ್ನನ್ನು ಸದಾ ನಿನ್ನೊಡನೆ ಇಟ್ಟುಕೊ. ನಿನ್ನ ಪಾದಪದ್ಮಗಳಲ್ಲಿ ನನಗೆ ಶ್ರದ್ಧೆ ಭಕ್ತಿ ಉಂಟಾಗುವಂತೆ ಮಾಡು.'

ನಮಗೆ ಅತ್ಯಂತ ಮೆಚ್ಚಿನ ವ್ಯಕ್ತಿಯನ್ನು ಸಂಧಿಸಿದಾಗ 'ನನಗೆ ಅದು ಕೊಡು, ಇದು ಕೊಡು' ಎಂದು ಕೇಳುತ್ತೇವೆಯೆ? ಅವನ ಸಾನ್ನಿಧ್ಯದಲ್ಲಿ ಎಲ್ಲ ಮರೆತುಹೋಗುತ್ತದೆ. ಹಾಗೆಯೇ ಭಗವಂತನು ನಮ್ಮ ಮುಂದೆ ನಿಂತಾಗ ಅದೆಂತಹ ಆನಂದವುಂಟಾಗುತ್ತದೆಯೆಂದರೆ ಜಗತ್ತೇ ಮರೆತು ಹೋಗುತ್ತದೆ. ಇನ್ನು ಆಸ್ಪತ್ರೆ ಮುಂತಾದವುಗಳ ಕತೆಯೇನು? ಅದಕ್ಕೇ ಶ್ರೀರಾಮಕೃಷ್ಣರು ಹೇಳುತ್ತಾರೆ, ಮೊದಲು ಕಾಳಿಯ ದರ್ಶನ, ಅನಂತರ ದಾನಧರ್ಮಾದಿಗಳು. ಈ ಚಿಂತನೆಯನ್ನೇ ಪ್ರತಿಬಿಂಬಿಸುತ್ತದೆ ಸ್ವಾಮಿ ವಿವೇಕಾನಂದರು ನಮಗೆ ನೀಡಿರುವ ಮಂತ್ರ: **ಆತ್ಮನೋ ಮೋಕ್ಷಾರ್ಥಂ ಜಗದ್ಧಿತಾಯ ಚ ।**

ಶ್ರೀರಾಮಕೃಷ್ಣರು: ''ಕರ್ಮಯೋಗ ಬಹಳ ಕಠಿಣ. ಶಾಸ್ತ್ರಗಳಲ್ಲಿ ಹೇಳಿರುವ ಕರ್ಮಗಳನ್ನೆಲ್ಲ ಈ ಕಲಿಯುಗದಲ್ಲಿ ಮಾಡಬೇಕೆಂದರೆ ಬಹಳ ಕಷ್ಟ. ಈ ಯುಗದಲ್ಲಿ ಅನ್ನಗತಪ್ರಾಣ. ಹೆಚ್ಚಾಗಿ ಕರ್ಮ ಸಾಧ್ಯವಿಲ್ಲ... ಕಲಿಯುಗಕ್ಕೆ ಸೂಕ್ತವಾದದ್ದು ಭಕ್ತಿಯೋಗ – ಭಗವಂತನ ನಾಮಗುಣಕೀರ್ತನೆ ಮತ್ತು ಪ್ರಾರ್ಥನೆ. ಭಕ್ತಿಯೋಗವೇ ಯುಗಧರ್ಮ.''

ಭಕ್ತಿಯೋಗವೇ ಯುಗಧರ್ಮ

ಶ್ರೀರಾಮಕೃಷ್ಣರು ಭಕ್ತಿಮಾರ್ಗಕ್ಕೆ ಹೆಚ್ಚು ಒತ್ತನ್ನು ನೀಡುತ್ತಾರೆ. ಅವರು ಬೇರೆ ಯೋಗಗಳಿಗೆ ಪ್ರಾಧಾನ್ಯವನ್ನು ನೀಡಲಿಲ್ಲವೆಂದಲ್ಲ. ಅವರು ಹೆಚ್ಚಾಗಿ ಭಕ್ತರನ್ನು ಕುರಿತು ಮಾತನಾಡುತ್ತಿದ್ದದರಿಂದ, ಜನಸಾಮಾನ್ಯರಿಗೆ ಭಕ್ತಿಯೇ ಸೂಕ್ತವಾದುದರಿಂದ ಅವರು ಭಕ್ತಿಯನ್ನೇ ಹೆಚ್ಚು ಬೋಧಿಸಿದರು. ಆಧುನಿಕ ಸಂದರ್ಭದಲ್ಲಿ ಭಕ್ತಿಮಾರ್ಗದ ಆವಶ್ಯಕತೆಯಿದೆ ಎಂಬುದಕ್ಕೆ ಈ ಕೆಳಗಿನ ಕೆಲವು ಕಾರಣಗಳನ್ನು ನೀಡಬಹುದು.

೧. ಈಗ ಜನರು ವೈವಿಧ್ಯವನ್ನು ಬಯಸುತ್ತಾರೆ. ಭಕ್ತಿಯೋಗದಲ್ಲಿ ಭಜನೆ, ಕೀರ್ತನೆ, ಪೂಜೆ, ಪ್ರಾರ್ಥನೆ ಮುಂತಾದವುಗಳು ಇರುತ್ತವೆ.

೨. ಜನರಿಗೆ ದಿಢೀರ್ ಫಲ ಬೇಕು, ತಾಳ್ಮೆ ಕಡಿಮೆ. ಭಕ್ತಿಮಾರ್ಗದಲ್ಲಿ ಏನಾದರೂ ಸಣ್ಣ ಪುಟ್ಟ ಅನುಭವಗಳು ಆಗುತ್ತಿರುತ್ತವೆ.

೩. ಜನರಿಗೆ ದೇಹಬುದ್ಧಿ ಅಧಿಕ (ಅನ್ನಗತ ಪ್ರಾಣ). ''ದೇಹಬುದ್ಧ್ಯಾ ತು ದಾಸೋಽಹಂ''. ದೇಹಬುದ್ಧಿ ಇರುವಾಗ ದಾಸಭಾವವೇ ಒಳ್ಳೆಯದು.

೪. ಭಕ್ತಿಯೋಗವು ಭಾವಶಕ್ತಿಗೆ ಒತ್ತನ್ನು ನೀಡುತ್ತದೆ (Emotion). ಜ್ಞಾನಯೋಗದಲ್ಲಿ ಆಲೋಚನಾ ಶಕ್ತಿ ಮುಖ್ಯ. ಆದರೆ ಭಕ್ತಿಯು ಕೇವಲ ಭಾವುಕತೆಯಾಗದಿರಲೆಂದು ಶ್ರೀರಾಮಕೃಷ್ಣರು ವಿಚಾರಕ್ಕೆ ಹೆಚ್ಚು ಒತ್ತನ್ನು ನೀಡುತ್ತಾರೆ.

೫. ಈಗಿನ ಶಿಕ್ಷಣ ಪದ್ಧತಿಯಲ್ಲಿ ಆಲೋಚನಾ ಶಕ್ತಿಗೆ ಹೆಚ್ಚು ಒತ್ತನ್ನು ನೀಡಲಾಗುತ್ತಿದೆ. ಆದರೆ ಭಾವಶುದ್ಧಿ, ಭಾವ ಪರಿವರ್ತನೆ ಅತ್ಯಂತ ಆವಶ್ಯಕ — ಪರಸ್ಪರ ಮಾನವೀಯ ಸಂಬಂಧವನ್ನು ಉತ್ತಮಪಡಿಸಲು. ಭಕ್ತಿಯೋಗದ ಮೂಲಕ ಭಾವಪರಿವರ್ತನೆಯಾಗುತ್ತದೆ.

೬. ನಾವಿಂದು ಸ್ಪರ್ಧಾತ್ಮಕ ಜಗತ್ತಿನಲ್ಲಿ ಬಾಳುತ್ತಿದ್ದೇವೆ. ಇದು ಒತ್ತಡ, ನರಬಿಗಿತಗಳಿಗೆ ಕಾರಣವಾಗುತ್ತದೆ. ಈ ನಿಟ್ಟಿನಲ್ಲಿ ಭಜನೆ ಮುಂತಾದ ಭಕ್ತಿಸಾಧನೆಗಳು ತುಂಬ ಸಹಾಯಕವಾಗುತ್ತವೆ.

(ಮುಂದುವರಿಯುವುದು)

ಶ್ರೀಮಾತೆ: ತಾಯಿ, ಗುರು, ದೇವಿ

ಸ್ವಾಮಿ ಅಘಹರಾನಂದ

ಶ್ರೀಮಾತೆಯವರ ವ್ಯಕ್ತಿತ್ವದಲ್ಲಿ ದೈವೀ ಹಾಗೂ ಮಾನವೀ ನೆಲೆಯ ಸ್ವಭಾವಗಳು ಮಿಲನಗೊಂಡಿದ್ದವು. ಶ್ರೀರಾಮಕೃಷ್ಣರ ಅವತರಣ ಕಾರ್ಯದಲ್ಲಿ ಸಹಾಯಕಿಯಾಗಿ ಧರೆಗಿಳಿದ ಜಗನ್ಮಾತೆ, ತಮ್ಮ ಹತ್ತು ಹಲವು ಬಗೆಯ ವ್ಯಕ್ತಿತ್ವವನ್ನು ವಿವಿಧ ಸಂದರ್ಭಗಳಲ್ಲಿ ವ್ಯಕ್ತಗೊಳಿಸುತ್ತಾರೆ. ಈ ಕುರಿತು ಇಲ್ಲಿ ಬರೆದಿರುವ ಲೇಖಕರು ಮೈಸೂರು ಶ್ರೀರಾಮಕೃಷ್ಣ ವಿದ್ಯಾಶಾಲೆಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

ಪೀಠಿಕೆ

ನಮ್ಮ ಸ್ಥೂಲನೋಟಕ್ಕೆ ಶ್ರೀಮಾತೆಯವರು ಮೊದಲು ಪ್ರೇಮಮಯಿ ಮಾತೆಯಾಗಿ, ವಾತ್ಸಲ್ಯಧಾರೆ ಹರಿಸುವ ಜನನಿಯಾಗಿ ತೋರಿಬರುತ್ತಾರೆ. ಆ ಪ್ರೇಮದಿಂದ ಆಕರ್ಷಿತರಾಗಿ ಬಳಿ ಸಾರಿದರೆ ಆಗ ನಮ್ಮ ಅರಿವಿಗೆ ಬರುತ್ತದೆ: ಅವರು ಕೇವಲ ಮುದ್ದುಮಾಡುವ ತಾಯಿಯಲ್ಲ, ದಿವ್ಯಜ್ಞಾನ ಸಾರವನ್ನು ಕರುಣಿಸುವ ಶಾರದಾಮಾತೆ, ಗುರುಸ್ವರೂಪಿಣಿ ಎನ್ನುವುದು. ಅನಂತರ, ಅವರ ಅಲೌಕಿಕ ವ್ಯಕ್ತಿತ್ವದ ಪ್ರಭೆಯನ್ನು ಗುರುತಿಸಿದಂತೆ, ಅತಿಮಾನುಷ ಮಹಿಮೆಯನ್ನು ಮನಗಂಡಂತೆ, ಅವರೇ ಸ್ವಯಂ ಮಂತ್ರಸ್ವರೂಪಿಣಿ, ದೇವಿ, ಜಗನ್ಮಾತೆ ಎನ್ನುವುದೂ ನಮಗೆ ಹೊಳೆಯುತ್ತದೆ. ಹೀಗೆ, ಶ್ರೀಮಾತೆಯವರನ್ನು ನಾವು ಮೂರು ವಿಭಿನ್ನ ಪಾತ್ರಗಳಲ್ಲಿ ಮಾತೆಯಂತೆ, ಗುರುವಿನಂತೆ ಮತ್ತು ದೇವಿಯಂತೆ ಕಲ್ಪಿಸಿ, ಪರಿಭಾವಿಸಬಹುದು. ಇದಕ್ಕೆ ನಿದರ್ಶನವೆಂಬಂತೆ ಕೆಲವೊಂದು ಘಟನೆಗಳನ್ನು ನೋಡೋಣ.

ತಾಯಿಯಾಗಿ ಶ್ರೀಮಾತೆ ಶಾರದಾದೇವಿಯವರು

‘ದೇವೀ ಮಾಹಾತ್ಮ್ಯ’ದಲ್ಲಿ ಹೇಳುವಂತೆ, ‘ಯಾ ದೇವೀ ಸರ್ವಭೂತೇಷು ಮಾತೃರೂಪೇಣ ಸಂಸ್ಥಿತಾ’ – ಪ್ರಾಣಿಗಳಿಂದ ಹಿಡಿದು ಮನುಷ್ಯನವರೆಗಿನ ಸಕಲ ಜೀವಿಗಳಲ್ಲಿ ತಾಯಿಯಾಗಿ ವ್ಯಕ್ತವಾಗಿರುವವಳು ಸಾಕ್ಷಾತ್ ಭಗವತಿಯೇ ಅಲ್ಲದೆ ಮತ್ತಾರೂ ಅಲ್ಲ. ಶ್ರೀಮಾತೆ ಶಾರದಾದೇವಿಯವರ ಅಂತರಂಗದಿಂದ ಸರ್ವಜೀವಿಗಳ ಮೇಲೆ ವಾತ್ಸಲ್ಯ ಹೇಗೆ ಹೊರಹೊಮ್ಮುತ್ತಿತ್ತು ಎಂಬುದನ್ನು ತೋರಿಸುವ ಅಸಂಖ್ಯಾತ ಪ್ರಸಂಗಗಳನ್ನು ನೋಡುತ್ತಿದ್ದಂತೆ, ನಮ್ಮ ಹೃದಯದಲ್ಲಿ ಅವರ ವಿಶ್ವಮಾತೃತ್ವದ ಅರ್ಥ ತಾನಾಗಿಯೇ ಸ್ಫುರಿಸುತ್ತದೆ.



ಒಮ್ಮೆ ಒಬ್ಬಳು ಭಕ್ತೆ ತನ್ನ ಮಗುವನ್ನು ಅಲ್ಲೇ ಹಾಸಿದ್ದ ಶ್ರೀಮಾತೆಯವರ ಕಂಬಳಿಯ ಮೇಲೆ ಮಲಗಿಸಿ ಮಾತುಕತೆಯಾಡುತ್ತಿದ್ದಳು. ಮಗು ಆ ಕಂಬಳಿಯ ಮೇಲೇ ಹೇಸಿಗೆ ಮಾಡಿಬಿಟ್ಟಿತು. ಮಗುವಿನ ತಾಯಿ ಸಹಜವಾಗಿಯೇ ಕಸಿವಿಸಿಗೊಂಡು ಕಂಬಳಿಯನ್ನು ತೊಳೆಯಲು ಮುಂದಾದಳು. ಸಾಮಾನ್ಯವಾಗಿ ಇಂಥ ಸಂದರ್ಭದಲ್ಲಿ ಯಾರೂ ಮಗುವಿನ ತಾಯಿಯನ್ನು ತಡೆಯಹೋಗುವುದಿಲ್ಲ, ಏಕೆಂದರೆ ಅದು ತಾಯಿ ಮಾಡಬೇಕಾದ ಕೆಲಸವೇ ಎನ್ನುವುದು ಸಾರ್ವತ್ರಿಕ ನಿಯಮ. ಆದರೆ ಶ್ರೀಮಾತೆಯವರು ಅವಳ ಕೈಯಿಂದ ಕಂಬಳಿಯನ್ನು ಕಿತ್ತುಕೊಂಡು ತಾವೇ ತೊಳೆದುಬಿಟ್ಟರು. ‘‘ಅಮ್ಮ, ಅದನ್ನು ನೀವೇಕೆ ತೊಳೆಯಬೇಕು?’’ ಎಂದು ಆ ಭಕ್ತೆ ಎಷ್ಟೋ ಆಕ್ಷೇಪಿಸಿದಳು. ಶ್ರೀಮಾತೆಯವರು ತಕ್ಷಣ ಚುಟುಕಾಗಿ ಹಾಗೂ ವಾತ್ಸಲ್ಯ ತುಂಬಿ ಹೇಳಿದರು, ‘‘ಯಾಕೆ ತೊಳೆಯಬಾರದು? ಈ ಮಗುವೇನು ನನಗೆ ಬೇರೆಯೆ?’’ ಇಲ್ಲಿ ಶ್ರೀಮಾತೆಯವರು ಪರರ ಮಕ್ಕಳನ್ನೂ ತಮ್ಮ ಸ್ವಂತ ಮಕ್ಕಳೆಂದೇ ಹೃತ್ಪೂರ್ವಕವಾಗಿ ಭಾವಿಸಿ ಕಿಂಚಿತ್ತೂ ಅಸಹ್ಯಪಟ್ಟುಕೊಳ್ಳದೆ ಕಂಬಳಿಯನ್ನು ತೊಳೆಯಲು ಸಿದ್ಧರಾಗಿದ್ದುದನ್ನು ನಾವು ಕಾಣುತ್ತೇವೆ.

ಒಮ್ಮೆ ಒಬ್ಬ ಭಕ್ತ ಶ್ರೀಮಾತೆಯವರಿಗೆ ಒಂದು ಕರೆಯುವ ಹಸುವನ್ನು ಕಾಣಿಕೆಯಾಗಿ ಕೊಟ್ಟ, ಅಲ್ಲದೆ ಅದನ್ನು ನೋಡಿಕೊಳ್ಳಲು ಗೋವಿಂದ ಎಂಬ ಒಬ್ಬ ಅನಾಥ ಹುಡುಗನನ್ನೂ ತಾನೇ ಸಂಬಳ ಕೊಟ್ಟು ವ್ಯವಸ್ಥೆ ಮಾಡಿದ. ಈ ಹುಡುಗನ ನಡವಳಿಕೆ ತುಂಬ ಹಿತವಾಗಿತ್ತು. ಸದಾ ಹಸನ್ಮುಖಿಯಾಗಿರುತ್ತಿದ್ದ. ಒಮ್ಮೆ ಇವನಿಗೆ ಮೈಯೆಲ್ಲ ಕಜ್ಜಿ ಎದ್ದು ತುರಿಕೆ-ಉರಿ ಹತ್ತಿ

ಕೊಂಡಿತು. ಇದೊಂದು ಸಣ್ಣ ವಿಷಯ. ತಾನಾಗಿಯೇ ಹೊರಟು ಹೋಗುತ್ತದೆ ಎಂದು ಎಲ್ಲರೂ ಭಾವಿಸಿದ್ದರು. ಆದರೆ ಕೆಲವು ನಾಟಿ ಔಷಧಿಗಳನ್ನು ಹಚ್ಚಿದ ಮೇಲೂ ಅದು ವಾಸಿಯಾಗಲಿಲ್ಲ. ಒಂದು ರಾತ್ರಿ ಇದ್ದಕ್ಕಿದ್ದಂತೆ ಉರಿ ಹೆಚ್ಚಿ ರಾತ್ರಿಯಿಡೀ ನಿದ್ರೆ ಇಲ್ಲ ದಂತಾಯಿತು. ಹುಡುಗ, ಪಾಪ! ಒಂದೇ ಸಮನೆ ಅಳುತ್ತಿದ್ದ. ಅದನ್ನು ಕೇಳುತ್ತ ಅತ್ತ ಶ್ರೀಮಾತೆಯವರಿಗೂ ನಿದ್ರೆಯಿಲ್ಲ. ರಾತ್ರಿಯೆಲ್ಲ ಮರುಕದಿಂದ ತೊಳಲಾಡುತ್ತಿದ್ದರು. ಮರುದಿನ ಬೆಳಕು ಹರಿಯುತ್ತಿದ್ದಂತೆ. ಅವರೇ ಅವನಿಗೆ ಔಷಧಿ ತಯಾರಿ ಸಲು ಸಿದ್ಧರಾದರು. ಒಂದಿಷ್ಟು ಬೇವಿನ ಸೊಪ್ಪಿನೊಂದಿಗೆ ಅರಸಿನವನ್ನು ಸೇರಿಸಿ ನುಣ್ಣಗೆ ಅರೆದು ಸಿದ್ಧಮಾಡಿಟ್ಟುಕೊಂಡು ಆ ಹುಡುಗನನ್ನು ಕರೆದರು. ಆ ರಸವನ್ನು ಸ್ವಲ್ಪ ಸ್ವಲ್ಪವಾಗಿ ಅವನ ಕೈಗೆ ಕೊಡುತ್ತ ಅದನ್ನು ಕಜ್ಜಿಯ ಮೇಲೆ ಹೇಗೆ ಲೇಪಿಸಿಕೊಳ್ಳ ಬೇಕು ಎಂಬುದನ್ನು ತಿಳಿಸಿಕೊಟ್ಟರು. ಶ್ರೀಮಾತೆಯವರು ತೋರುತ್ತಿದ್ದ ಪ್ರೀತಿ-ಕರುಣೆಗಳನ್ನು ಕಂಡು ಆ ಹುಡುಗ ಗೋವಿಂದನ ಮುಖ ಕೃತಜ್ಞತೆಯಿಂದ ಬೆಳಗುತ್ತಿತ್ತು. ತಾಯಿ ಯಿಲ್ಲದ ಅವನು, ಸಂಕೋಚಪಡದೆ ಶ್ರೀಮಾತೆಯವರೆದುರು ನಿಂತು, ಅವರು ಹೇಳಿಕೊಟ್ಟಂತೆ ಔಷಧಿಯನ್ನು ಹಚ್ಚಿಕೊಂಡ. ಶ್ರೀಮಾತೆಯವರು ಮಾಡಿದ ಚಿಕಿತ್ಸೆಯಿಂದ ಹುಡುಗನ ಕಾಯಿಲೆ ಬೇಗನೆ ವಾಸಿಯಾಯಿತು.

ಒಂದು ದಿನ ಶ್ರೀಮಾತೆಯವರ ಮನೆಯಲ್ಲಿದ್ದ ಮುಗ್ಧ ಕರು, ಅದೇಕೋ ಒಂದೇ ಸಮನೆ ಕೂಗಿಕೊಳ್ಳಲು ಶುರು ಮಾಡಿತು. ಅದು ಕೂಗುತ್ತಿದ್ದ ಕ್ರಮವನ್ನು ನೋಡಿ, ಎಲ್ಲರೂ ಅದಕ್ಕೆಲ್ಲೋ ಹೊಟ್ಟೆ ನೋವಾಗಿರಬೇಕು ಎಂದು ಊಹಿಸಿದರು. ಈಗ ಇದಕ್ಕೇನು ಮಾಡಬೇಕು ಎಂದು ಗೊತ್ತಾಗದೆ, ಎಲ್ಲರೂ ತಮತಮಗೆ ತಿಳಿದಂತೆ ಔಷಧಿ ಮಾಡಿದರು. ಅವರವರಿಗೆ ತಿಳಿ ದಿದ್ದ ಅರೆವೈದ್ಯವನ್ನು ಪ್ರಯೋಗ ಮಾಡಿ ನೋಡುವುದಕ್ಕೆ ಈ ಕರು ಎರವಾಯಿತೇ ಹೊರತು ಅದರ ಅರಚಾಟ ಮಾತ್ರ ನಿಲ್ಲಲಿಲ್ಲ. ಅದನ್ನು ಕೇಳಿ, ಈ ಹೊತ್ತಿಗೆ ಶ್ರೀಮಾತೆಯವರೂ ಅಲ್ಲಿಗೆ ಬಂದರು. ಬಂದವರು, ಅದು ತನ್ನ ಸ್ವಂತ ಮಗುವೋ ಎಂಬಂತೆ ಅದನ್ನು ತಬ್ಬಿಕೊಂಡು ಅದರ ಹೊಟ್ಟೆಯನ್ನು ತಿಕ್ಕುತ್ತ, ಮೆಲ್ಲನೆ ತಟ್ಟುತ್ತ, ವಾತ್ಸಲ್ಯ ತೋರಿದರು. ಆಶ್ಚರ್ಯ! ಸ್ವಲ್ಪ ಹೊತ್ತಿನಲ್ಲೇ ಅದರ ನೋವು ಅಡಗಿತು, ಕೂಗು ನಿಂತಿತು. ಆ ಕರುವಿಗೆ ತನ್ಮೂಲಕ ಶ್ರೀಮಾತೆಯವರ ವಾತ್ಸಲ್ಯಾಮೃತಪಾನ ವಾಯಿತು.

ಶ್ರೀಮಾತೆಯವರ ಮಾತೃಭಾವದ ಮತ್ತೊಂದು ಅಂಶ ವೆಂದರೆ ಅವರು ತಮ್ಮ ಎಲ್ಲ ಮಕ್ಕಳ ವಿಷಯದಲ್ಲೂ ಸಮಾನ ವಾದ ವಾತ್ಸಲ್ಯ-ಪ್ರೇಮ ತೋರುತ್ತಿದ್ದುದು. ಯಾವೊಬ್ಬ ಮನು ಷ್ಯನೂ ನೂರಕ್ಕೆ ನೂರು ಪಾಲು ದೋಷರಹಿತನಲ್ಲ ಎಂಬ ಅರಿವು ಅವರಿಗಿತ್ತು. ಒಮ್ಮೆ ಶ್ರೀರಾಮಕೃಷ್ಣರ ಸಂನ್ಯಾಸೀ ಶಿಷ್ಯರೊಬ್ಬರು ಒಬ್ಬ ಭಕ್ತನ ಶೀಲಭ್ರಷ್ಟತೆಯನ್ನು ಕಂಡು ಜುಗುಪ್ಸೆಗೊಂಡು, ''ಅಮ್ಮಾ, ನೀವು ಆತನನ್ನು ನಿಮ್ಮ ಬಳಿಗೆ ಬರಗೊಡಬಾರದು'' ಎಂದು ಬೇಡಿಕೊಂಡರು. ಆಗ ಶ್ರೀಮಾತೆಯವರು ಗಂಭಿರವಾಗಿ ಉತ್ತರಿಸಿದರು: ''ಏನಪ್ಪ, ನನ್ನ ಮಗು ಕೆಸರಿನಲ್ಲಾಡಿ ಮೈಕೊಳೆ ಮಾಡಿಕೊಂಡರೆ, ಅದರ ಮೈತೊಳೆದು ಮಡಿಲಲ್ಲೆತ್ತಿಕೊಳ್ಳಬೇಕಾ ದವಳು, ತಾಯಿಯಾದ ನಾನಲ್ಲದೆ ಇನ್ಯಾರು?'' ಶೀಲಭ್ರಷ್ಟತೆ ಎಂಬುದು ವ್ಯಕ್ತಿತ್ವಕ್ಕೆ ಅಂಟಿಕೊಳ್ಳುವ ಕೊಳೆ ಮಾತ್ರವೇ; ತನ್ನ ಸಂತಾನದ ವಿಷಯದಲ್ಲಿ ಶ್ರೀಮಾತೆಯಾಗಿ ಅವತರಿಸಿದ ಕರುಣಾ ಮಯಿಯಾದ ಜಗನ್ಮಾತೆ ಆ ಕೊಳೆಯನ್ನು ತೊಳೆದು ತನ್ನ ಮಡಿ ಲಲ್ಲೆತ್ತಿಕೊಳ್ಳಲು ಸದಾ ಸಿದ್ಧಳಾಗಿರುತ್ತಾಳೆ. ಈ ಕುರಿತಾಗಿ ಕೆಲ ವೊಂದು ಪ್ರಸಂಗಗಳನ್ನು ನೋಡೋಣ.

ಜಯರಾಂಬಾಟಿಯ ನೆರೆಗ್ರಾಮದಲ್ಲಿ ಶ್ರೀಮಂತ ಮನೆ ತನಕ್ಕೆ ಸೇರಿದ ಒಬ್ಬ ವಿದ್ಯಾವಂತ ಯುವಕನಿದ್ದ. ಅವನಿಗೆ ಶ್ರೀಮಾತೆಯವರಿಂದ ಮಂತ್ರದೀಕ್ಷೆ ಪಡೆಯುವ ಭಾಗ್ಯ ಲಭಿ ಸಿತ್ತು. ಅವನು ಆಗಾಗ ಅವರ ಬಳಿಗೆ ಬಂದುಹೋಗುತ್ತಿದ್ದ. ಅವನ ಸಹಾಯ, ಪ್ರೋತ್ಸಾಹಗಳಿಂದಲೇ ಆತನ ಗ್ರಾಮದಲ್ಲಿ ಒಂದು ಸಣ್ಣ ಆಶ್ರಮವೂ ಸ್ಥಾಪನೆಯಾಗಿತ್ತು. ಹೀಗೆ ಆ ಯುವಕ ಸತ್ಕಾರ್ಯದಲ್ಲೇನೋ ನಿರತನಾಗಿದ್ದ. ಆದರೆ ದುರದೃಷ್ಟವಶಾತ್ ಆತ ತನ್ನ ಹತ್ತಿರದ ಸಂಬಂಧಿಕಳಾದ ಒಬ್ಬಳು ಯುವತಿಯ ಮೋಹಕ್ಕೆ ಸಿಲುಕಿದ. ಆಕೆಯೋ ಬಾಲವಿಧವೆ, ಇಬ್ಬರ ನಡುವಿನ ಅನೈತಿಕ ಸಂಬಂಧ ಬೇಗನೆ ಬಯಲಾಯಿತು. ಸರಿ; ಆತನ ಸಂಬಂಧವಾಗಿ ಅಪವಾದದ ಮಾತು ಹರಡಿತು; ಜಯರಾಂ ಬಾಟಿಗೂ ತಲುಪಿತು. ಈ ಸುದ್ದಿಯನ್ನು ಕೇಳಿ ಭಕ್ತರೆಲ್ಲ ಕೋಪೋ ದ್ರಿಕ್ತರಾಗಿ ಇನ್ನು ಮೇಲೆ ಆತನನ್ನು ತಮ್ಮ ಬಳಿಗೆ ಬರಗೊಡ ಬಾರದು ಎಂದು ಶ್ರೀಮಾತೆಯವರನ್ನು ಆಗ್ರಹಪಡಿಸಿದರು. ತಮ್ಮ ಶಿಷ್ಯನ ಕಥೆ ಕೇಳಿ ಶ್ರೀಮಾತೆಯವರು ತುಂಬಾ ದುಃಖ ವ್ಯಕ್ತಪಡಿಸಿದರು. ಆದರೆ ಅವರು ಅಷ್ಟೇ ದೃಢವಾಗಿ ಭಕ್ತರ ಹತ್ತಿರ ಹೇಳಿಬಿಟ್ಟರು: ''ನಾನು ಅವನ ತಾಯಿಯಾಗಿ ಇಲ್ಲಿಗೆ ಬರಬೇಡ ಅಂತ ಹೇಗೆ ಹೇಳಲಿ? ಅಂಥ ಮಾತು ನನ್ನ ಬಾಯಿಂದ ಹೊರ ಬೀಳದು.'' ಅವರ ಕ್ಷಮಾಶೀಲತೆಯನ್ನೂ ದೃಢತೆಯನ್ನೂ ಕಂಡು ಉಳಿದವರು ಸುಮ್ಮನಾಗಲೇಬೇಕಾಯಿತು. ಆ ಯುವಕ ಎಂದಿ ನಂತೆಯೇ ಅವರ ಬಳಿಗೆ ಬಂದು ಹೋಗುತ್ತಿದ್ದ. ಬಹುಶಃ ಅವ ನಿಗೆ ತನ್ನ ತಪ್ಪಿನ ಅರಿವಾಗಿ ಪಶ್ಚಾತ್ತಾಪವಾಗಿರಬೇಕು. ಆದ್ದರಿಂದ ಶ್ರೀಮಾತೆಯವರು ಅವಿನಿಗೇನೂ ಹೇಳಹೋಗಲಿಲ್ಲ. ಒಂದು ದಿನ ಅವನು ಆ ಯುವತಿಯನ್ನೂ ಕರೆತಂದ. ಆಗ ಶ್ರೀಮಾತೆ ಯವರು, ಇನ್ನು ಮುಂದಾದರೂ ಎಚ್ಚರದಿಂದಿರು ವಂತೆ ಅವರಿ ಬ್ಬರಿಗೂ ಬುದ್ಧಿ ಹೇಳಿದರು. ಆ ಯುವತಿಯ ಮೇಲೂ ಅವರ ವಾತ್ಸಲ್ಯವೇನೂ ಕಡಿಮೆಯಿದ್ದಂತೆ ತೋರಲಿಲ್ಲ. ತಮ್ಮ ಉಳಿದ ಹೆಣ್ಣುಮಕ್ಕಳನ್ನು ಹೇಗೋ ಅಷ್ಟೇ ಪ್ರೀತ್ಯಾದರಗಳಿಂದ ಅವಳನ್ನೂ ನೋಡಿಕೊಂಡರು.

ಶ್ರೀಮಾತೆಯವರು ಆಗ ಕಲ್ಕತ್ತದ ಬೋಸ್‌ಪಾರಾ ಲೇನಿನ ಮನೆಯಲ್ಲಿ ವಾಸಿಸುತ್ತಿದ್ದರು. ಆಗ ಬೇಲೂರು ಮಠದ ಒಬ್ಬ ಕೆಲಸದವನು ಏನನ್ನೋ ಕದ್ದು ಸಿಕ್ಕಿಬಿದ್ದ. ಇದನ್ನು ತಿಳಿದ ಸ್ವಾಮಿ ವಿವೇಕಾನಂದರು ಕೂಡಲೇ ಅವನನ್ನು ಗೇಟು ದಾಟಿಸಿದರು. ಆದರೆ ಆತ ಕಡುಬಡವ; ಅವನ ಅಲ್ಪ ಸಂಪಾದನೆಯ ಮೇಲೇ

ಅವನ ಸಂಸಾರ ಕುಂಟುತ್ತಿತ್ತು. ಆಗ ಅದಕ್ಕೂ ಅವಕಾಶವಿಲ್ಲದೆ ಬಿದ್ದುಹೋಗುವ ಸ್ಥಿತಿಗೆ ಬಂತು. ಆತ ಶ್ರೀಮಾತೆಯವರ ಬಳಿಗೆ ಓಡಿಬಂದ. ಶ್ರೀಮಾತೆಯವರು ಕರುಣಾಮಯಿ, ಅವರು ಕರುಣೆ ತೋರಿದರೆ ತನ್ನ ಕೆಲಸ ಉಳಿದೀತು ಎಂದು ಯಾರಿಂದಲೋ ಕೇಳಿ ತಿಳಿದಿರಬೇಕು. ಓಡಿಹೋಗಿ ಅವರ ಕಾಲಿಗೆ ಬಿದ್ದು ಕಣ್ಣೀರ್ಗರೆದ. ಶ್ರೀಮಾತೆಯವರು ಅವನ ಬಗ್ಗೆ ಮರುಕ ಪಟ್ಟು, ಆ ದಿನ ತಮ್ಮ ಮನೆಯಲ್ಲೇ ಇರಿಸಿಕೊಂಡು, ಸ್ನಾನಾಹಾರಗಳ ವ್ಯವಸ್ಥೆ ಮಾಡಿಸಿದರು. ಅದೇ ಸಾಯಂಕಾಲ ಸ್ವಾಮಿ ಪ್ರೇಮಾನಂದರು ತಮ್ಮ ದರ್ಶನಕ್ಕಾಗಿ ಬಂದಾಗ, ''ನೋಡಪ್ಪ, ಬಾಬುರಾಮ್, ಈ ಮನುಷ್ಯ ಬಹಳ ಬಡವ. ಇವನು ಕಳ್ಳತನ ಮಾಡಿದ ನಿಜ. ಆದರೆ ಇವನು ಕದಿಯುವುದಕ್ಕೆ ಇವನ ಬಡತನವೇ ಕಾರಣವಲ್ಲವೇನಪ್ಪ? ಇಷ್ಟಕ್ಕೇ ನರೇನ್, ಇವನನ್ನು ಬೈದು ಓಡಿಸಿಬಿಡುವುದೆ? ಪ್ರಪಂಚ ಬಹಳ ಕಷ್ಟವಪ್ಪಾ, ನೀವು ಸಂನ್ಯಾಸಿಗಳು. ನಿಮಗೆ ಆ ಕಷ್ಟವೆಲ್ಲಾ ಗೊತ್ತಾಗುವುದಿಲ್ಲ. ಇವನನ್ನು ಪುನಃ ಕರೆದುಕೊಂಡು ಹೋಗು'' ಎಂದರು. ಪ್ರೇಮಾನಂದರಿಗಾಗ ಪೀಕಲಾಟಕ್ಕಿಟ್ಟುಕೊಂಡಿತು. ತಾವೀಗ ಇವನನ್ನು ವಾಪಸು ಕರೆತಂದರೆ ವಿವೇಕಾನಂದರು ರೇಗುತ್ತಾರೆ ಎಂಬ ಅಂಶವನ್ನು ಶ್ರೀಮಾತೆಯವರಿಗೆ ವಿವರಿಸಲು ನೋಡಿದರು. ಆದರೆ ಅವರು ಅದಕ್ಕೆ ಕಿವಿಗೊಡದೆ ಸ್ವಲ್ಪ ಜೋರಾಗಿಯೇ, ''ನೋಡು, ನಾನು ಹೇಳುತ್ತಿದ್ದೇನೆ, ಕರೆದುಕೊಂಡು ಹೋಗು ಅವನನ್ನು'' ಎಂದುಬಿಟ್ಟರು. ಇನ್ನೇನು ತಾನೆ ಹೇಳಿಯಾರು ಪ್ರೇಮಾನಂದರು? ಅವನನ್ನು ಕರೆದುಕೊಂಡು ಸಂಜೆಗತ್ತಲ ಹೊತ್ತಿಗೆ ಮಠದ ಗೇಟಿನೊಳಗೆ ಮೆಲ್ಲಗೆ ಪ್ರವೇಶಿಸಿದರೆ.. ಅವರೆಂದುಕೊಂಡಂತೆಯೇ ಆಯಿತು. ಸ್ವಾಮಿ ವಿವೇಕಾನಂದರು ಇವರನ್ನು ಕಂಡವರೇ, ''ನೋಡು ಈ ಬಾಬುರಾಮನ ಕೆಲಸವನ್ನು! ಅವನನ್ನು ಮತ್ತೆ ಕರೆದುಕೊಂಡು ಬಂದುಬಿಟ್ಟಿದ್ದಾನೆ'' ಎಂದು ಅಬ್ಬರಿಸಿದರು. ''ಆದರೆ ಇದು ಶ್ರೀಮಾತೆಯವರ ಆಜ್ಞೆ'' ಎಂದು ಸ್ವಾಮಿ ಪ್ರೇಮಾನಂದರು ವಿವರಿಸಿದಾಗ ಜಗದ್ವಿಖ್ಯಾತ ವಿವೇಕಾನಂದರು ಗಪ್‌ಚಿಪ್.

ಶ್ರೀಮಾತೆಯವರ ವಾತ್ಸಲ್ಯವೆನ್ನುವುದು ಜಾತಿ-ಕುಲ, ಗುಣ-ದೋಷ, ಲೌಕಿಕ ಸ್ಥಿತಿಗತಿ ಮೊದಲಾದ ಎಲ್ಲ ಅಂಶಗಳನ್ನೂ ಮೀರಿ ನಿಂತಿತ್ತು. ಜಯರಾಂಬಾಟಿಗೆ ಸಮೀಪದ ಶಿರೋಮಣಿಪುರ ಎಂಬಲ್ಲಿ ಮುಸಲ್ಮಾನರು ಬಹುಸಂಖ್ಯೆಯಲ್ಲಿ ವಾಸಿಸುತ್ತಿದ್ದರು. ರೇಷ್ಮೆ ವ್ಯವಸಾಯ ಇವರ ಮುಖ್ಯ ವೃತ್ತಿ. ಇವರು ಸಾಕಷ್ಟು ಅನುಕೂಲವಾಗಿಯೇ ಇದ್ದರು. ಆದರೆ ಮಾರುಕಟ್ಟೆಯಲ್ಲಿ ಪಾಶ್ಚಾತ್ಯರ ಪೈಪೋಟಿ ಹೆಚ್ಚಾಗಿ ಆ ಹಳ್ಳಿಗಳಲ್ಲಿನ ಗೃಹಕೈಗಾರಿಕೆ ಸಂಪೂರ್ಣ ಮಣ್ಣುಮುಕ್ಕಿತು. ಈ ಗೃಹಕೈಗಾರಿಕೆಯನ್ನೇ ನೆಚ್ಚಿಕೊಂಡಿದ್ದ ಹಲವಾರು ಕುಟುಂಬಗಳು ದಾರಿದ್ರ್ಯಕ್ಕೆ ಬಲಿಯಾದವು. ಪ್ರಾಮಾಣಿಕ ಜೀವನ ನಡೆಸಲು ಬೇರೆ ಯಾವುದೇ ಮಾರ್ಗ ತೋರದೆ ಆ ಮುಸಲ್ಮಾನರು ಜೀವನೋಪಾಯಕ್ಕಾಗಿ ಕಳ್ಳತನ-ದರೋಡೆಗಳಿಗೆ ಇಳಿದರು. ಇವರಿಗೆಲ್ಲ ರೇಷ್ಮೆ ಡಕಾಯಿತರು ಎಂದೇ ಹೆಸರು ಅಂಟಿಕೊಂಡಿತು. ಜಯರಾಂಬಾಟಿಗೂ ಸೇರಿದಂತೆ ಸುತ್ತಮುತ್ತಲ ಹಳ್ಳಿಗಳಲ್ಲೆಲ್ಲ ಜನ ಇವರಿಗೆ ಹೆದರುತ್ತಿದ್ದರು. ಇವರಲ್ಲೂ ಕೆಲವರು ನ್ಯಾಯವಾಗಿ ಬದುಕುವ ಇಚ್ಛೆಯಿದ್ದವರು ಇರಲಿಲ್ಲವೆಂದಲ್ಲ. ಆದರೆ ಮೊದಲೇ ಮುಸಲ್ಮಾನರು; ಸಾಲದ್ದಕ್ಕೆ ಡಕಾಯಿತರೆಂಬ ಕುಖ್ಯಾತಿಗೊಳಗಾದವರು. ಆದ್ದರಿಂದ ಹಿಂದೂಗಳೆಲ್ಲ ಅವರನ್ನು ದೂರದಲ್ಲೇ ಇಟ್ಟಿದ್ದರು. ಈ ಜನರನ್ನು ಶ್ರೀಮಾತೆಯವರು ಹೇಗೆ ನಡೆಸಿಕೊಳ್ಳುತ್ತಿದ್ದರು ಎನ್ನುವುದಕ್ಕೆ ದೃಷ್ಟಾಂತವಾಗಿ ಈ ಕೆಳಗಿನ ಉದಾಹರಣೆಯಿದೆ:

ಒಂದು ದಿನ ಒಬ್ಬ ರೇಷ್ಮೆ ಡಕಾಯಿತ ಕೈಯಲ್ಲೊಂದು ಚಿಪ್ಪು ಬಾಳೆಹಣ್ಣು ಹಿಡಿದು ಶ್ರೀಮಾತೆಯವರ ಬಳಿಗೆ ಬಂದು, ''ಅಮ್ಮಾ, ಶ್ರೀರಾಮಕೃಷ್ಣರಿಗೋಸ್ಕರ ಸ್ವಲ್ಪ ಬಾಳೆಹಣ್ಣುಗಳನ್ನು ತಂದಿದ್ದೇನೆ. ಸ್ವೀಕರಿಸುತ್ತೀರಾ?'' ಎಂದು ಕೇಳಿಕೊಂಡ. ಮೊದಲೇ ಆತ ಮುಸಲ್ಮಾನ, ಸಾಲದ್ದಕ್ಕೆ ಡಕಾಯಿತ. ಅವನೀಗ ತಂದಿರುವ ಬಾಳೆಹಣ್ಣು ಕೂಡ ಕದ್ದದ್ದೋ ಏನೋ, ಯಾರಿಗೆ ಗೊತ್ತು! ಇಂಥ ಪರಿಸ್ಥಿತಿಯಲ್ಲಿ ಯಾರಾದರೂ ಅದನ್ನು ನೈವೇದ್ಯಕ್ಕೆ ಸ್ವೀಕರಿಸಿಯಾರೆ? ಆದರೆ ಶ್ರೀಮಾತೆಯವರು ಮಾತ್ರ ಕಿಂಚಿತ್ತೂ ಅನುಮಾನಿಸದೆ, ''ಓ ಖಂಡಿತವಾಗಿ! ನೀನಿದನ್ನು ಶ್ರೀರಾಮಕೃಷ್ಣರಿಗಾಗಿ ತಂದದ್ದಲ್ಲವೆ? ಅವಶ್ಯವಾಗಿ ಕೊಡಿಲ್ಲಿ'' ಎನ್ನುತ್ತ ಕೈನೀಡಿದರು. ನಿಜಕ್ಕೂ ಅವರ ಮಾತಿನಿಂದ ಆ ಮನುಷ್ಯನಿಗೆ ಎಷ್ಟು ಸಂತೋಷವಾಗಿರಬೇಕು! ಆದರೆ ಅಷ್ಟರಲ್ಲಿ ಪಕ್ಕದ ಹಳ್ಳಿಯಿಂದ ಬಂದಿದ್ದ ಒಬ್ಬಳು ಭಕ್ತೆ ಇದನ್ನು ಕಂಡು ಆಘಾತಗೊಂಡು, ''ಅಮ್ಮಾ! ಇವರೆಲ್ಲ ಕಳ್ಳರು, ನಿಮಗೆ ಗೊತ್ತಿಲ್ಲವೆ? ಇವನು ತಂದದ್ದನ್ನು ಶ್ರೀರಾಮಕೃಷ್ಣರಿಗೆ ನೈವೇದ್ಯ ಮಾಡುವುದೆ?'' ಎಂದು ಮಧ್ಯೆ ಬಾಯಿಹಾಕಿದಳು. ಶ್ರೀಮಾತೆಯವರು ಅವಳ ಮಾತಿಗೇನೂ ಬದುಲು ಹೇಳುವ ಗೋಜಿಗೆ ಹೋಗದೆ ಆ ಹಣ್ಣುಗಳನ್ನು ಒಳಗೆ ಇಟ್ಟುಬಂದು, ಆ ಮನುಷ್ಯನಿಗೆ ಒಂದಿಷ್ಟು ಕಡಲೆ ಪುರಿ, ಮಿಠಾಯಿ ಪ್ರಸಾದ ಕೊಟ್ಟು ಕಳುಹಿಸಿದರು. ಅವನು ಹೊರಟು ಹೋದ ಮೇಲೆ ಆ ಭಕ್ತೆಯ ಕಡೆಗೆ ತಿರುಗಿ, ''ನೋಡು, ಯಾರು ಒಳ್ಳೆಯವರು, ಯಾರು ಒಳ್ಳೆಯವರಲ್ಲ ಅನ್ನುವುದು ನನಗೆ ಗೊತ್ತಿದೆ.'' ಎಂದು ಹೇಳಿ ಮತ್ತೆ ಅವಳು ಆ ವಿಷಯದಲ್ಲಿ ಬಾಯಿಹಾಕದಂತೆ ಮಾಡಿದರು. ''ತಪ್ಪು ಮಾಡುವುದು ಮನುಷ್ಯನ ಸ್ವಭಾವ. ಆದರೆ ತಪ್ಪಿ ನಡೆದವನನ್ನು ತಿದ್ದಿ ಸರಿ ದಾರಿಯಲ್ಲಿ ನಡೆಸಬಲ್ಲವರು ಎಷ್ಟು ಜನ?'' ಎಂದು ಅವರು ಆಗಾಗ ಹೇಳುತ್ತಿದ್ದರು.

ಗುರುವಾಗಿ ಶ್ರೀಮಾತೆ ಶಾರದಾದೇವಿಯವರು

ಗುರುವಾಗಿ ಮಂತ್ರದೀಕ್ಷೆ ನೀಡುವ ಮೂಲಕ ಶ್ರೀಮಾತೆಯವರು ಎಂತೆಂತಹ ಕಾರ್ಕೋಟಕ ವಿಷವನ್ನು ಕುಡಿಯಬೇಕಾಯಿತು ಎಂಬುದನ್ನು ನೋಡಿದರೆ ಮೈ ಜುಮ್ಮೆನ್ನುತ್ತದೆ. ಒಮ್ಮೆ ಕಲ್ಕತ್ತದ ಮೂವರು ಭಕ್ತರು ಸ್ವಾಮಿ ಬ್ರಹ್ಮಾನಂದರಿಂದ ಪರಿಚಯ ಪತ್ರ ತೆಗೆದುಕೊಂಡು ಜಯರಾಂಬಾಟಿಗೆ ಬಂದರು. ಆ ಪತ್ರವನ್ನು ಓದಿಸಿ ಕೇಳಿದ ಶ್ರೀಮಾತೆ, ಅವರನ್ನು ಒಳಗೆ ಬರಮಾಡಿಕೊಂಡರು. ಆ ಮೂವರು ಭಕ್ತರ ಅಂತರಂಗದಲ್ಲಿ ತುಂಬಿ

ಕೊಂಡಿದ್ದ ಪಾಪರಾಶಿಯನ್ನು ಶ್ರೀಮಾತೆಯವರು ವೀಕ್ಷಣಮಾತ್ರದಿಂದ ಗುರುತಿಸಿದ್ದರು. ಆ ಪಾಪದ ಆಘಾತವನ್ನು ತಡೆದುಕೊಳ್ಳುವ ಶಕ್ತಿ ತಮ್ಮಲ್ಲಿಲ್ಲ ಎಂಬ ಭಯ ಅವರಿಗುಂಟಾಯಿತು. ಆದ್ದರಿಂದ, ಸ್ವಯಂ ಬ್ರಹ್ಮಾನಂದರೇ ಪರಿಚಯಪತ್ರ ಬರೆದುಕೊಟ್ಟಿದ್ದರೂ ಅವರು ಆ ಭಕ್ತರಿಗೆ ಮಂತ್ರದೀಕ್ಷೆ ಕೊಡಲು ನಿರಾಕರಿಸಿ, ಬೇಲೂರು ಮಠಕ್ಕೇ ಹೋಗುವಂತೆ ತಿಳಿಸಿದರು. ಅಂತೆಯೇ ಆ ಭಕ್ತರು ಹಿಂದಿರುಗಲು ಮೊದಲಿಗೆ ಸಿದ್ಧರಾದರು. ಆದರೆ ಪುನಃ ಏಕೋ ಅವರಿಗೆ ಸಮಾಧಾನವಾಗಲಿಲ್ಲ. ಶ್ರೀಮಾತೆಯವರಿಂದಲೇ ಮಂತ್ರದೀಕ್ಷೆಯನ್ನು ಪಡೆಯಬೇಕು ಎಂದು ತೀರ್ಮಾನಿಸಿ ಮತ್ತೊಮ್ಮೆ ಅವರ ಬಳಿಗೆ ಬಂದು ಬಹಳಷ್ಟು ಆಗ್ರಹಪಡಿಸಿದರು. ಆದರೂ ಶ್ರೀಮಾತೆ ಒಪ್ಪಲೇ ಇಲ್ಲ. ಅವರು ವಿಷಾದದಿಂದ ಶ್ರೀರಾಮಕೃಷ್ಣರ ಮುಂದೆ ಕುಳಿತು, ''ಹೇ ಪ್ರಭು, ನಿನ್ನೆ ತಾನೆ ನಾನು ನಿಮ್ಮನ್ನು ಪ್ರಾರ್ಥಿಸಿಕೊಂಡೆ, ದಿನಗಳು ವ್ಯರ್ಥವಾಗಿ ಹೋಗದಿರಲಿ ಅಂತ. ಆದರೆ ಕೊನೆಗೂ ಆ ನನ್ನ ಪ್ರಾರ್ಥನೆಗೆ ನೀವು ಕಳುಹಿಸಿಕೊಟ್ಟದ್ದು ಮಾತ್ರ ಇಂಥವರನ್ನು!'' ಎಂದು ದೂರಿದರು. ಕೊನೆಗೆ ಬಹಳ ಹೊತ್ತಿನ ಮೇಲೆ, ಹಾಗೂ ಹೀಗೂ ಆಲೋಚನೆ ಮಾಡಿ ಮಂತ್ರದೀಕ್ಷೆ ಕೊಡಲು ಸಮ್ಮತಿಸಿದರು. ಶ್ರೀರಾಮಕೃಷ್ಣರಿಗೆ ಕೈಮುಗಿದು ''ಆಗಲಿ, ಓ ಠಾಕೂರ್, ಈ ಶರೀರ ಇರುವವರೆಗೂ ನಿಮ್ಮ ಕೆಲಸ ಮಾಡುತ್ತ ಹೋಗುತ್ತೇನೆ'' ಎಂದರು. ಅಂತೂ ಆ ಭಕ್ತರಿಗೆ ಮಂತ್ರದೀಕ್ಷೆ ಸಿಕ್ಕಿತು. ಕೆಲವು ದಿನಗಳು ಕಳೆದವು. ಬೇಲೂರು ಮಠದ ಜಗುಲಿಯಲ್ಲಿ ಒಂದು ದಿನ ಸ್ವಾಮಿ ಬ್ರಹ್ಮಾನಂದರು, ಸ್ವಾಮಿ ಪ್ರೇಮಾನಂದರು ಹಾಗೂ ಸ್ವಾಮಿ ಶಿವಾನಂದರು ಗಂಗೆಗೆ ಇದಿರಾಗಿ ಕುಳಿತಿದ್ದರು. ಆಗ, ಆ ಮಂತ್ರದೀಕ್ಷೆಯ ಪ್ರಸಂಗವನ್ನೆಲ್ಲ ವೀಕ್ಷಿಸಿದ್ದ ಆಶ್ರಮವಾಸಿಗಳೊಬ್ಬರು ಸ್ವಾಮಿಗಳಿಗೆ ಎಲ್ಲವನ್ನೂ ವಿವರಿಸಿ ಹೇಳಿದರು. ಅದನ್ನೆಲ್ಲ ಕೇಳಿ ಸ್ವಾಮಿ ಬ್ರಹ್ಮಾನಂದರು ಅವಾಕ್ಕಾಗಿ ಬಹಳ ಹೊತ್ತು ಹಾಗೆಯೇ ಕುಳಿತುಬಿಟ್ಟರು. ಸ್ವಾಮಿ ಪ್ರೇಮಾನಂದರು ನಿಟ್ಟುಸಿರು ಬಿಡುತ್ತ ಕೈಜೋಡಿಸಿಕೊಂಡು ಉದ್ಗರಿಸಿದರು: ''ಕೃಪೆ! ಕೃಪೆ! ಇಂತಹ ಅಪಾರ ಕೃಪೆಯಿಂದಾಗಿಯೇ ಶ್ರೀಮಾತೆ ನಮ್ಮನ್ನು ರಕ್ಷಿಸಿಕೊಂಡು ಬರುತ್ತಿದ್ದಾರೆ. ಅವರು ಈಗ ಕುಡಿದ ವಿಷದ ವರ್ಣನೆಯನ್ನು ಮಾಡುವುದಕ್ಕೆ ಮಾತಿನಿಂದ ಸಾಧ್ಯವಿಲ್ಲ. ನಾವೇನಾದರೂ ಅವರಂತೆ ಮಾಡಿದ್ದರೆ ಸುಟ್ಟು ಭಸ್ಮವಾಗಿ ಹೋಗುತ್ತಿದ್ದೆವು!''

ಶ್ರೀಮಾತೆಯವರು ಶರಣಾದವರ ಲೋಪದೋಷಗಳನ್ನು ಕಾಣುತ್ತ, ಸ್ವ-ಇಚ್ಛೆಯಿಂದ ಅವರ ಪಾಪಸ್ವೀಕಾರ ಮಾಡಿ ಯಾತನೆಯನ್ನು ಅನುಭವಿಸುತ್ತಿದ್ದರಾದರೂ, ಆ ಪಾಪಿ-ತಾಪಿಗಳ ವಿಷಯದಲ್ಲಿ ಅವರೆಂದೂ ಕಠೋರರಾಗಲಿಲ್ಲ; ಸದಾ ಅವರ ಮೇಲೆ ಕೃಪಾದೃಷ್ಟಿಯನ್ನೇ ಇಟ್ಟಿದ್ದರು. ಒಮ್ಮೆ ಒಬ್ಬಳು ಹೆಂಗಸು ಆಕೆ ಮರ್ಯಾದಸ್ಥ ಮನೆತನದವಳೇ; ಏನೋ ದೌರ್ಬಲ್ಯದ ಗಳಿಗೆಯಲ್ಲಿ ಕೆಟ್ಟ ದಾರಿ ಹಿಡಿದಿದ್ದಳು. ಆದರೆ ಆಮೇಲೆ ತನ್ನ ತಪ್ಪಿನ ಅರಿವಾಗಿ ಪಶ್ಚಾತ್ತಾಪಪಟ್ಟಳು. ಹೀಗಿರುವಾಗ ಒಮ್ಮೆ ಅವಳಿಗೆ ಅದೃಷ್ಟವಶಾತ್ ಶ್ರೀಮಾತೆಯವರ ದರ್ಶನ ಮಾಡುವ ಅವಕಾಶ ಸಿಕ್ಕಿ, ಅವರ ಬಳಿಗೆ ಬಂದಳು. ಆದರೆ ತನ್ನ ಅಪರಾಧದ ನೆನಪಿನಿಂದ ಅವಳ ಮೈಯೆಲ್ಲ ಕಂಪಿಸುತ್ತಿತ್ತು. ಶ್ರೀಮಾತೆಯವರ ಕೋಣೆಯ ಒಳಗೆ ಬರುವಷ್ಟು ಧೈರ್ಯವಾಗಲಿಲ್ಲ. ಬಾಗಿಲಲ್ಲೇ ನಿಂತು ದುಃಖ ತುಂಬಿದ ದನಿಯಲ್ಲಿ, ''ಅಮ್ಮ, ನನ್ನ ಗತಿ ಏನು? ನಾನು ನಿಮ್ಮ ಈ ಪವಿತ್ರ ಮಂದಿರದೊಳಗೆ ಕಾಲಿಡುವುದಕ್ಕೇ ಅಯೋಗ್ಯಳು'' ಎಂದಳು. ತಕ್ಷಣವೇ ಶ್ರೀಮಾತೆ ಎದ್ದು ಅವಳ ಬಳಿಗೆ ಬಂದು, ತಮ್ಮ ಪರಮಪವಿತ್ರ ಕೈಗಳಿಂದ ಅವಳ ಕೊರಳನ್ನು ಬಳಸಿ ಪ್ರೇಮದಿಂದ, ''ಬಾ ಮಗಳೆ, ಒಳಗೆ ಬಾ. ಯಾವುದು ಪಾಪ ಅಂತ ನಿನಗೀಗ ಅರಿವಾಗಿದೆ, ಪಶ್ಚಾತ್ತಾಪವಾಗಿದೆ. ಬಾ ನಿನಗೆ ಮಂತ್ರದೀಕ್ಷೆ ಕೊಡುತ್ತೇನೆ. ನಿನ್ನೆಲ್ಲ ಭಾರವನ್ನು ಶ್ರೀರಾಮಕೃಷ್ಣರ ಪಾದಗಳಲ್ಲಿ ಸಮರ್ಪಿಸಿ ಭಯವನ್ನು ಕಿತ್ತೊಗೆದುಬಿಡು'' ಎನ್ನುತ್ತ ಒಳಗೆ ಕರೆತಂದು ಸಂತೈಸಿದರು.

ಯಾವುದಾದರೂ ಒಂದು ವಂಶದವರು ಒಂದು ದೇವತೆಯ ಮಂತ್ರವನ್ನು ತಲೆತಲಾಂತರಗಳಿಂದ ಜಪ ಮಾಡಿಕೊಂಡು ಬಂದದ್ದೇ ಆದರೆ, ಅದರ ಪ್ರಭಾವ ಆ ವಂಶದವರ ವ್ಯಕ್ತಿತ್ವದಲ್ಲಿ ಮೂಡಿಬರುತ್ತದೆ. ದಿವ್ಯಜ್ಞಾನಿಗಳಾದವರು ಇದನ್ನು ಸ್ಪಷ್ಟವಾಗಿ ಗುರುತಿಸಬಲ್ಲರು. ಒಮ್ಮೆ ಬಾಗದಾ ಗ್ರಾಮದ ಶಶಿಭೂಷಣ ಮುಖರ್ಜಿ ಎಂಬಾತ ಶ್ರೀಮಾತೆಯವರಲ್ಲಿಗೆ ಬಂದು ತನಗೆ ಶಕ್ತಿ ಮಂತ್ರವನ್ನು ಉಪದೇಶಿಸಬೇಕೆಂದು ಕೇಳಿಕೊಂಡ. ಆದರೆ ಅವರು ಆತನನ್ನು ದಿಟ್ಟಿಸಿ ನೋಡಿ, ''ಏನಪ್ಪ, ನಾನು ನಿನ್ನಲ್ಲಿ ಶ್ರೀರಾಮನನ್ನು ಕಾಣುತ್ತಿದ್ದೇನೆ. ನಿನ್ನ ವಂಶದವರೆಲ್ಲ ರಾಮ ಮಂತ್ರದ ಉಪಾಸನೆ ಮಾಡುತ್ತಿದ್ದವರೇನು? ಹಾಗಿದ್ದರೆ ನಿನಗೆ ರಾಮಮಂತ್ರವೇ ಸೂಕ್ತ. ನೋಡು, ರಾಮ ಮತ್ತು ಶಕ್ತಿ ಇವೆರಡೂ ಬೇರೆಬೇರೆಯಲ್ಲ, ಒಂದೇ. ಆದ್ದರಿಂದ ನೀನು ರಾಮ ಮಂತ್ರವನ್ನೇ ತೆಗೆದುಕೊ; ಸಂಕೋಚಪಡಬೇಡ'' ಎಂದು ಹೇಳಿ ರಾಮಮಂತ್ರವನ್ನೇ ಉಪದೇಶ ಮಾಡಿದರು. ಆತ ಮನೆಗೆ ಹೋಗಿ ವಿಚಾರಿಸಿ ನೋಡಿದಾಗ ತಿಳಿದುಬಂತು, ತನ್ನ ವಂಶದವರೆಲ್ಲ ರಾಮ ಮಂತ್ರೋಪಾಸಕರೇ ನಿಜ ಎಂದು.

ಅನೇಕ ಭಕ್ತರಿಗೆ ಕನಸಿನಲ್ಲಿಯೇ ಶ್ರೀಮಾತೆಯವರಿಂದ ಮಂತ್ರವನ್ನು ಪಡೆದ ಅನುಭವವಾಗುತ್ತಿತ್ತು. ಪೂರ್ವಜನ್ಮದ ಪುಣ್ಯದಿಂದಲೋ ಅಥವಾ ಅವರವರ ಸತ್ಸಂಸ್ಕಾರದಿಂದಲೋ ಈ ರೀತಿ ಮಂತ್ರಲಾಭವಾಗುವುದುಂಟು. ಸಾಮಾನ್ಯವಾಗಿ ಹೀಗೆ ಸ್ವಪ್ನದಲ್ಲಿ ಮಂತ್ರದೀಕ್ಷೆ ದೊರೆತವರು ಶ್ರೀಮಾತೆಯವರ ಬಳಿಗೆ ಬಂದು ತಮ್ಮ ಅನುಭವವನ್ನು ಹೇಳಿಕೊಂಡು ಅವರಿಂದ ಬೇರೆ ಬೇರೆ ಸಲಹೆ-ಸೂಚನೆಗಳನ್ನು ಪಡೆಯುತ್ತಿದ್ದರು. ಒಮ್ಮೆ ಅಂತಹ ಒಬ್ಬ ಭಕ್ತ ಬಂದು ತನ್ನ ಸ್ವಪ್ನದ ಅನುಭವವನ್ನು ಹೇಳಿಕೊಂಡಾಗ ಶ್ರೀಮಾತೆ ಸ್ವಲ್ಪ ಹೊತ್ತು ಧ್ಯಾನಸ್ಥರಾಗಿ ಬಳಿಕ ಅವನಿಗೆ ಆ ಮಂತ್ರದ ಅರ್ಥವನ್ನು ವಿವರಿಸಿದರು. ಆಮೇಲೆ ಅವನಿಗೆ ತಾವಾಗಿಯೇ ಇನ್ನೊಂದು ಮಂತ್ರವನ್ನು ಕೂಡ ಉಪದೇಶ ಮಾಡಿ, ''ಮೊದಲು ನಿನ್ನ ಸ್ವಪ್ನಮಂತ್ರವನ್ನು ಜಪಿಸು. ಬಳಿಕ ನಾನು ಕೊಟ್ಟ ಮಂತ್ರದ ಜಪಮಾಡಿ ಧ್ಯಾನ ಮಾಡು'' ಎಂದು ಆದೇಶಿಸಿದರು. ಸ್ವಪ್ನದಲ್ಲಿ ದೀಕ್ಷೆ ಪಡೆದ ಇನ್ನೊಬ್ಬ ಭಕ್ತೆ ಬಂದು ಆ

ಮಂತ್ರವನ್ನು ಶ್ರೀಮಾತೆಯ ಮುಂದೆ ಉಚ್ಚರಿಸಿದಳು. ಅದನ್ನು ಕೇಳಿ ಅವರು, ''ಹೌದು; ಅದೇ ನಿನ್ನ ಮಂತ್ರ. ಬಹಳ ಒಳ್ಳೆಯದು. ನೀನು ಭಾಗ್ಯವಂತೆಯೇ ಸರಿ'' ಎಂದು ಶ್ಲಾಘಿಸಿದರು. ಆಕೆಗೆ ಬೇರಾವ ಮಂತ್ರವನ್ನೂ ಕೊಡದೆ ಅದೇ ಮಂತ್ರವನ್ನು ಜಪಿಸಲು ಹೇಳಿದರು.

ಶ್ರೀಮಾತೆಯವರು ಪ್ರತಿಯೊಬ್ಬ ವ್ಯಕ್ತಿಗೂ ಅವನವನ ಸಂಸ್ಕಾರ ಸ್ವಭಾವ, ಅಭಿರುಚಿಗಳಿಗೆ ಅನುಗುಣವಾಗಿ ಒಂದು ನಿರ್ದಿಷ್ಟ ಮಂತ್ರವನ್ನು ಕಂಡುಕೊಂಡು ಅದನ್ನೇ ಉಪದೇಶಿಸುತ್ತಿದ್ದರು. ಅವರ ಈ ಅದ್ಭುತ ಸಾಮರ್ಥ್ಯಕ್ಕೆ ನಿದರ್ಶನವಾಗಿ ಈ ಘಟನೆಯನ್ನು ನೋಡೋಣ. ಒಮ್ಮೆ ಕುಲೀನ ಮನೆತನದ ಒಬ್ಬಾಕೆ ತನ್ನ ಮದುವೆಯಾದ ಹೊಸತರಲ್ಲಿ ಅವರಿಂದ ಮಂತ್ರ ದೀಕ್ಷೆ ಪಡೆದುಕೊಂಡು ಮಾವನ ಮನೆಗೆ ಹೊರಟುಹೋದಳು. ಅಲ್ಲಿ ಅವಳು ಸುಮಾರು ಎರಡು ವರ್ಷ ಆ ಮಂತ್ರವನ್ನು ಯಥಾಸಾಂಗವಾಗಿ ಜಪವನ್ನೇನೋ ಮಾಡುತ್ತ ಬಂದಳು. ಆದರೆ, ತಾನು ಮಂತ್ರವನ್ನು ಸರಿಯಾಗಿ ಗ್ರಹಿಸಿ ನೆನಪಿಟ್ಟುಕೊಂಡಿದ್ದೇನೋ ಇಲ್ಲವೋ ಎಂಬ ಸಂಶಯ ಅವಳನ್ನು ಕೊರೆಯುತ್ತಲೇ ಇತ್ತು. ಒಮ್ಮೆ ಶ್ರೀಮಾತೆಯವರ ಬಳಿಗೆ ಬಂದಿದ್ದಾಗ ಅವಳು ತನ್ನ ತೊಂದರೆಯನ್ನು ಅವರೆದುರು ತೋಡಿಕೊಂಡಳು. ಈಗ ತಾನು ಆ ಮಂತ್ರವನ್ನು ಹೇಗೆ ನೆನಪಿಟ್ಟುಕೊಂಡಿದ್ದೇನೆ, ಹೇಗೆ ಉಚ್ಚರಿಸುತ್ತಿದ್ದೇನೆ ಎಂದು ಅವಳು ತಿಳಿಸುವ ಮೊದಲೇ ಶ್ರೀಮಾತೆಯವರು, ''ಓ, ದೀಕ್ಷೆ ಕೊಟ್ಟು ಬಹಳ ಕಾಲವಾಯಿತಲ್ಲಮ್ಮ; ಈಗ ನನಗದು ನೆನಪಿರಲು ಸಾಧ್ಯವೆ? ಆಗಲಿ, ಸ್ವಲ್ಪ ತಾಳು, ನೀನೇನೂ ಆ ಮಂತ್ರವನ್ನು ಹೇಳಬೇಕಾಗಿಲ್ಲ. ನಾನು ಶ್ರೀರಾಮಕೃಷ್ಣರನ್ನು ಕೇಳಿಬರುತ್ತೇನೆ.'' ಎಂದು ದೇವರ ಕೋಣೆಗೆ ಹೋದರು. ಸ್ವಲ್ಪ ಹೊತ್ತಿನ ಬಳಿಕ ಹಿಂದಿರುಗಿ ಬಂದು, ''ಏನಮ್ಮ, ನಿನಗೆ ನಾನು ಕೊಟ್ಟದ್ದು ಈ ಮಂತ್ರ ಅಲ್ಲವೆ?'' ಎಂದು ಆ ಮಂತ್ರವನ್ನು ಉಚ್ಚರಿಸಿದರು. ''ಹ್ಞಾ, ಹೌದು, ಅದೇ ನೀವಿತ್ತಿದ್ದ ಮಂತ್ರ!'' ಎಂದಳು ಆಕೆ. ಆಗ ಅವರು ''ಹಾಗಾದರೆ ಅದನ್ನೇ ಜಪ ಮಾಡು. ಅದರಲ್ಲೇನೂ ತಪ್ಪಿಲ್ಲ'' ಎಂದು ತಿಳಿಸಿದರು.

ದೇವಿಯಾಗಿ ಶ್ರೀಮಾತೆ ಶಾರದಾದೇವಿಯವರು

ಬಂಗಾಳದಿಂದ ಬಹಳ ದೂರದಲ್ಲಿರುವ ಶಿಲ್ಲಾಂಗಿನಲ್ಲಿ ಒಬ್ಬ ಭಕ್ತ ಶ್ರೀಮಾತೆಯ ವಿಚಾರವಾಗಿ ಬಹಳಷ್ಟು ತಿಳಿದಿದ್ದ. ಅವರು ದೇವಿ, ಸಾಕ್ಷಾತ್ ಜಗಜ್ಜನನಿ ಎಂಬ ಮಾತನ್ನೂ ಕೇಳಿದ್ದ. ಹೋಗಿ ಅವರನ್ನು ಕಾಣಬೇಕೆಂಬ ಇಚ್ಛೆ ಅವನಿಗಿತ್ತು. ಆದರೆ ಅವನಿಗೊಂದು ಸಂಶಯ – ಈ ಮಾತುಗಳಲ್ಲಿ ಸತ್ಯವೆಷ್ಟೋ ಉತ್ಪ್ರೇಕ್ಷೆಯೆಷ್ಟೋ? ಅವರು ನಿಜವಾಗಿಯೇ ದೇವಿಯೇ ಹೌದೋ ಅಥವಾ ಈ ಜನರೆಲ್ಲ ಅವರನ್ನು ದೇವಿಯ ಸ್ಥಾನಕ್ಕೆ ಏರಿಸಿದ್ದಾರೋ? ಎಂದು. ಇಷ್ಟು ದೂರದ ಊರಿನಿಂದ ಆ ಜಯರಾಂಬಾಟಿಯ ಹಳ್ಳಿಯ ಮೂಲೆಗೆ ಹೋಗಿ ಕೊನೆಗೂ ಅವರೊಬ್ಬರು ಸಾಮಾನ್ಯ ಹೆಂಗಸು ಎಂದು ಕಂಡು ಬಂದರೆ, ತಾನು ಅಷ್ಟೊಂದು ಆಸೆ ಹೊತ್ತು ಕಷ್ಟಪಟ್ಟುಕೊಂಡು ಹೋದದ್ದೆಲ್ಲ ವ್ಯರ್ಥವಾಗಿಬಿಡುತ್ತದಲ್ಲ ಎಂದು ಅವನ ಚಿಂತೆ. ಆದ್ದರಿಂದ ಅವನು ಮನಸ್ಸಿನಲ್ಲೇ ಆಲೋಚಿಸಿದ : ನೋಡೋಣ; ಶ್ರೀಮಾತೆಯವರು ಸ್ವಯಂ ದೇವಿಯೇ ಹೌದಾದಲ್ಲಿ ನನಗೆ ನನ್ನ ಕನಸಿನಲ್ಲಿ ಬಂದು ಏಳು ಸಲ ದರ್ಶನ ಕೊಡಲಿ. ಹಾಗಿದ್ದರೆ ಮಾತ್ರ ನಾನು ಅವರ ದೈವತ್ವವನ್ನು ಒಪ್ಪಿಕೊಳ್ಳುತ್ತೇನೆ, ಜಯರಾಂಬಾಟಿಗೆ ಹೋಗುತ್ತೇನೆ; ಇಲ್ಲದಿದ್ದರೆ ಇಲ್ಲ ಎಂದು. ಅವನು ನಿಜವಾದ ಶ್ರದ್ಧಾವಂತನೆಂದು ಕಾಣುತ್ತದೆ. ಶ್ರೀಮಾತೆ ಕೃಪೆಮಾಡಿ ಅವನಿಗೆ ಸ್ವಪ್ನದಲ್ಲಿ ಏಳು ಸಲ ದರ್ಶನ ಕೊಟ್ಟರು! ಅವನ ಶಂಕೆ ದೂರವಾಯಿತು. ಜಯರಾಂಬಾಟಿಗೆ ಬಂದು ಮಂತ್ರದೀಕ್ಷೆ ಪಡೆದು ಕೃತಾರ್ಥನಾದ.

ಒಮ್ಮೆ ಸುಮತಿ ಎಂಬಾಕೆಗೆ ತಾನು ಶ್ರೀಮಾತೆಯವರಿಗೆ ಕೆಂಪಂಚಿನ ಸೀರೆಯನ್ನಿತ್ತು ಅವರನ್ನು ಸಾಕ್ಷಾತ್ ಚಂಡಿಕಾ ದೇವಿಯ ರೂಪದಲ್ಲಿ ಪೂಜಿಸುತ್ತಿರುವಂತೆ ಕನಸಾಯಿತು. ಅದರ ಪ್ರಭಾವದಿಂದ ಅವಳು ನಿಜಕ್ಕೂ ಒಂದು ಕೆಂಪು ಅಂಚಿನ ಸೀರೆಯನ್ನು ತೆಗೆದುಕೊಂಡು ತಾನೇ ಅವಳಿಗೆ ತಿಳಿಸಲು ಸಂಕೋಚಪಟ್ಟು, ಬೇರೆಯವರ ಮೂಲಕ ತಿಳಿಸಿದಳು. ಕೂಡಲೇ ಶ್ರೀಮಾತೆ ಅವಳನ್ನು ಕರೆದು, ''ಏನಮ್ಮ, ನಿನಗೆ ಸಾಕ್ಷಾತ್ ಜಗನ್ಮಾತೆಯೇ ಸ್ವಪ್ನದರ್ಶನ ಕೊಟ್ಟಿದ್ದಾಳಲ್ಲವೆ? ಆ ಸೀರೆಯನ್ನು ಇಲ್ಲಿ ಕೊಡು. ಅದನ್ನು ನಾನೀಗ ಉಟ್ಟು ಕೊಳ್ಳಬೇಕಲ್ಲವೆ?'' ಎನ್ನುತ್ತ ಅದನ್ನು ಸ್ವೀಕರಿಸಿ ಉಟ್ಟುಕೊಂಡರು.

ಶ್ರಾವಣಮಾಸದ ಒಂದು ದಿನ ನೆರೆಗ್ರಾಮದ ಹಲದಿಪುಕುರದಿಂದ ಜಯರಾಂಬಾಟಿಯ ಮನೆಗೆ ಗೋಧಿ, ಅಕ್ಕಿ, ತರಕಾರಿ, ದಿನಸಿ, ಸೀಮೆಎಣ್ಣೆ ಇವನ್ನೆಲ್ಲ ತರಬೇಕಾಗಿತ್ತು. ಶ್ರೀಮಾತೆಯವರ ಆಜ್ಞಾನುಸಾರ ಸ್ವಾಮಿ ಮಹಾದೇವಾನಂದರು ಆ ಕೆಲಸಕ್ಕೆ ಹೊರಟರು. ಸಾಮಾನುಗಳನ್ನೆಲ್ಲ ಕೊಂಡುಕೊಂಡರು. ಆಮೇಲೆ ನೋಡಿದರೆ, ಅವುಗಳ ಒಟ್ಟು ತೂಕ ಮೂವತ್ತೈದು ಕೇಜಿಗಿಂತ ಹೆಚ್ಚಾಗಿಬಿಟ್ಟಿತು. ಈಗ ಅವನ್ನೆಲ್ಲ ನಾಲ್ಕಾರು ಮೈಲಿ ದೂರಕ್ಕೆ ಹೊತ್ತು ಸಾಗಿಸಬೇಕಾಗಿದೆ. ಆದರೆ ಯಾರಿಗೆ ತಾನೆ ಅಷ್ಟೊಂದು ಭಾರ ಹೊತ್ತು ನಡೆದು ಅಭ್ಯಾಸವಿರುತ್ತದೆ? ಮಹಾದೇವಾನಂದರು ಚಿಂತೆಗೆ ಸಿಲುಕಿದರು. ಹೋಗಲಿ, ಒಬ್ಬ ಕೂಲಿಯವನನ್ನು ಗೊತ್ತುಮಾಡಿಕೊಳ್ಳೋಣ ಎಂದರೆ ಶ್ರೀಮಾತೆಯವರು ಆ ವಿಷಯವಾಗಿ ಏನೂ ಹೇಳಿರಲಿಲ್ಲ. ಒಟ್ಟಿನಲ್ಲಿ ಒಂದು ಕಡೆಯಿಂದ ವಿಧೇಯತೆಯ ಪ್ರಶ್ನೆ. ಇನ್ನೊಂದು ಕಡೆಯಿಂದ ಖರ್ಚಿನ ಪ್ರಶ್ನೆ. ಏನು ಮಾಡುವುದೀಗ? ಕೊನೆಗೆ ಸ್ವಾಮಿಗಳು ನಿರ್ಧಾರ ಮಾಡಿದರು ''ಏನೇ ಆಗಲಿ, ಇದು ಶ್ರೀಮಾತೆಯವರ ಕಾರ್ಯ; ಆದ್ದರಿಂದ ನಾನೇ ಹೊತ್ತುಕೊಂಡು ಹೋಗುತ್ತೇನೆ'' ಎಂದು. ಈ ರೀತಿ ಸ್ಥಿರಸಂಕಲ್ಪ ಮಾಡಿ ಮೂಟೆಯನ್ನು ತಲೆಯ ಮೇಲಿಟ್ಟುಕೊಂಡು ಹೊರಟೇಬಿಟ್ಟರು. ಅಭ್ಯಾಸವಿಲ್ಲ, ಮಳೆಯಿಂದ ದಾರಿ ಬೇರೆ ಕೆಸರಿನಿಂದ ಜಾರುತ್ತಿದೆ. ಕಾಲುಗಳು ಅದುರಿದವು, ಕಷ್ಟವಾಯಿತು. ಅದರಲ್ಲೂ ಸ್ವಲ್ಪ ದೂರವಂತೂ ದುರ್ಗಮವಾಗಿತ್ತು. ಆದರೂ ಸೋಲಲೇಬಾರದೆಂಬ ದೃಢ ಮನಸ್ಸಿನಿಂದ ಅಡೆತಡೆಗಳನ್ನೆಲ್ಲ ಕ್ರಮಿಸಿ ಮುನ್ನಡೆದರು. ಆಶ್ಚರ್ಯ! ಈಗ ಇದ್ದಕ್ಕಿದ್ದಂತೆ ಹೊರೆ ಹಗುರವಾಗಿಬಿಟ್ಟಂ

ತೆನಿಸಿತು; ಭಾರದ ಅನುಭವವೇ ಇಲ್ಲ! ನಡಿಗೆ ಅತ್ಯಂತ ಸುಲಭ ವಾಗಿಬಿಟ್ಟಿತು! ''ಇದೇನಿದು? ಇದ್ದಕ್ಕಿದ್ದಂತೆ ಭಾರವೇ ಕಾಣ ದಂತಾಯಿತಲ್ಲ, ಇದು ಹೇಗಾಗಿರಬಹುದು?'' ಎಂದು ಆಶ್ಚರ್ಯ ಪಡುತ್ತಲೇ ಮಹಾದೇವಾನಂದರು ಜಯರಾಂಬಾಟಿಯನ್ನು ತಲುಪಿದರು. ಅದೇ ಆಲೋಚನೆಯಲ್ಲಿ ಮನೆಗೆ ಬಂದು ನೋಡು ತ್ತಾರೆ, ಶ್ರೀಮಾತೆಯವರು ತಮ್ಮ ಕೋಣೆಯ ಎದುರಿನ ಜಗ ಲಿಯ ಮೇಲೆ ಒಂದೇ ಸಮನೆ ಅತ್ತಿಂದಿತ್ತ ರಭಸದಿಂದ ಓಡಾಡು ತ್ತಿದ್ದಾರೆ! ಮುಖ ಕೆಂಪಾಗಿಬಿಟ್ಟಿದೆ, ಕಣ್ಣುಗಳು ಮೇಲೇರಿಕೊಂಡಿವೆ. ಬಾಹ್ಯಪ್ರಜ್ಞೆಯೇ ಇಲ್ಲದವರಂತೆ ''ನಾನು ಅವನಿಗೆ ಒಬ್ಬ ಕೂಲಿ ಯವನನ್ನು ನೇಮಿಸಿಕೊ ಅಂತ ಯಾಕಾದರೂ ಹೇಳಲಿಲ್ಲ!'' ಎಂದು ಮತ್ತೆಮತ್ತೆ ತಮ್ಮಷ್ಟಕ್ಕೇ ಮಾತಾಡಿಕೊಳ್ಳುತ್ತಿದ್ದಾರೆ. ಈಗ ಹೊರೆಯನ್ನಿಳಿಸಿ ನಿಂತ ಮಹಾದೇವಾನಂದರನ್ನು ಕಾಣುತ್ತಿದ್ದಂ ತೆಯೇ ಅವರು, ''ಏನಪ್ಪ, ಒಬ್ಬ ಕೂಲಿಯವನನ್ನು ಗೊತ್ತು ಮಾಡಿಕೊಳ್ಳಬಾರದಾಗಿತ್ತೆ? ನಾನೇನೋ ಹೇಳಿರಲಿಲ್ಲ ನಿಜ. ಆದ ರೇನಾಯಿತು? ನೀನು ಹೀಗೆ ಮಾಡಿಬಿಟ್ಟೆಯಲ್ಲ!'' ಎಂದು ನೊಂದು ನುಡಿದರು. ತಮ್ಮ ಮಕ್ಕಳ ಬಗ್ಗೆ ಶ್ರೀಮಾತೆಯವರ ಕಳಕಳಿ-ವಾತ್ಸಲ್ಯಗಳನ್ನು ಕಂಡು ಆ ಸ್ವಾಮಿಗಳು ಸಂತೋಷ ಪಡಬೇಕೇ, ಅಥವಾ ಇಚ್ಛಾಮಾತ್ರದಿಂದ ತಮ್ಮ ಹೊರೆಯನ್ನು ಹಗುರಗೊಳಿಸಿದ ಅವರ ಮಹಿಮೆಯನ್ನು ಕಂಡು ಆಶ್ಚರ್ಯ ಪಡಬೇಕೆ?

ಒಮ್ಮೆ ಸುರೇಂದ್ರನಾಥ ಸೇನ ಎಂಬುವನು ಸ್ವಾಮೀಜಿಯವ ರನ್ನು ಮಂತ್ರದೀಕ್ಷೆಗಾಗಿ ಪ್ರಾರ್ಥಿಸಿದ. ಸ್ವಾಮೀಜಿ ಅದಕ್ಕೆ ಸಮ್ಮ ತಿಸಿ, ಆತನಿಗೆ ದೀಕ್ಷೆಯನ್ನು ಕೊಡಲು ಸಿದ್ಧರಾಗಿ, ಆಸನದ ಮೇಲೆ ಕುಳಿತುಕೊಂಡರು. ಆದರೆ ಹಾಗೆ ಕುಳಿತವರು, ಆಮೇಲೆ ಅವ ನಿಗೆ ಮಂತ್ರ ದೀಕ್ಷೆ ಕೊಡಲು ನಿರಾಕರಿಸಿಬಿಟ್ಟರು. ಅದಕ್ಕೆ ಅವರಿತ್ತ ಕಾರಣ ಬಹಳ ಆಶ್ಚರ್ಯಕರವಾದದ್ದು. ಅವರೆಂದು: ''ನೋಡು, ನನಗೆ ಶ್ರೀರಾಮಕೃಷ್ಣರಿಂದಲೇ ತಿಳಿದುಬಂದಿದೆ, ನಿನಗೆ ನನ ಗಿಂತಲೂ ಹೆಚ್ಚು ಶಕ್ತಿಶಾಲಿಯಾದ ವ್ಯಕ್ತಿಯೊಬ್ಬರಿಂದ ಮಂತ್ರ ದೀಕ್ಷೆ ಸಿಗುತ್ತದೆ ಅಂತ. ಆದ್ದರಿಂದ ನಾನೀಗ ನಿನಗೆ ಮಂತ್ರದೀಕ್ಷೆ ಕೊಡುವ ಹಾಗಿಲ್ಲ'' ಎಂದು. ಇದಾದ ಕೆಲವೇ ದಿನಗಳಲ್ಲಿ ಸುರೇಂದ್ರನಿಗೊಂದು ಸ್ವಪ್ನವಾಯಿತು. ಆ ಸ್ವಪ್ನದಲ್ಲಿ, ತಾನು ಶ್ರೀರಾಮಕೃಷ್ಣರ ತೊಡೆಯ ಮೇಲೆ ಕುಳಿತಿರುವಂತೆ ಮತ್ತು ಮಾತೃರೂಪಿಣಿಯಾದ ಒಬ್ಬಳು ದಿವ್ಯ ಸ್ತ್ರೀ ತನಗೆ ಮಂತ್ರದೀಕ್ಷೆ ಕೊಡುತ್ತಿರುವಂತೆ ಅವನು ಕಂಡ. ತಾನು ಪಡೆದ ಮಂತ್ರವೂ ಅವನ ನೆನಪಿನಲ್ಲಿ ಉಳಿದುಕೊಂಡಿತು. ಆದರೆ ಇದು ಎಷ್ಟರ ಮಟ್ಟಿಗೆ ಸತ್ಯವೋ, ಅವನಿಗೆ ತಿಳಿಯಲಿಲ್ಲ. ಆದರೂ ಅವನು ಆ ಕನಸಿನ ವಿಷಯವನ್ನು ಗುಪ್ತವಾಗಿಯೇ ಇಟ್ಟಿದ್ದ. ಹೀಗೆ ಹತ್ತಾರು ವರ್ಷಗಳೇ ಉರುಳಿದವು. ಮುಂದೆ ೧೯೧೧ರಲ್ಲಿ ದುರ್ಗಾಪೂಜೆ ಗಾಗಿ ಆತ ಜಯರಾಂಬಾಟಿಗೆ ಬಂದಾಗ ಶ್ರೀಮಾತೆಯವರು ಅವನ ಪ್ರಾರ್ಥನೆಯನ್ನು ಮನ್ನಿಸಿ ಮಂತ್ರದೀಕ್ಷೆಯನ್ನಿತ್ತರು. ಅವರು ತನಗಿತ್ತ ಮಂತ್ರವನ್ನು ಕೇಳಿದಾಗ ಅವನಿಗಾದ ಆಶ್ಚರ್ಯ ಅಷ್ಟಿಷ್ಟಲ್ಲ. ಏಕೆಂದರೆ ಅವನು ಅಂದು ಕನಸಿನಲ್ಲಿ ಪಡೆದ ಮಂತ್ರವೂ ಈ ಮಂತ್ರವೂ ಒಂದೇ ಆಗಿತ್ತು! ಇದಕ್ಕೂ ಹೆಚ್ಚಾಗಿ, ಅವನು ಕನಸಿನಲ್ಲಿ ಕಂಡ ಆ ದೈವೀ ಸ್ತ್ರೀಮೂರ್ತಿಯೂ ಶ್ರೀಮಾತೆ ಯವರೂ ಒಂದೇ ತೆರನಾಗಿ ಕಾಣುತ್ತಿದ್ದರು!

ಪ್ರೊ. ಗೋಕುಲದಾಸ ಅವರು ವಿಸ್ಮಯಕರ ಘಟನೆಯನ್ನು 'ಉದ್ಬೋಧನ' ಮಾಸಪತ್ರಿಕೆಯಲ್ಲಿ ಬರೆಯುತ್ತಾರೆ: ''ನಾನು ಶ್ರೀಮಾತೆಯವರ ಸಂಪರ್ಕದಲ್ಲಿದ್ದ ಕೆಲವು ವರ್ಷಗಳಲ್ಲಿ ಅವರು ಒಂದು ಸಲವೂ ಕೂಡ ನಿನ್ನ ಮನೆ ಎಲ್ಲಿ? ನೀನು ಯಾವ ಕೆಲಸ ಮಾಡುತ್ತಿದ್ದೀಯ? ನಿನಗೆ ಎಷ್ಟು ಜನ ಸೋದರರು? ನಿನ್ನ ತಾಯ್ತಂದೆಯರ ಹೆಸರೇನು? ಎಂದೇನೂ ಕೇಳಿರಲಿಲ್ಲ. ಆದರೆ ಒಂದು ದಿನ ನಾನು ಅವರಿಗೆ ಪ್ರಣಾಮ ಮಾಡಲು ಹೋದಾಗ ಅವರು ನನ್ನ ಅಣ್ಣಂದಿರಿಬ್ಬರ ಹೆಸರನ್ನು ಹೇಳಿ, ಅವರು ಹೇಗಿ ದ್ದಾರೆ ಎಂದು ಕೇಳಿದರು. ಅದನ್ನು ಕೇಳಿ, ಅರೆ! ನನ್ನ ಅಣ್ಣಂದಿರ ಹೆಸರು ಇವರಿಗೆ ಹೇಗೆ ತಿಳಿಯಿತು? ಎಂದು ನನಗೆ ತುಂಬ ವಿಸ್ಮಯವಾಯಿತು. ಆದರೆ ಅವರು ಒಬ್ಬ ಅಣ್ಣನ ಹೆಸರನ್ನು ಲಲಿತ ಎಂದು ಹೇಳುವುದರ ಬದಲು ನಲಿನ ಎಂದು ಹೇಳಿದರು. ಇದು ಅವರ ಉಚ್ಚಾರಣೆಯ ದೋಷವಿರಬಹುದು ಎಂದು ಕೊಂಡು ನಾನು ಮುಗುಳ್ನಕ್ಕೆ. ಆದರೆ ನಾನು ಮನೆಗೆ ಬಂದ ಮೇಲೆ ನನ್ನ ತಾಯಿಗೆ ಈ ವಿಷಯ ತಿಳಿಸಿದಾಗ ಅವಳು ''ಶ್ರೀಮಾತೆಯವರು ಹೇಳಿದ್ದೇ ಸರಿ. ಬಾಲ್ಯದಲ್ಲಿ ಆತನಿಗೆ ನಲಿನ ಎಂದೇ ಹೆಸರಿತ್ತು. ಅವನು ದೊಡ್ಡವನಾದ ಮೇಲೆ ಲಲಿತ ಎಂದು ಹೆಸರು ಬದಲಾಯಿತು'' ಎಂದು ಹೇಳಿದಳು.''

ಉಪಸಂಹಾರ

ಶ್ರೀಮಾತೆಯವರ ದೇಹತ್ಯಾಗವಾದ ಬಳಿಕ, ಅಲ್ಲಿಗೆ ಬಂದ ಭಕ್ತರನ್ನುದ್ದೇಶಿಸಿ ಸ್ವಾಮಿ ಶಿವಾನಂದರು ಹೇಳಿದ ಮಾತು ಮನನ ಯೋಗ್ಯವಾಗಿದೆ. ''ಶ್ರೀಮಾತೆ ಈಗ ಸರ್ವವನ್ನೂ ವ್ಯಾಪಿಸಿ ಕೊಂಡಿದ್ದಾರೆ. ಸಮಸ್ತ ಅಸ್ತಿತ್ವದಲ್ಲೂ ಒಂದಾಗಿದ್ದಾರೆ. ಅವರನ್ನು ಈಗ ಎಲ್ಲೆಡೆಯೂ ಕಾಣಬಹುದು. ಯಾರೇ ಆಗಲಿ, ಒಂದೇ ಮನಸ್ಸಿನಿಂದ ಅವರನ್ನು ಕರೆದರೆ ಅವರು ಖಂಡಿತ ದರ್ಶನ ನೀಡುತ್ತಾರೆ. ಇಷ್ಟು ದಿನ ತಾಯಿಯ ಅಸ್ತಿತ್ವ ಒಂದೇ ಸ್ಥಳಕ್ಕೆ ಸೀಮಿತಗೊಂಡಿತ್ತು. ಆದರೆ ಈಗ ಅವರು ಎಲ್ಲೆಲ್ಲಿಯೂ ಇದ್ದಾರೆ. ವ್ಯಾಕುಲಚಿತ್ತರಾಗಿ ಹೃದಯಾಂತರಾಳದಿಂದ ಅವ ರನ್ನು ಕರೆಯುವುದೇ ತಡ, ಆಕೆ ದರ್ಶನ ಕೊಟ್ಟೇ ಕೊಡುತ್ತಾರೆ!''

ಸ್ವಾಮಿ ಶಿವಾನಂದರ ಈ ವಾಣಿಯು ಶ್ರೀಮಾತೆ ಶಾರದಾ ದೇವಿಯವರ ಇರುವಿಕೆಯಲ್ಲಿ ನಮಗೆ ಭರವಸೆಯನ್ನು ಉಂಟು ಮಾಡಲಿ. ಶ್ರೀಮಾತೆ ಶಾರದಾದೇವಿಯವರನ್ನು ಪ್ರೇಮಮಯಿ ಮಾತೆಯಾಗಿ, ಜ್ಞಾನಮಯಿ ಗುರುವಾಗಿ ಹಾಗೂ ಶಕ್ತಿಸ್ವರೂಪಿಣಿ ಜಗನ್ಮಾತೆಯಾಗಿ ಕಂಡು ಪ್ರೀತಿಸಿ, ಅನುಸರಿಸಿ, ಆರಾಧಿಸುವ ಜೀವನ ನಮ್ಮದಾಗಲಿ.

***ಆಕರ ಗ್ರಂಥ:** 'ಶ್ರೀಶಾರದಾದೇವಿ ಜೀವನ ಗಂಗಾ', ಸ್ವಾಮಿ ಪುರುಷೋತ್ತಮಾನಂದ*

ಸ್ವಾಮಿ ಧೀರೇಶಾನಂದ (೧೯೦೭-೧೯೯೮)

ಮೂಲ ಬಂಗಾಳಿ: **ಸ್ವಾಮಿ ಚೇತನಾನಂದ** ಭಾಗ ೩ ಅನುವಾದ: **ಕುಮಾರಿ ಪಿ. ಉಷಾ**

ಜೀವನವೆಲ್ಲ ಒಂದು ದೀರ್ಘ ಸ್ವಪ್ನವಲ್ಲದೆ ಬೇರೇನೂ ಅಲ್ಲವೆ? ಸ್ವಪ್ನ ಅಥವ ನಿದ್ರೆಯಿಂದ ಎಚ್ಚೆತ್ತರೆ ಉಳಿಯುವುದಾದರೂ ಏನು? ಏನು ಉಳಿಯುವುದೋ ಅದೇ.

ಅನಾದಿ ನಿದ್ರಯಾ ಸುಪ್ತೋ ಯದಾ ಜೀವೋ ಪ್ರಬುಧ್ಯತೇ ।
ಅನಿದ್ರಮಸ್ವಪ್ನಂ ನಿಷ್ಪನ್ನಂ ಬ್ರಹ್ಮ ನಿಷ್ಪನ್ನಂ ಬ್ರಹ್ಮ ತತ್ತದಾ ॥

ಅಜ್ಞಾನ ನಿದ್ರೆಯಲ್ಲಿ ಸುಪ್ತ ಜೀವವು ಅದೆಷ್ಟು ಸ್ವಪ್ನಗಳನ್ನು ಕಾಣುತ್ತದೆ! ಆದರೆ ಜ್ಞಾನೋದಯವಾದಾಗ - ನಿದ್ರೆಯಿಂದ ಎಚ್ಚೆತ್ತಾಗ ಜೀವವು ತನ್ನ ಸ್ವ-ಸ್ವರೂಪವನ್ನು ಪುನಃ ಪಡೆಯುತ್ತದೆ. ಇನ್ನುಮೇಲೆ ಸ್ವಪ್ನದೃಶ್ಯ ಇರುವುದಿಲ್ಲ; ಅದು ಎಲ್ಲೋ ವಿಲೀನವಾಗಿ ಬಿಡುತ್ತದೆ.


ಒಂದು ಸುಂದರ ಶ್ಲೋಕವನ್ನು ನಿನಗೆ ಹೇಳುತ್ತೇನೆ:

ಅಹಂಕಾರೋ ಧಿಯಂ ವೃತೇ ಮಾ ಸುಪ್ತೋಽಯಂ ಪ್ರಬೋಧಯ ।
ಉದೀತೇ ಪರಮಾನಂದೇ ನಾಹಂ ನ ತ್ವಂ ನೇದಂ ಜಗತ್ ॥

ಪರಮಪತಿ ಪರಮಾನಂದ ಸ್ವರೂಪನಾದ ಪರಮಾತ್ಮನು ಅಜ್ಞಾನವೆಂಬ ಗಾಢ ನಿದ್ರೆಯಲ್ಲಿ ಮುಳುಗಿರುವನು. ಕುಲಗೆಟ್ಟ ಸ್ತ್ರೀ ಬುದ್ಧಿಯು, ಉಪಪತಿ ಅಹಂಕಾರದೊಂದಿಗೆ ವಿಲಾಸದಲ್ಲಿ ಮಗ್ನಳಾಗಿ, ''ಆಹಾ! ನಾವು ಎಷ್ಟು ಆನಂದದಿದ್ದೇವೆ, ಇವನು ಮಲಗಿದ್ದಾನೆ. ಅವನನ್ನೆಬ್ಬಿಸಿ ಈ ಆನಂದದಲ್ಲಿ ಪಾಲ್ಗೊಳ್ಳುವಂತೆ ಮಾಡೋಣವೇ'' ಎಂದಾಗ ಅಹಂಕಾರವು ಹೇಳುತ್ತದೆ, ''ಜೋಕೆ! ಅವನನ್ನು ಎಚ್ಚರಗೊಳಿಸಿದರೆ ನೀನು, ನಾನು, ಜಗತ್ತು ಯಾರೂ ಉಳಿಯುವುದಿಲ್ಲ. ನಾವೆಲ್ಲ ನಾಶವಾಗಿ ಹೋಗುತ್ತೇವೆ. ನಮ್ಮ ಪ್ರಭುತ್ವ ಅವನು ಮಲಗಿರುವರೆಗೆ ಮಾತ್ರವೆ.'' ಸುಪ್ತೋಽಯಂ (ಅವನು ನಿದ್ರಿಸಿದ್ದಾನೆ, ಹಾಗೆ ಇರಲಿ) ಮಾ ಪ್ರಬೋಧಯ (ಅವನನ್ನು ಎಬ್ಬಿಸಬೇಡ).

೨೨.೦೨.೧೯೮೮, ಕಂಖಲ್ ಸೇವಾಶ್ರಮ

ನೀನು 'ಸತ್ಸಂಗ ರತ್ನಾವಳಿ'ಯನ್ನು 'ಉದ್ಬೋಧನ' ಪತ್ರಿಕೆಯಲ್ಲಿ ಪ್ರಕಟಿಸಬೇಕೆಂದಿರುವೆ. ಅವನ್ನೆಲ್ಲ ನಿನಗೆ ಕೊಟ್ಟಿರುವೆ. ನಿನ್ನ ಮನಸ್ಸಿಗೆ ತೋರಿದಂತೆ ಮಾಡು. ಆದರೆ 'ಉದ್ಬೋಧನ' ಅವುಗಳನ್ನು ಇಷ್ಟಪಡುವುದೆಂದು ನನಗನ್ನಿಸುತ್ತಿಲ್ಲ. ನನ್ನ ಹೆಸರನ್ನು ಬರೆಯಬೇಕಿಲ್ಲ. ಪೂರ್ಣಾತ್ಮಾನಂದರ ಯಾವ ಪತ್ರವೂ ನನಗೆ ಸಿಕ್ಕಿಲ್ಲ. ಲೇಖನಗಳನ್ನು ಪ್ರಕಟಿಸುವುದು, ನನ್ನ ಹೆಸರನ್ನು ಪ್ರಕಾಶಿಸುವುದು-ಈಗ ನನಗೆ ಇವೆಲ್ಲ ಸ್ವಲ್ಪವೂ ಇಷ್ಟವಿಲ್ಲ. ಈಗ 'ರಾಮ, ರಾಮ' ಎನ್ನುತ್ತ ದಿನಗಳನ್ನು ಚೆನ್ನಾಗಿ ಕಳೆದರೆ ಅಷ್ಟೇ ಸಾಕು - ಅದಕ್ಕಾಗಿ ಆಶೀರ್ವದಿಸು. ಈ ಜಗತ್ಸ್ವಪ್ನವು ಈಗ ರುಚಿಸುತ್ತಿಲ್ಲ. ಆದಷ್ಟು ಬೇಗನೆ ಈ ಸ್ವಪ್ನವು ಮುರಿಯಲಿ-



ಇದೇ ಪ್ರಾರ್ಥನೆ. ಈಗ ಬೇಕಾಗಿರುವುದು ಸ್ವಾಮೀಜಿಯವರು ಹೇಳಿದಂತೆ ''ಇನ್ನು ಕನಸು ಕಾಣಬೇಡ. ಸತ್ಯವನ್ನು ಅರಿತುಕೋ. ಬಳಿಕ ಅದರಲ್ಲಿ ಒಂದಾಗು. ದರ್ಶನಗಳೆಲ್ಲ ನಿಂತು ಹೋಗಲಿ.''

ನೀನು ಸ್ವಾಮೀಜಿಯವರ ಬಗ್ಗೆ ಒಂದು ವಿಡಿಯೊ ತಯಾರಿಸುವೆಯೆಂದು ಕೇಳಿ ಆನಂದವಾಯಿತು. ಅದನು ವೀಕ್ಷಿಸಿ ಅದೆಷ್ಟು ಜನ ಆನಂದಿಸುವರು! ನೀನು ಧನ್ಯ. ಎಷ್ಟೊಂದು ಜನರಿಗೆ ಆನಂದವನ್ನು ನೀಡುತ್ತಿರುವೆ! ಕೆಲಸಗಳ ಜೊತೆಗೆ ತುಂಬ ಜಪ-ಧ್ಯಾನಗಳನ್ನು ಮಾಡುವೆಯೆಂದು ಆಶಿಸುತ್ತೇನೆ. ಅವುಗಳನ್ನು ತಪ್ಪಿಸಬಾರದು. ಇಲ್ಲವಾದರೆ ವಿಡಿಯೊ-ಮಿಡಿಯೊಗಳಿಂದ ಏನೂ ಲಾಭವಿಲ್ಲ. ಲಂಗರನ್ನು ಎಸೆದು ದೋಣಿಗೆ ಹುಟ್ಟು ಹಾಕಬೇಕು.

ನನಗೀಗ ಹೊಸ ಲೇಖನವನ್ನು ಬರೆಯುವ ಸಾಮರ್ಥ್ಯವಾಗಲಿ ಉತ್ಸಾಹವಾಗಲಿ ಇಲ್ಲ. ಎರಡು ಕಣ್ಣುಗಳ ಪೊರೆಯ ಶಸ್ತ್ರಚಿಕಿತ್ಸೆಯ ನಂತರ ನಾನು ದೈಹಿಕವಾಗಿ, ಬೌದ್ಧಿಕವಾಗಿ ವಿಕಲನಾಗಿಬಿಟ್ಟಿರುವೆ. ಆದ್ದರಿಂದ 'ಮನಸ್ಸು' ಎಂಬ ವಿಷಯದ ಬಗ್ಗೆ ಲೇಖನ ಬರೆಯುವುದು, ಪರಾಮರ್ಶನ ಗ್ರಂಥಗಳನ್ನು ಸಂಗ್ರಹಿಸಿ ಓದುವುದು - ಇವೆಲ್ಲ ನನಗಿನ್ನು ಸಾಧ್ಯವಿಲ್ಲ. ಮಾಡ

ಬೇಕಾದ್ದನ್ನು ಬೇಕಾದಷ್ಟು ಮಾಡಿ ಮುಗಿಸಿದ್ದೇನೆ. ಇನ್ನು ನೀವೆಲ್ಲ ಬರೆಯಿರಿ. ನನಗೀಗ 'ಅಬ್ ತುಮ್ ಪಾರ್ ಕರೋ ಮೇರೆ ನೈಯಾ!' ಎಂಬ ಭಾವ ಬಂದಿದೆ. ನಾನು ಬಹಳ ಆನಂದದಿಂದಿದ್ದೇನೆ. ಭಗವಂತನ ಇಚ್ಛೆಯಂತಾಗಲಿ.''

೫.೧೧.೧೯೯೦, ಕಂಖಲ್ ಸೇವಾಶ್ರಮ

ಶ್ರೀರಾಮಕೃಷ್ಣರು ಹಾಗೂ ಅವರ ಶಿಷ್ಯರೆಲ್ಲರೂ ಹಾಸ್ಯಪ್ರಿಯರಾಗಿದ್ದರು. ವೇದಾಂತಿಗಳು ಮಾತ್ರವೇ ನಿಜವಾಗಿಯೂ ಹಾಸ್ಯಪ್ರಿಯರಾಗಬಲ್ಲರು. ಏಕೆಂದರೆ ಅವರಿಗೆ ಮಾತ್ರವೇ ಜಗತ್ತು ಮಾಯೆಯ ಲೀಲೆಯೆಂದು ತಿಳಿದಿರುತ್ತದೆ. ಸಿನಿಮಾದ ವಿಚಿತ್ರ ಚಿತ್ರಗಳನ್ನು ಅಥವ ಇಂದ್ರಜಾಲದ ನಾನಾ ಆಟಗಳನ್ನು ನೋಡಿ ಯಾರು ತಾನೇ ಆನಂದಿಸುವುದಿಲ್ಲ? ಆದ್ದರಿಂದಲೇ ಆಚಾರ್ಯರು ಹೇಳುತ್ತಾರೆ:

ಜಗಚ್ಚಿತ್ರಂ ಸ್ವಚೈತನ್ಯೇ ಪಟೇ ಚಿತ್ರಮಿವಾರ್ಪಿತಮ್।
ಮಾಯಯಾ ತದುಪೇಕ್ಷ್ಯೈವ ಚೈತನ್ಯಂ ಪರಿಶೇಷ್ಯತಾಮ್ ॥

ನನ್ನ ಬಿಳಿ ಗಡ್ಡವನ್ನು ನೋಡಿ ನಿನ್ನ ಅಮೆರಿಕನ್ ಭಕ್ತರು ನಾನೊಬ್ಬ ಪ್ರವೀಣ ಸಾಧುವೆಂದು ತಿಳಿದಿರುವರಾಗಿ ಬರೆದಿರುವರು. ಆದರೆ ಬಿಳಿ ಗಡ್ಡ ಹಲವು ಸಂಗತಿಗಳನ್ನು ಮರೆಮಾಡಬಲ್ಲುದು ಎಂದು ಅವರಿಗೆ ತಿಳಿದಿಲ್ಲವೆ? ಏನೇ ಆಗಲಿ, ನಾನು ಮಾತ್ರ ಮಹಾತ್ಮರ ಸಹವಾಸದಲ್ಲಿ ಇದ್ದೇನೆ ಎಂದೇ ಭಾವಿಸುತ್ತೇನೆ: ಏಕೆಂದರೆ, ಮೋಡದ ಮೇಲೆ ಸಿಂಹಾಸನದಲ್ಲಿ ಕುಳಿತ ಯೇಸುಕ್ರಿಸ್ತ, ಪೋಪ್-ಬಿಷಪ್‌ಗಳು, ಮಹಮ್ಮದ್, ಝರತುಷ್ಟ್ರ, ಬ್ರಹ್ಮ-ವಿಶ್ವಕರ್ಮನೇ ಮೊದಲಾದ ಹಲವು ಹಿಂದೂ ದೇವತೆಗಳು, ಹಲವು ಋಷಿಗಳು, ಶ್ರೀರಾಮಕೃಷ್ಣರು - ಎಲ್ಲರಿಗೂ ಗಡ್ಡವಿತ್ತು.

೧೫.೦೬.೧೯೯೧, ಕಂಖಲ್ ಸೇವಾಶ್ರಮ

God lived with Them ಪುಸ್ತಕದಲ್ಲಿ ನೀನು ನಿರಂಜನ್ ಮಹಾರಾಜರ ಜೀವನ ಚರಿತ್ರೆಯನ್ನು ಬರೆದಿರುವೆಯೆಂದು ತಿಳಿದು ಸಂತೋಷವಾಯಿತು. ಅವರು ಕಂಖಲ್‌ನ ದಕ್ಷೇಶ್ವರ ಮಂದಿರದ ದಕ್ಷಿಣದಲ್ಲಿ, ಗಂಗಾತೀರದಲ್ಲಿದ್ದ ಒಂದು ಗುಡಿಸಿಲಿನಲ್ಲಿದ್ದು ಅಲ್ಲಿಯೆ ಮರಣಹೊಂದಿದರೆಂದು ಕೇಳಿದ್ದೇನೆ. ಅವರ ಸೇವೆ ಮಾಡಲೆಂದು ಕಲ್ಯಾಣಾನಂದರು ಅವರನ್ನು ಆಶ್ರಮಕ್ಕೆ ಕರೆತರಬೇಕೆಂದಿದ್ದರು. ಆದರೆ ಅವರು ಅದಕ್ಕೊಪ್ಪಲಿಲ್ಲ. ಮಾತ್ರವಲ್ಲ, ''ನೀವು ನನ್ನನ್ನು ಶಾಂತಿಯಿಂದ ಸಾಯಲೂ ಬಿಡುವುದಿಲ್ಲವೆ?'' ಎಂದು ಹೇಳಿದ್ದರಂತೆ.

ನನ್ನ ಡೈರಿಗಳಿಂದ ೩೦ ಉಪನ್ಯಾಸಗಳಿಗೆ (From the Dairy of a Monk) ಬೇಕಾದ ವಿಷಯಗಳು ದೊರೆತಿವೆಯೆಂದು ತಿಳಿದು ಸಂತೋಷಗೊಂಡೆ. ವಿದ್ವಾಂಸರೂ, ಬುದ್ಧಿವಂತರೂ ದುಂಬಿಗಳಂತೆ. ಯಾವುದೇ ವಿಷಯದಿಂದ ಬೇಕಾದರೂ ಅವರು ಕಲಿಯುವರು. ಉದಾಹರಣೆಗೆ, ಅವಧೂತ ಹಾಗೂ ಅವರ ೨೪ ಗುರುಗಳು. ಇವೆಲ್ಲವನ್ನೂ ಪುನಃ ಪುನಃ ಸಂಗ್ರಹಿಸಿ, ಆಯ್ಕೆ ಮಾಡುವ ಸಾಮರ್ಥ್ಯ ನನ್ನ ಶರೀರ-ಮನಗಳಿಗೆ ಈಗಿಲ್ಲ. ಇವು ನಿನಗೆ ಉಪಯುಕ್ತವಾಗಿವೆ ಎಂಬುದೇ ನನಗೆ ಸಂತೋಷ. ನಿನಗೆ ಸರಿದೋರಿದಂತೆ ಮಾಡು. ವೃದ್ಧಾಪ್ಯದಲ್ಲಿ ನನ್ನಿಂದೇನು ಮಾಡಲೂ ಸಾಧ್ಯವಿಲ್ಲ. ನನ್ನನ್ನು ಇವುಗಳ ನಡುವೆ ಎಳೆಯಬೇಡ - ಇದೇ ನನ್ನ ಪ್ರಾರ್ಥನೆ. ನಾನು ಈ ಡೈರಿಗಳನ್ನು ಎಸೆದುಬಿಡೋಣವೆಂದುಕೊಂಡಿದ್ದೆ. ಇನ್ನೂ ಎಷ್ಟೋ ಲೇಖನಗಳನ್ನು ಬರೆಯಲೆಂದು ಪರಿವಿಡಿ ಬರೆದಿಟ್ಟುಕೊಂಡಿದ್ದೆ. ಅವುಗಳೆಲ್ಲ ಹಾಗೇ ಬಿದ್ದಿವೆ. ನನ್ನ ಈ ದೇಹದ ಗಂಗಾಯಾತ್ರೆಯ ಬಳಿಕ ಅವುಗಳನ್ನು ಪಡೆಯಲು ನೀನು ಪ್ರಯತ್ನಿಸಬಹುದು. ಇವುಗಳಿಂದ ನಿನಗೆ ಉಪಯೋಗವಾಗಬಹುದು. ಈಗ ಆತನ ನಾಮಸ್ಮರಣೆ ಮಾಡುತ್ತ ಉಳಿದಿರುವ ದಿನಗಳನ್ನು ಕಳೆಯುವಂತೆ ನೀವು ನನಗಾಗಿ ಪ್ರಾರ್ಥಿಸಿ. ನನಗಿನ್ನೇನೂ ಬೇಡ.

ಕೊನೆಗಾಲದಲಿ ರಾಮಕೃಷ್ಣ ನಾಮವಲ್ಲದೆ ಅನ್ಯಗತಿ ಎಮಗಿಲ್ಲ
ರಾಮಕೃಷ್ಣರ ಭಜಿಸು, ರಾಮಕೃಷ್ಣರ ಸ್ಮರಿಸು
ಇಂಥ ಕರುಣಾಳು ಇನ್ನಿಲ್ಲ ಜಗದಲಿ।

ಜೀವನಚರಿತ್ರೆಯನ್ನು ಬರೆಯುವ ಬಗ್ಗೆ ಗುರುದಾಸ ಮಹಾರಾಜರೊಂದಿಗೆ (ಸ್ವಾಮಿ ಅತುಲಾನಂದ) ಮಾತನಾಡಿದ್ದೆ. ಅವರು ಹೇಳಿದ್ದನ್ನು ಪ್ರತಿ ಮಾಡಿ ಕಳುಹಿಸಿದೆ. ವಿಷಯ ಚಿಂತನೀಯವಾದುದು. ಒಂದು ದಿನ ಅವರು ಹೇಳಿದ್ದರು, ''ಜೀವನ ಚರಿತ್ರೆಯಲ್ಲವೂ 25% ಮಾತ್ರವೇ ಸತ್ಯ. ಉಳಿದದ್ದೆಲ್ಲ ಉತ್ಪ್ರೇಕ್ಷೆ.''

ನಾವು ಅನೇಕ ವಿಷಯಗಳನ್ನು ಗುಪ್ತವಾಗಿರಿಸುತ್ತೇವೆ. ಠಾಕೂರರ ಜೀವನದಲ್ಲಿ ಮಾತ್ರವೇ ಅವರ ಮಾನವ ಆಯಾಮ ಅವರದೇ ಮಾತುಗಳಲ್ಲಿ ಪ್ರಕಟವಾಗಿರುವುದನ್ನು ನಾವು ಕಾಣುತ್ತೇವೆ. ಆದರೆ ಜನರು ಅವರ ದೈವೀ ಆಯಾಮವನ್ನು ಮಾತ್ರ ನೋಡಬಯಸುತ್ತಾರೆ. ಠಾಕೂರರು ಕಾಮಾತುರರಾಗಿ ಚಡಪಡಿಸುತ್ತ, ನೆಲದ ಮೇಲೆ ಬಿದ್ದು ಹೊರಳಾಡುತ್ತ, ತಮ್ಮ ಮುಖವನ್ನು ನೆಲಕ್ಕೆ ಉಜ್ಜುತ್ತ ಹೇಳುತ್ತಾರೆ, ''ಅಮ್ಮಾ, ಹಾಗೇನಾದರೂ ಆದರೆ ನಾನು ಆತ್ಮಹತ್ಯೆ ಮಾಡಿಕೊಳ್ಳುವೆ.'' ಇದೊಂದು ಆಶಾದಾಯಕ ಘಟನೆ. ಇದರಿಂದ ನಾವು ಪಾಠ ಕಲಿತೆವು. ರಾಮದತ್ತನಂತಹ ಭಕ್ತರು ಇದನ್ನು ಪ್ರಕಟಪಡಿಸುತ್ತಿರಲಿಲ್ಲವೇನೊ? ಆದರೆ ಇದನ್ನು ಮುಚ್ಚಿಟ್ಟು ಪ್ರಯೋಜನ ವಾದರೂ ಏನು? ಮಹಾನ್ ಋಷಿಗಳೂ ಕೂಡ ಪತನ ಹೊಂದಿದ್ದಾರೆ. ಇವೆಲ್ಲ ಅಲ್ಪಕಾಲಿಕ ಹಂತಗಳು. ಪುನಃ ಅವರು ತಮ್ಮ ಗಾಢ ತಪಸ್ಸಿನಿಂದ ಎದ್ದು ನಿಂತಿರುವರು. ಇದರಿಂದ ನಾವು ಪಾಠ ಕಲಿಯುತ್ತೇವೆ. ಯಾರೂ ಕೂಡ ತಮ್ಮ ಬಗ್ಗೆ ಅತಿಯಾದ ಆತ್ಮವಿಶ್ವಾಸ ಹೊಂದಿರಬಾರದು. ಭಗವಂತ ಕಾಪಾಡಿದರೆ ಮಾತ್ರವೇ ನಮಗೆ ರಕ್ಷಣೆ, ಇಲ್ಲವಾದರೆ ಸರ್ವನಾಶ ಎಂಬುದನ್ನು ನಾವು ಮರೆಯುವಂತಿಲ್ಲ. ಆತನಲ್ಲಿ ಶರಣಾಗುವುದೊಂದೇ ಉಪಾಯ.

'ಸತ್ಸಂಗ ರತ್ನಾವಳಿ'ಯ ಬಗ್ಗೆ ನಾನು ಈ ಮೊದಲೇ ನನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಿರುವೆ. ಕೆಲವರು ನನ್ನನ್ನು ಶಂಕರರ

ಅನುಯಾಯಿ ಎಂದು ತಿಳಿದಿದ್ದಾರೆಂದು ಕೇಳಿರುವೆ. ಅವರಿಗೆ ಒಳಿತಾಗಲಿ. ಯಾರು ಶಂಕರರ ಅನುಯಾಯಿ, ಹಾಗೂ ಯಾರು ಶ್ರೀರಾಮಕೃಷ್ಣರ ಅನುಯಾಯಿ ಎಂಬುದು ಬಹುಶಃ ಭಗವಂತನಿಗೆ ಮಾತ್ರವೆ ಗೊತ್ತು. ನನಗೆ ಮಾತ್ರ ಶಂಕರ ಹಾಗೂ ರಾಮಕೃಷ್ಣರಲ್ಲಿ ಯಾವ ವ್ಯತ್ಯಾಸವೂ ಕಾಣಿಸದು. ಸಾಮಾನ್ಯ ಜನರಿಗಾಗಿ ಠಾಕೂರರು ಭಕ್ತಿಪಥವನ್ನು ಒತ್ತಿ ಹೇಳುತ್ತಿದ್ದರು. ಶಂಕರರೂ ಅನೇಕ ಸ್ತುತಿಗಳನ್ನು ರಚಿಸಿದ್ದಾರೆ. **'ಸತ್ಯಪಿ ಭೇದಾಪಗಮೇ ನಾಥ ತವಾಹಂ ನ ಮಾಮಕೀನಸ್ತ್ವಮ್। ಸಾಮುದ್ರೋ ಹಿ ತರಂಗಃ ಕ್ವಚನ ಸಮುದ್ರೋ ನ ತರಂಗಃ ॥'** ಶಂಕರರ ಭಕ್ತಿ ಪ್ರಧಾನವಾದ ಅಸಂಖ್ಯಾತ ಸ್ತವ-ಸ್ತುತಿಗಳನ್ನು ಯಾರು ತಾನೆ ಸ್ವೀಕರಿಸದಿರಲು ಸಾಧ್ಯ? ಠಾಕೂರರು ಸ್ವಾಮೀಜಿಯವರಿಗೆ ಶಂಕರರ ಅದ್ವೈತ ವಾದದ ಶಿಕ್ಷಣವನ್ನೇ ನೀಡಿದ್ದರು. ಸ್ವಾಮೀಜಿಯವರು ಜಗತ್ತಿಗೆ ಹರಡಿರುವುದೂ ಇದೇ ಅದ್ವೈತವನ್ನು. ಸ್ವಾಮೀಜಿ ಹೇಳುತ್ತಾರೆ, 'ಸಾಮಾನ್ಯವಾಗಿ ಅವರು (ಶ್ರೀರಾಮಕೃಷ್ಣರು) ಉಪದೇಶ ಮಾಡುತ್ತಿದ್ದುದು ದ್ವೈತ ಅಥವಾ ವಿಶಿಷ್ಟಾದ್ವೈತವನ್ನು. ಅವರು ಎಂದೂ ಅದ್ವೈತವನ್ನು ಉಪದೇಶಿಸುತ್ತಿರಲಿಲ್ಲ. ಆದರೆ ಅವರು ನನಗೆ ಅದ್ವೈತವನ್ನು ಬೋಧಿಸಿದರು.''

ಸ್ವಾಮೀಜಿಯವರ ಸಿಂಹಗರ್ಜನೆ ಇದು : ''ಏಳಿ! ಎದ್ದೇಳಿ! ಕನಸು ಕಾಣಬೇಡಿ. ಧೈರ್ಯ ತಾಳಿ, ಸತ್ಯವನ್ನು ಎದುರಿಸಿ. ಅದರಲ್ಲಿ ಒಂದಾಗಿ. ಎಲ್ಲ ಭ್ರಮೆಗಳೂ ಕೊನೆಗೊಳ್ಳಲಿ.'' ಹಾಗಾದರೆ ಅವರು, ಸ್ವಾಮೀಜಿ ಕೂಡ ಶಂಕರರ ಅನುಯಾಯಿ ಎನ್ನುವರು. ಏನಾದರೂ ಹೇಳಲಿ, 'ವಿಭಿನ್ನರುಚಯೋಹಿ ಲೋಕಾಃ'.

ಸೇವಾಪ್ರತಿಷ್ಠಾನವನ್ನು ಮುಚ್ಚಬೇಕಾಯಿತಂತೆ. ಅಲ್ಲಿ ಮಹತ್ತರ ಕಾರ್ಯ ನಡೆಯುತ್ತಿತ್ತು. ನಡೆಸುವುದು ಸಾಧ್ಯವಾಗದೆ ಹೋಯಿತು. ಇಲ್ಲಿಯೂ (ಕಂಖಲ್‌ನಲ್ಲಿ) ಕೆಲಸ ಹೆಚ್ಚಿದೆ, ಇನ್ನೂ ಹೆಚ್ಚುತ್ತಿದೆ. ಕಾಶಿಯ ಸೇವಾಶ್ರಮದಲ್ಲಿ ೨೪ ಗಂಟೆ ಕೂಡ ಸಶಸ್ತ್ರ ಸಂರಕ್ಷಕರನ್ನು ಇರಿಸಿಕೊಳ್ಳಬೇಕಾಗಿದೆಯೆಂದು ಕೇಳಿದೆ. ಇದೇ ನಮ್ಮ 'ಶಿವಜ್ಞಾನೇ ಜೀವಸೇವಾ' ಎಂಬ ಮಂತ್ರದ ಪರಿಣಾಮ. ಸ್ವಾಮೀಜಿಯ ನುಡಿಗಳು ಮಿಥ್ಯೆಯಾಗವು. ನಾವು ಅವರ ಯೋಗ್ಯ ಅನುಯಾಯಿಗಳು ಅಲ್ಲವೆನ್ನಬೇಕು. ಭವಿಷ್ಯದಲ್ಲಿ ಯೋಗ್ಯರು ಬರುವರು. ಅವರು ಠಾಕೂರ್-ಸ್ವಾಮೀಜಿಯವರ ಉಪದೇಶಗಳಿಗೆ ಸರಿಯಾದ ರೂಪು ನೀಡುವರೆಂದು ತೋರುತ್ತದೆ.

ಭಗವಂತನು ಅವತರಿಸಿದಾಗ ಆಯಾ ದೇಶ, ಸಮಾಜಗಳಲ್ಲಿ ವೈಯಕ್ತಿಕ ಹಾಗೂ ಸಾಮೂಹಿಕ ಜೀವನದಲ್ಲಿ ನಾನಾ ಪರಿವರ್ತನೆಗಳು ಕಂಡುಬರುತ್ತವೆ. ಇದರಿಂದ ನೂತನ ಸಮಾಜದ ಸೃಷ್ಟಿಯಾಗುತ್ತದೆ. ಅವತಾರಗಳ ಆಗಮನ ಎಂದಿಗೂ ವ್ಯರ್ಥವಾಗದು. ಆದರೆ ಆ ಸುವರ್ಣ ಯುಗದ ಆಗಮನವನ್ನು ನಾವು ನೋಡಿ ಹೋಗಲಾಗುವುದಿಲ್ಲ. ನಮ್ಮ ಕಾಲದಲ್ಲಿ ಅದು ಸಂಭವಿಸುವುದಿಲ್ಲ.

ನಮ್ಮ ಅನೇಕ ಸಾಧುಗಳು ಹೃಷೀಕೇಶ, ಉತ್ತರಕಾಶಿಗಳಲ್ಲಿ ರೊಟ್ಟಿ-ಬೇಳೆಸಾರನ್ನು ತಿಂದುಕೊಂಡು ತಪಸ್ಸು ಮಾಡಲೆಂದು ಓಡೋಡಿ ಬರುತ್ತಿರುವುದು ಕಂಡುಬರುತ್ತಿದೆ.

'ಠಾಕೂರರ ಆಶ್ರಮಗಳು ತಪಸ್ಸು ಮಾಡಲು ಅನುಕೂಲವಾಗಿರದಿದ್ದರೆ ಅಂತಹ ಆಶ್ರಮಗಳ ಸಾರ್ಥಕತೆಯಾದರೂ ಏನು?' ಎಂದು ಮಹಾಪುರುಷ ಮಹಾರಾಜರು ಹೇಳುತ್ತಿದ್ದರು. ನಿಜವಾದ ದೃಷ್ಟಿಕೋನವನ್ನೇ ನಾವು ಕಳೆದುಕೊಂಡಿದ್ದೇವೆ, ಅನ್ನಿಸುತ್ತದೆ. ಈಗ ಆಶ್ರಮಗಳಲ್ಲಿ ರೇಡಿಯೋ, ಟಿ.ವಿ., ಹರಟೆ, ಒಳ್ಳೆಯ ಊಟ, ಒಳ್ಳೆಯ ಉಡುಗೆ-ತೊಡುಗೆ ಇವುಗಳೊಂದಿಗೆ ಸ್ವಲ್ಪ ಕೆಲಸ - ಇವುಗಳೇ ಜೀವನಾದರ್ಶವಾಗಿಬಿಟ್ಟಿವೆ. ಜೀವನ ಸುಲಭವಾಗಿಬಿಟ್ಟಿದೆ. ಭಗವಂತನು ತನ್ನ ಸಂಘವನ್ನು ರಕ್ಷಿಸಿ ನಮಗೆ ಸದ್ಬುದ್ಧಿ ನೀಡಲೆಂಬುದೇ ಪ್ರಾರ್ಥನೆ. ಆತನ ಸಂಘವನ್ನು ಆತನೇ ರಕ್ಷಿಸುವನು. ಏರಿಳಿತಗಳು ತಾತ್ಕಾಲಿಕ - ಬರುತ್ತವೆ, ಹೋಗುತ್ತವೆ. **'ಸಃ ನಃ ಬುದ್ಧ್ಯಾ ಶುಭಯಾ ಸಂಯುನಕ್ತು ।'**

೧೬.೧೧.೧೯೬೧, ಕಂಖಲ್ ಸೇವಾಶ್ರಮ

ಬಾಲ್ಯದಲ್ಲಿ 'ಅಧ್ಯಾತ್ಮರಾಮಾಯಣ'ವನ್ನು ಓದಿ ಮುಗ್ಧನಾಗಿದ್ದೆ. ಈ ಅಪೂರ್ವ ಪುಸ್ತಕದ ಬಂಗಾಳಿ ಅನುವಾದವನ್ನು ಮಾಡಿದರೆ ಚೆನ್ನಾಗಿತ್ತು, ಎಂಬ ಆಸೆ ಆಗಿನಿಂದಲೇ ನನಗಿತ್ತು. ಆಗ ನಾನು ಬಂಗಾಳಿಯಲ್ಲಿ ಈ ಪುಸ್ತಕವನ್ನು ನೋಡಿರಲಿಲ್ಲ. ಜೀವನ ಸಂಧ್ಯೆಯಲ್ಲಿ ಈ ಪುಸ್ತಕವನ್ನು ಬಂಗಾಳಿಗೆ ಅನುವಾದಿಸಲು ಪ್ರಾರಂಭಿಸಿದ್ದೇನೆ. ಮುಕ್ಕಾಲು ಭಾಗ ಮುಗಿದಿದೆ. ಉಳಿದ ಕಾಲುಭಾಗ ಆತನ ಇಚ್ಛೆಯಿಂದ ಬಹುಶಃ ಮುಗಿಯುತ್ತದೆ. ಅನುವಾದದಲ್ಲಿ ಶ್ಲೋಕದ ಅನುವಾದ-ಭಾಷಾಶೈಲಿ-ಶುದ್ಧತೆ-ಮಾಧುರ್ಯಗಳನ್ನು ಕಾಪಾಡಿಕೊಳ್ಳುವುದು ಕಠಿಣ ಕೆಲಸ. ಭಾವಾನುವಾದ ಸುಲಭ. ಅದರಲ್ಲಿ ನಮಗಿಷ್ಟ ಬಂದಂತೆ ಪದ-ಸಂಯೋಜನೆಯನ್ನೂ ಮಾಡಬಹುದು. ಇರಲಿ, ಕೊನೆಗಾಲದಲ್ಲಿ ರಾಮನ ಚರಿತ್ರೆಯನ್ನು ಮನನ ಮಾಡುತ್ತಿರುವೆ. ಇದೇ ನನಗಾದ ಲಾಭ. ಓದುತ್ತಿದ್ದಂತೆ ಕೆಲವೆಡೆಯಲ್ಲಿ ಭಾವಪರವಶನಾಗುತ್ತೇನೆ. ಠಾಕೂರರು ಈ ಪುಸ್ತಕವನ್ನು ಮನಸಾರೆ ಪ್ರಶಂಸಿಸಿದ್ದಾರೆ. ಬೇರೆಲ್ಲೂ ಇಂತಹ ಜ್ಞಾನ-ಭಕ್ತಿಗಳ ಸಮನ್ವಯ ಕಂಡುಬರುವುದಿಲ್ಲ.

ಒಬ್ಬರು ಹೇಳುತ್ತಿದ್ದರು, 'ಕೇಶವ ಚಂದ್ರ ಸೇನನೇ ಜ್ಞಾನ-ಭಕ್ತಿಗಳ ಸಮನ್ವಯವನ್ನು ಮಾಡಿದ್ದಾನೆ ಎಂದು ಬ್ರಹ್ಮ ಸಮಾಜದವರ ಅಭಿಪ್ರಾಯ' ಎಂದು. ಅದನ್ನು ಕೇಳಿದ ಠಾಕೂರರು ಹೇಳಿದರು, ''ಇದೇನು ಹೇಳುತ್ತಿರುವೆ? ಹಾಗಾದರೆ ಅಧ್ಯಾತ್ಮ ಏನು? ಅಧ್ಯಾತ್ಮರಾಮಾಯಣದಲ್ಲಿ ಇದನ್ನು ವಿವಿಧ ರೀತಿಯಾಗಿ ಘೋಷಿಸಲಾಗಿದೆ.'' ಠಾಕೂರರೇ ಹೇಳುತ್ತಿದ್ದಂತೆ ಈ ಪುಸ್ತಕದ ಮೇಲೆ ಅವರಿಗೆ ವಿಶೇಷ ಆಕರ್ಷಣೆಯಿತ್ತು. ನಮ್ಮ ಠಾಕೂರರ ಕುಲದೇವತೆಯ ರಘುವೀರನೇ ಆಗಿದ್ದು, ಆ ಮೂರ್ತಿಯೆಂದರೆ ಅವರಿಗೆ ವಿಶೇಷ ಆಕರ್ಷಣೆ.

(ಮುಂದಿನ ಸಂಚಿಕೆಗೆ)



‘ನಾಲ್ಕಾಣೆ’

ವಾರಾಣಸಿ ರಾಮಕೃಷ್ಣ ಸೇವಾಶ್ರಮದ ಆರಂಭದ ಕಥೆ

ಭಾಗ ೨

ಸ್ವಾಮಿ ಮಂಗಳಾತ್ಮಾನಂದ

ರಾಮಕೃಷ್ಣ ಮಹಾಸಂಘದ ಅಧ್ಯಕ್ಷ ಸ್ವಾಮಿ ಬ್ರಹ್ಮಾನಂದಜಿಯವರು ೧೯೦೩ರಲ್ಲಿ ಕಾಶೀಧಾಮಕ್ಕೆ ಭೇಟಿ ಇತ್ತರು. ಸೇವಾಶ್ರಮಕ್ಕಾಗಿ ಒಂದು ಸ್ವತಂತ್ರವಾದ ಕಟ್ಟಡ ಮತ್ತು ಜಾಗ ಇರಬೇಕೆಂದು ಚಾರುಚಂದ್ರನ ಬಳಿ ತಮ್ಮ ಅಭಿಪ್ರಾಯವನ್ನು ಪ್ರಕಟಪಡಿಸಿದರು. ಮಹಾತ್ಮರು, ತಪಸ್ವಿಗಳು ಲೋಕಕಲ್ಯಾಣಕ್ಕಾಗಿ ಏನದರೊಂದು ಆಸೆಯನ್ನು ವ್ಯಕ್ತಪಡಿಸಿದಾಗ ಅದು ಬಹುಬೇಗನೆ ನೆರವೇರುವುದನ್ನು ಪುರಾಣ-ಇತಿಹಾಸಗಳಿಂದ ನಾವು ಬಲ್ಲೆವು. ಕಾಶೀಧಾಮದಲ್ಲಿಯೂ ಇದೇ ರೀತಿ ಸಂಭವಿಸಿತು. ಸ್ವಾಮಿ ಬ್ರಹ್ಮಾನಂದಜಿಯವರು ತಮ್ಮ ಅಪೇಕ್ಷೆಯನ್ನು ವ್ಯಕ್ತಪಡಿಸಿದ ಕೆಲವೇ ದಿನಗಳಲ್ಲಿ ಕೋಲ್ಕತ್ತಾದ ಶ್ರೀ ಉಪೇಂದ್ರ ನಾರಾಯಣ ದೇವ್ ಎನ್ನುವವರು ನಾಲ್ಕು ಸಾವಿರ ರೂಪಾಯಿಗಳನ್ನು ಚಾರುಚಂದ್ರನಿಗೆ ಕಳುಹಿಸಿಕೊಟ್ಟರು. ಶ್ರೀ ತಾರಿಣೀಚರಣ ಪಾಲ್ ಎನ್ನುವ ಹೂಗ್ಲಿಯ ಭಕ್ತರೊಬ್ಬರು ತನ್ನ ಜೀವಮಾನದಲ್ಲಿ ಸಂಗ್ರಹಿಸಿಟ್ಟ ಎರಡು ಸಾವಿರ ರೂಪಾಯಿಗಳನ್ನು ಕಳುಹಿಸಿಕೊಟ್ಟರು. ಆಗಲೇ ರಾಮಕೃಷ್ಣ ಅದ್ವೈತ ಆಶ್ರಮವು ಬಾಡಿಗೆ ಮನೆಯಲ್ಲಿ ಪ್ರಾರಂಭವಾಗಿತ್ತು. ಆ ಜಾಗದ ಯಜಮಾನನು ಸ್ವಾಮಿ ಶಿವಾನಂದರಿಗೆ ವಿನಂತಿಸಿದ: ‘‘ತಾವು ಆಶ್ರಮಕ್ಕಾಗಿ ಜಾಗ ಹುಡುಕುತ್ತಿದ್ದೀರಿ, ತಾವು ಖರೀದಿಸುವುದಾದರೆ ಈ ಜಾಗವನ್ನು ನಾನು ತಮಗೆ ಮಾರುತ್ತೇನೆ. ತಮಗೆ ಆರು ಸಾವಿರ ರೂಪಾಯಿಗಳಿಗೆ ಮಾರುತ್ತೇನೆ. ಬೇರೆಯವರಿಗೆ ಇಷ್ಟು ಕಡಿಮೆ ಬೆಲೆಯಲ್ಲಿ ಮಾರುವುದಿಲ್ಲ’’ ಎಂದನು. ಶಿವಾನಂದಜಿಯವರು ಚಾರುಚಂದ್ರನಿಗೆ ತಕ್ಷಣ ಕಾರ್ಯಪ್ರವೃತ್ತನಾಗು ಎಂದರು. ಪ್ರಸ್ತುತ ಇರುವ ಅದ್ವೈತ ಆಶ್ರಮಕ್ಕೆ ಹಾಗೂ ರಾಮಕೃಷ್ಣ ಮಿಶನ್ನಿಗಾಗಿ ಜಾಗ ಖರೀದಿಸಲಾಯಿತು. ಚಾರುಚಂದ್ರನಿಗಂತೂ ಒಂದು ಕಡೆ ಶ್ರೀ ಗುರುಮಹಾರಾಜರ ಪೂಜೆ, ಜಪಧ್ಯಾನ-ಸಾಧನೆಗಳು, ಮತ್ತೊಂದೆಡೆ ರೋಗಿ ನಾರಾಯಣರ ಸೇವೆ ಜೊತೆ ಜೊತೆ ನಡೆಯಬೇಕೆಂದು ತನ್ನ ಗುರು ಮತ್ತು ಸ್ವಾಮೀಜಿಯವರಿಂದ ಆದೇಶವೇ ಆಗಿತ್ತು.

ಉಲ್ಲೇಖನೀಯ ವಿಚಾರವೆಂದರೆ ಸೋದರಿ ನಿವೇದಿತಾರವರು ಕಾಶೀಧಾಮದಲ್ಲಿ ಕೆಲವು ದಿನ ಇದ್ದು ಸೇವಾಶ್ರಮದ ರೋಗಿಗಳ ಶುಶ್ರೂಷೆ ಮಾಡಿದ್ದರು. ಸೇವಾಶ್ರಮಕ್ಕಾಗಿ ಇತರ ಸಾಧುಗಳು ಮತ್ತು ಸೇವಕರ ಜೊತೆ ಮನೆ ಮನೆಗೆ ಹೋಗಿ ಭಿಕ್ಷೆ ಬೇಡಿದ್ದರು ಕೂಡ. ಸೇವಾಶ್ರಮದ ಧನಸಹಾಯಕ್ಕಾಗಿ ಜನತೆಗೆ ಒಂದು ಮನವಿಯನ್ನು ಕೂಡ ಬರೆದುಕೊಟ್ಟಿದ್ದಾರೆ. ಈ ಮನವಿ ಪತ್ರದಲ್ಲಿ ಕಾಶೀಧಾಮದ ಪುರಾಣ-ಇತಿಹಾಸಗಳೆಲ್ಲವನ್ನೂ ಸಂಕ್ಷಿಪ್ತವಾಗಿ ತಿಳಿಸಿದ್ದಾರೆ. ಪ್ರಾಜ್ಞರು ಓದುವ ಹಾಗೆ ಬರೆದಿದ್ದಾರೆ.

ಸೇವಾಶ್ರಮದ ಶಂಕುಸ್ಥಾಪನೆಗಾಗಿ ಸ್ವಾಮಿ ಬ್ರಹ್ಮಾನಂದಜಿ ಕಾಶಿಗೆ ಬಂದಿದ್ದರು. ೧೯೦೮ರ ಏಪ್ರಿಲ್ ೧೬ರಂದು ಕೆಲವು ಸ್ಥಳೀಯ ಗಣ್ಯರು, ಭಕ್ತರು ಮತ್ತು ಸೇವಾಶ್ರಮದ ಪದಾಧಿಕಾರಿಗಳ ಸಮೂಹದಲ್ಲಿ ಸಂಘಾಧ್ಯಕ್ಷರಿಂದ ಶಂಕುಸ್ಥಾಪನೆ ನೆರವೇರಿತು. ಸ್ವಾಮಿ ವಿಜ್ಞಾನಾನಂದಜಿಯವರು ಕಟ್ಟಡದ ನಕಾಶೆಯನ್ನು ತಯಾರು ಮಾಡಿಕೊಟ್ಟರು. ಕೇದಾರ ಬಾಬಾ (ಸ್ವಾಮಿ ಅಚಲಾನಂದ) ಮತ್ತು ಸ್ವಾಮಿ ಸಚ್ಚಿದಾನಂದರ ಉಸ್ತುವಾರಿಯಲ್ಲಿ ಕಟ್ಟಡದ ಕಾಮಗಾರಿ ನಡೆಯಲಾರಂಭಿಸಿತು.

ಎರಡೇ ವರ್ಷಗಳಲ್ಲಿ ಸೇವಾಶ್ರಮದ ಕಟ್ಟಡಗಳು ಮೇಲೆದ್ದವು. ೧೯೧೦ರ ಮೇ ತಿಂಗಳ ಹದಿನಾರರಂದು ಉದ್ಘಾಟನೆಗಾಗಿ ದಿನ ಗೊತ್ತುಪಡಿಸಿದರು. ಸ್ವಾಮಿ ಬ್ರಹ್ಮಾನಂದಜಿ, ಸ್ವಾಮಿ ಶಿವಾನಂದಜಿ, ಶ್ರೀಯುತ ರಾಮಲಾಲ ಚಟರ್ಜಿ, ಬೇಲೂರು ಮಠದ ಹಲವು ಸಾಧು ಬ್ರಹ್ಮಚಾರಿಗಳು ಈ ಸಮಾರಂಭಕ್ಕೆ ಬಂದಿದ್ದರು.

ಪರಮಪೂಜ್ಯ ಬ್ರಹ್ಮಾನಂದಜಿಯವರ ಅಮೃತ ಹಸ್ತದಿಂದ ಆಸ್ಪತ್ರೆ ಉದ್ಘಾಟನೆಯಾಯಿತು. ನಲುವತ್ತಾರು ಒಳರೋಗಿಗಳ, ಹೊರ ರೋಗಿಗಳ ವಿಭಾಗ, ಉಗ್ರಾಣ ಗ್ರಂಥಾಲಯ, ಪ್ರಯೋಗ ಶಾಲೆ ಇತ್ಯಾದಿಗಳಿಂದ ಕೂಡಿದ ಸುಸಜ್ಜಿತ ಆಸ್ಪತ್ರೆ ತಯಾರಾಯಿತು. ಆಗಿನ ವಾರಾಣಸಿ ಜಿಲ್ಲಾಧಿಕಾರಿಯಾಗಿದ್ದ ಶ್ರೀಯುತ ಗ್ಯಾಸ್ಕೆಲ್(Gaskel)ರವರು ಸಾಧುಗಳ ಸಮಾಜಸೇವೆಯನ್ನು ನೋಡಿ ಬಹಳ ಖುಷಿಪಟ್ಟು ವರ್ಷಕ್ಕೆ ನೂರ ಇಪ್ಪತ್ತು ರೂಪಾಯಿಗಳನ್ನು ಮುನ್ಸಿಪಾಲಿಟಿಯಿಂದ ಕೊಡುವ ವ್ಯವಸ್ಥೆ ಮಾಡಿದ್ದರು; ವಾರ್ಷಿಕ ತೆರಿಗೆಯನ್ನು ರದ್ದುಪಡಿಸಿದ್ದರು.

ಆಸ್ಪತ್ರೆಯಾದರೆ ಸಾಕೆ? ಸುಶಿಕ್ಷಿತ ಯುವಕರು ಬೇಕಲ್ಲವೆ? ಆಗಿನ ಕಾಲದಲ್ಲಿ ಅದು ಬಹಳ ಕಷ್ಟದ ಕೆಲಸವಾಗಿತ್ತು. ಚಾರುಚಂದ್ರನು ಸ್ಥಳೀಯ ಕೆಲವು ಯುವಕರನ್ನು ಆಯ್ದು ತರಬೇತಿ ಕೊಡಲಾರಂಭಿಸಿದ. ಸ್ವಾತಂತ್ರ್ಯದ ಆಂದೋಲನದಲ್ಲಿ ಭಾಗವಹಿಸಿದ್ದ ಕೆಲವು ಬಂಗಾಳಿ ಯುವಕರು ಕೂಡ ಇಲ್ಲಿ ಸೇವಾವ್ರತಿಗಳಾಗಿ ಸೇರಿದರು; ಇದೂ ಕೂಡ ಒಂದು ದೇಶಸೇವೆ, ಸ್ವಾತಂತ್ರ್ಯ ಹೋರಾಟದ ಒಂದು ಭಾಗ ಎಂದು ಆ ಯುವಕರಿಗೆ ಮನದಟ್ಟಾಯಿತು.

ಸೇವಾಶ್ರಮದ ಸೇವೆ ಪ್ರಾರಂಭವಾಗಿ ಹನ್ನೊಂದು ವರ್ಷಗಳಾದವು. ಚಾರುಚಂದ್ರನಿಗೆ ಒಂದು ಚಿಂತೆ ಮನದಾಳದಲ್ಲಿತ್ತು – ಅದು ವೃದ್ಧಮಹಿಳೆಯರಿಗಾಗಿ ಏನೂ ಆಗಿಲ್ಲ ಎನ್ನುವುದು. ಇಂತಹ ಕಾಲಘಟ್ಟದಲ್ಲಿ ಒಬ್ಬ ಶ್ರೀಮಂತ ಮುಂದೆ ಬಂದು ಹೇಳಿದ, ಅನಾಥ, ವೃದ್ಧ ಮಹಿಳೆಯರಿಗಾಗಿ ಪ್ರತಿ ತಿಂಗಳು ನೂರು ರೂಪಾಯಿ ಕೊಡುತ್ತೇನೆಂದು. ಹಾಗಾಗಿ ೧೯೧೨ರ ಫೆಬ್ರವರಿಯಲ್ಲಿ ಜಂಗಮವಾಡಿ ರಸ್ತೆಯಲ್ಲಿ ಒಂದು ಮನೆಯನ್ನು ಬಾಡಿಗೆಗೆ ತೆಗೆದುಕೊಳ್ಳಲಾಯಿತು. ಈ ಮನೆಯಲ್ಲಿ ವೃದ್ಧ, ವಿಧವೆ, ಅನಾಥೆ ಇತ್ಯಾದಿ ಇಪ್ಪತ್ತು ಜನರನ್ನು ಇರಿಸಲಾಯಿತು. ಇವರಿಗೆ ಸರಳವಾದ ಆಹಾರ, ಬಟ್ಟೆ ಉಳಿದ ಆವಶ್ಯಕತೆಗಳನ್ನು ಪೂರೈಸಲಾಯಿತು. ದಾನಿಗಳಿಂದ ಇದಕ್ಕಾಗಿ ಆರ್ಥಿಕ ನೆರವು ಬರಲಾರಂಭಿಸಿತು.

ಅನ್ನಪೂರ್ಣೆಯು ಅಪಾರ ಕೃಪೆಯನ್ನು ಅನುಗ್ರಹಿಸುವವಳು. ವೃದ್ಧ ಮಾತೆಯರಿಗಾಗಿ ಪುನಃ ಅನ್ನಪೂರ್ಣೆಯು ಕೃಪೆ ಮಾಡಿದಳು. ಕಾಶೀಧಾಮದ ದಶಾಶ್ವಮೇಧ ಘಾಟಿನ ರಸ್ತೆಯಲ್ಲಿ ಪ್ರಸಿದ್ಧ ಪುಸ್ತಕ ಪ್ರಕಾಶನಾಲಯ ಮಾಲೀಕರು ನಿವಾರಣ ಚಂದ್ರದಾಸ್. ೧೯೧೩ ನಿವಾರಣ ಚಂದ್ರದಾಸರು ತಮ್ಮ ದೊಡ್ಡದಾದ ಮನೆ, ಕೂಡಿಟ್ಟ ಸಂಪತ್ತೆಲ್ಲವನ್ನೂ ಕಾಶೀ ರಾಮಕೃಷ್ಣ ಮಿಷನ್ ಸೇವಾಶ್ರಮಕ್ಕೆ ಧಾರೆ ಎರೆದು ಕೊಟ್ಟರು. ಜಂಗಮವಾಡಿಯಲ್ಲಿದ್ದ ವಿಧವಾ ಆನಾಥಾಶ್ರಮವನ್ನು ನಿವಾರಣದಾಸರ ಮನೆಗೆ ಸ್ಥಳಾಂತರಿಸಲಾಯಿತು. ಏಕಕಾಲದಲ್ಲಿ ಹದಿನೆಂಟು ಮಹಿಳೆಯರು ಆ ಮನೆಯಲ್ಲಿರಬಹುದಿತ್ತು. ಈ ವೃದ್ಧಾಶ್ರಮಕ್ಕೆ ಗಂಡಸರಿಗೆ ಪ್ರವೇಶ ಇರಲಿಲ್ಲ. ಮಹಿಳೆಯರೇ ಎಲ್ಲವನ್ನೂ ನಿಭಾಯಿಸಬೇಕಾಗಿತ್ತು. ಅಡಿಗೆ ಮತ್ತು ಇತರ ಕೆಲಸ ನೋಡಿಕೊಳ್ಳಲು ಇಬ್ಬರು ಮಹಿಳೆಯರನ್ನು ನೇಮಿಸಲಾಗಿತ್ತು. ಇಲ್ಲಿ ಮಧ್ಯಾಹ್ನ ಸರಳವಾದ ಊಟ, ರಾತ್ರಿ ಲಘು ಉಪಾಹಾರಗಳನ್ನು ಕೊಡಲಾಗುತ್ತಿತ್ತು. ಈ ವೃದ್ಧಾಶ್ರಮದಲ್ಲಿ ನಿರ್ಗತಿಕ, ಅನಾಥ ವಿಧವೆಯರು ಜೀವನ ಪರ್ಯಂತ ಇರಬಹುದಿತ್ತು.

ರಾಮಕೃಷ್ಣ ಮಹಾಸಂಘದ ಅನ್ನಪೂರ್ಣೆ – ಶ್ರೀಮಾತೆ ಶಾರದಾದೇವಿಯವರು. ಶ್ರೀಮಾತೆಯವರು ಕಾಶಿಯ 'ಸದಾಪೂರ್ಣೆ ಅನ್ನಪೂರ್ಣೆ'ಯನ್ನು ದರ್ಶಿಸಲು ಕಾಶಿಗೆ ೧೯೧೨ ನವಂಬರ್ ತಿಂಗಳಲ್ಲಿ ಬಂದಿದ್ದರು. ಕಾಶಿಯಲ್ಲಿ ತಂಗಲು ಅವರಿಗೆ ರಾಮಕೃಷ್ಣ ಅದ್ವೈತ ಆಶ್ರಮದ ಪಕ್ಕದಲ್ಲಿಯ (ಆಶ್ರಮದ ಉತ್ತರ ದಿಕ್ಕಿಗೆ) 'ಲಕ್ಷ್ಮೀನಿವಾಸ' ಎಂಬ ಮನೆಯಲ್ಲಿ ವ್ಯವಸ್ಥೆ ಮಾಡಲಾಗಿತ್ತು.

ಶ್ರೀಮಾತೆಯವರು ಕಾಶೀಧಾಮಕ್ಕೆ ಬರುವರೆಂದು ಹೊಸದಾಗಿ ಕಟ್ಟಿದ 'ಲಕ್ಷ್ಮೀನಿವಾಸ'ವನ್ನು ಅವರ ಆಗಮನಕ್ಕೆ ಮುಂಚಿತವಾಗಿಯೆ ಗೃಹಪ್ರವೇಶ ಮಾಡಿದ್ದರು. 'ಲಕ್ಷ್ಮೀನಿವಾಸ'ದ ಮನೆ ಯಜಮಾನರು ಕೋಲ್ಕತ್ತಾದ ಬಾಗ್‌ಬಜಾರಿನ ದತ್ತ ಮನೆತನದವರು. ಅವರು ಶ್ರೀಮಾತೆಯವರ ಭಕ್ತರಾಗಿದ್ದರು. ಆ ಸಮಯದಲ್ಲಿ ಕಾಶೀಧಾಮದಲ್ಲಿ ಸ್ವಾಮಿ ಬ್ರಹ್ಮಾನಂದಜಿ, ಸ್ವಾಮಿ ತುರೀಯಾನಂದಜಿ, ಸ್ವಾಮಿ ಶಿವಾನಂದಜಿಯವರೆಲ್ಲ ನೆಲೆಸಿದ್ದರು. ಶ್ರೀಮಾತೆಯವರ ಜೊತೆಗೆ ಮಹೇಂದ್ರನಾಥ ಗುಪ್ತ (ಶ್ರೀರಾಮಕೃಷ್ಣ ವಚನವೇದದ ಕರ್ತೃ) ಕೂಡ ಇದ್ದರು. ೧೯೧೨ರ ನವೆಂಬರ್ ಎಂಟನೇ ತಾರೀಖು ಶ್ರೀಮಾತೆಯವರು ಸೇವಾಶ್ರಮ ನೋಡಲು ಬಂದರು. ಸ್ವಾಮಿ ಅಚಲಾನಂದರು ಶ್ರೀಮಾತೆಯವರಿಗೆ ಸೇವಾಶ್ರಮದ ಹುಟ್ಟು ಮತ್ತು ಅಲ್ಲಿಯತನಕ ಆದ ಬೆಳವಣಿಗೆಯ ಬಗ್ಗೆ ವಿವರವಾಗಿ ಹೇಳಿದರು. ಶ್ರೀಮಾತೆ ಯವರು ಪ್ರತಿಯೊಂದು ವಾರ್ಡಿಗೂ, ಇತರ ಕೊಠಡಿಗಳಿಗೂ ಭೇಟಿಕೊಟ್ಟರು. ರೋಗಿಗಳನ್ನು ಮಾತನಾಡಿಸಿದರು. ಶ್ರೀಮಾತೆಯವರ ಜೊತೆ ಶಿವಾನಂದಜಿ, ಬ್ರಹ್ಮಾನಂದಜಿ, ತುರೀಯಾ ನಂದಜಿ, ಚಾರುಬಾಬು(ಶುಭಾನಂದ), ಮಹೇಂದ್ರ

ಸೇವಾಶ್ರಮದ ಒಂದು ನೋಟ



ನಾಥಗುಪ್ತ, ಡಾಕ್ಟರ್ ಕಾಂಜಿಲಾಲ್ ಇವರುಗಳೆಲ್ಲ ಶ್ರೀಮಾತೆಯವರ ಜೊತೆ ಆಸ್ಪತ್ರೆಯನ್ನು ದರ್ಶಿಸಿದರು. ಯುವಕರ ಕೆಲಸವನ್ನು ನೋಡಿ ಬಹಳ ಪ್ರಶಂಸೆ ಮಾಡಿದರು. ಶ್ರೀಮಾತೆ ಹೇಳಿದರು, ''ಇಲ್ಲಿ ಶ್ರೀಗುರುಮಹಾರಾಜರು ಸ್ವತಃ ವಿರಾಜಮಾನರಾಗಿದ್ದಾರೆ. ಭಾಗ್ಯಲಕ್ಷ್ಮಿಯ ಸಂಪೂರ್ಣ ಕೃಪಾಕಟಾಕ್ಷ ಈ ಸೇವಾಶ್ರಮಕ್ಕಿದೆ.'' ಅನಂತರ ಶ್ರೀಮಾತೆಯವರು ಹತ್ತು ರೂಪಾಯಿಯನ್ನು ಕಾಣಿಕೆ ರೂಪವಾಗಿ ಸೇವಾಶ್ರಮಕ್ಕೆ ಕೊಟ್ಟರು. ಆ ಹತ್ತು ರೂಪಾಯಿಯನ್ನು ಶ್ರೀಮಾತೆಯವರ ಜ್ಞಾಪಕಾರ್ಥವಾಗಿ ಈಗಲೂ ಸೇವಾಶ್ರಮದ ಕಾರ್ಯಾಲಯದಲ್ಲಿ ಜತನ ಮಾಡಿ ಕಾಪಿಡಲಾಗಿದೆ. ಭಕ್ತಾದಿಗಳು ಈಗಲೂ ಅದನ್ನು ನೋಡಬಹುದು.

ಅದೊಂದು ದಿನ ಬೆಳ್ಳಂಬೆಳಗ್ಗೆ ಏಳುಗಂಟೆಗೆ ಸೇವಾಶ್ರಮಕ್ಕೆ ಒಬ್ಬ ವಿಶೇಷ ಅತಿಥಿ ಬಂದರು. ಯಾರಿಗೂ ಅವರು ಬರುತ್ತಾರೆಂಬ ಸೂಚನೆ ಕೂಡ ಇರಲಿಲ್ಲ; ಅವರೆ ವಾರಣಾಸಿಯ ಜಿಲ್ಲಾಧಿಕಾರಿ ಶ್ರೀಯುತ ಸ್ಟ್ರೀಟ್‌ಫೀಲ್ಡ್ ಮಹಾಶಯ! ಅವರು ಸಾಧುಗಳು ಮಾಡುವ ಸೇವಾಕಾರ್ಯವನ್ನು ನೋಡಲು ಬಂದಿದ್ದರು. ಸಾಧುಗಳು ಅವರೊಂದಿಗೆ ಹೋಗಿ ಸೇವಾಶ್ರಮದ ವಿವಿಧ ಸೇವೆಗಳ ಬಗ್ಗೆ ವಿವರಿಸಿದರು. ಸೇವಾಶ್ರಮದ ಎದುರು ಹಲವು ಮನೆಗಳಿದ್ದವು. ಸೇವಾಶ್ರಮದ ಆಸ್ಪತ್ರೆಗೆ ಹೆಚ್ಚಿನ ಸ್ಥಳಾವಣೆ ಬೇಕಿತ್ತು. ಸಾಧುಗಳು ಎಷ್ಟೇ ಬೇಡಿಕೊಂಡರೂ ಯಾರೂ ಅವರವರ ಜಾಗ ಬಿಡಲು ತಯಾರಿರಲಿಲ್ಲ. ಹಾಗಾಗಿ ಕೆಲಸ ನೆನೆಗುದಿಯಲ್ಲಿತ್ತು. ಶ್ರೀಯುತ ಸ್ಟ್ರೀಟ್‌ಫೀಲ್ಡರ ಹತ್ತಿರ ಆ ವಿಚಾರ ನಿವೇದಿಸಿದಾಗ ಅವರು ಹೇಳಿದರು, ''ಈ ಸೇವೆಯು ಸಾರ್ವಜನಿಕರಿಗಾಗಿ, ಕಾಶಿಗೆ ಬಂದ ಯಾತ್ರಾರ್ಥಿಗಳಿಗಾಗಿ. ಸಾರ್ವಜನಿಕ ಹಿತಾಸಕ್ತಿಗಾಗಿ ಒಂದು ಮನವಿಯನ್ನು ನನಗೆ ಕೊಡಿ. ಜಿಲ್ಲಾಧಿಕಾರಿಯಾಗಿ, ಜಾಗ ಖರೀದಿಸಲು ನಾನು ಸಹಾಯ ಮಾಡುತ್ತೇನೆ'' ಎಂದರು. ೧೯೧೪ರಲ್ಲಿ ಸುಮಾರು ಏಳು ಎಕರೆ ಜಾಗವನ್ನು ಖರೀದಿಸಿದರು. ೧೯೧೫ರ ಪ್ರಾರಂಭದಲ್ಲಿ ಹೊಸ ಕಟ್ಟಡಕ್ಕೆ ಸ್ವಾಮಿ ಶಿವಾನಂದಜಿ ಮತ್ತು ಪ್ರೇಮಾನಂದಜಿಯವರು ಶಂಕುಸ್ಥಾಪನೆ ಮಾಡಿದರು. ೧೯೧೭ರಲ್ಲಿ ಹೊಸಕಟ್ಟಡದ ಕೆಲವಾರು ಕೊಠಡಿಗಳು ತಯಾರಾದವು. ಸ್ವಾಮಿ ಶಿವಾನಂದಜಿ ಮತ್ತು ಸ್ವಾಮಿ ಪ್ರೇಮಾನಂದಜಿಯವರು ಕಟ್ಟಡದ ಉದ್ಘಾಟನೆ ಮತ್ತು ಪೂಜೆ ಮಾಡಿದರು. ನಾಲ್ಕು ಆಣೆಗಳಿಂದ ಪ್ರಾರಂಭವಾದ ಈ ಸಂಸ್ಥೆ ಹದಿನಾರು ವರ್ಷಗಳಲ್ಲಿ ಇಷ್ಟೊಂದು ಬೃಹತ್ತಾಗಿ ಬೆಳೆದಿದ್ದನ್ನು ನೋಡಿ ಯಾಮಿನೀರಂಜನ ಮತ್ತು ಚಾರುಚಂದ್ರರು ಆನಂದದಿಂದ ಪುಳಕಿತರಾದರು.

ಸ್ವಾಮಿ ತುರೀಯಾನಂದಜಿಯವರು ತಮ್ಮ ಜೀವಿತದ ಕೊನೆಯ ಮೂರುವರೆ ವರ್ಷಗಳನ್ನು ಕಾಶೀ ಸೇವಾಶ್ರಮದಲ್ಲಿ ಕಳೆದಿದ್ದರು. ಅವರು ಕಾಶೀಧಾಮದಲ್ಲಿದ್ದಾಗ ಸಾಧು-ಬ್ರಹ್ಮಚಾರಿಗಳಿಗೆ ವೇದಾಂತ ತರಗತಿಗಳನ್ನು ನಡೆಸುತ್ತಿದ್ದರು. ಸೇವಾಕಾರ್ಯಗಳಲ್ಲಿ ನ್ಯೂನತೆ ಕಂಡರೆ ಅದನ್ನು ತಿದ್ದಿ ಸರಿಪಡಿಸುತ್ತಿದ್ದರು. ರುಗ್ಣ ಶಯ್ಯೆಯಲ್ಲಿ ಮಲಗಿದ್ದಾಗಲೂ ಸಾಧುಗಳಿಗೆ ವೇದಾಂತ ಶಾಸ್ತ್ರಗಳ ಬಗ್ಗೆ ವಿವರಿಸುತ್ತಿದ್ದರು. ಸ್ವಾಮಿ ತುರೀಯಾನಂದರಿಗೆ ಸ್ವಾಮೀಜಿ ಹೇಳಿದ ಮಾತುಗಳನ್ನು ಸಾಧು-ಬ್ರಹ್ಮಚಾರಿಗೆ ಹೇಳಿದರು. ''ನೋಡು ಹರಿ, ಈ ಯುಗದಲ್ಲಿ ಸಾಕ್ಷಾತ್ಕಾರಕ್ಕಾಗಿ ನಾನು ಹೊಸ ಮಾರ್ಗವನ್ನು ಕಂಡು ಹುಡುಕಿದ್ದೇನೆ. ಹಿಂದಿನ ಕಾಲದಲ್ಲಿ ಧ್ಯಾನ, ಏಕಾಗ್ರತೆ, ಜಪ, ತಪಸ್ಸುಗಳಿಂದ ಮಾತ್ರ ಸಾಕ್ಷಾತ್ಕಾರವಾಗುತ್ತದೆ ಎನ್ನುತ್ತಿದ್ದರು. ಆದರೆ ಯುವಕರು ನಿಸ್ವಾರ್ಥ ಕರ್ಮಯೋಗವನ್ನು ಮಾಡಿದರೆ ಸಾಕ್ಷಾತ್ಕಾರ ಹೊಂದುತ್ತಾರೆಂದು ನಾನು ಹೇಳುತ್ತೇನೆ.'' ಒಂದು ಸಲ ಆಸ್ಪತ್ರೆಯ ಸೇವಾಕಾರ್ಯಗಳಿಗೆ ಸ್ವಯಂಸೇವಕರ ಅಭಾವವಾಯಿತು. ಒಬ್ಬರು ಸಲಹೆ ಕೊಟ್ಟರು. ಒಬ್ಬ ಡಾಕ್ಟರ್ ಮತ್ತು ಒಬ್ಬ ಕಾರಕೂನನನ್ನು ನೇಮಿಸಬೇಕೆಂದರು. ಸ್ವಾಮಿ ತುರೀಯಾನಂದಜಿ ಹೇಳಿದರು ''ಸಂಬಳ ತೆಗೆದುಕೊಳ್ಳುವವ, ಪ್ರೀತಿ, ವಿಶ್ವಾಸ, ಸಹೃದಯತೆ, ಸೇವೆ – ಈ ಮನೋಭಾವದಿಂದ ಕೆಲಸ ಮಾಡಬಲ್ಲನೆ? ಬದಲಿಗೆ ಕೆಲಸಗಳನ್ನು ಕಡಿಮೆ ಮಾಡಿ ಅಥವಾ ಅಂತಹ ವಿಭಾಗಗಳನ್ನು ಮುಚ್ಚಿಬಿಡಿ'' ಎಂದರು.

ಇಷ್ಟು ಎಲ್ಲ ಆಸ್ಪತ್ರೆ ಬೆಳೆದರೂ ಕೂಡ ಚಾರುಚಂದ್ರನಿಗೆ ಒಂದು ಚಿಂತೆ ಇತ್ತು. ಯುವ ಮಹಿಳೆಯರಿಗೆ ಚಿಕಿತ್ಸೆ ಕೊಡಿಸಲು, ಶುಶ್ರೂಷೆ ಮಾಡಲು ಕೆಲಸವು ಮಹಿಳಾ ನರ್ಸ್‌ಗಳ ಅಗತ್ಯವಿತ್ತು. ವೃದ್ಧ ಮಹಿಳೆಯರಿಗೆ ಸೇವಕರೇ ಸೇವೆ ಮಾಡುತ್ತಿದ್ದರು. ಆಗಿನ್ನೂ ದೇಶದಲ್ಲಿ ಮಹಿಳೆಯರು ದಾದಿ ಕೆಲಸ ಮಾಡಲು ತಯಾರಾಗಿರಲಿಲ್ಲ. ಈ ಶಿಕ್ಷಣವನ್ನು ಕೊಡಲು ಯೋಗ್ಯರು ಸಿಗುತ್ತಿರಲಿಲ್ಲ. ಹಾಗಾಗಿ ಯುವ ಮಹಿಳೆಯರಿಗೆ ಚಿಕಿತ್ಸೆ ಸರಿಯಾಗಿ ಸಿಗುತ್ತಿರಲಿಲ್ಲ.

ಕೋಲ್ಕತ್ತಾದಲ್ಲಿ ಸೋದರಿ ನಿವೇದಿತಾರವರು ಹೆಣ್ಣು ಮಕ್ಕಳಿಗಾಗಿ ಒಂದು ಶಾಲೆಯನ್ನು ತೆರೆದಿದ್ದರು. ೧೯೧೭ರಲ್ಲಿ ಆ ಶಾಲೆಯಲ್ಲಿ ಮುಖ್ಯೋಪಾಧ್ಯಾಯಿನಿಯಾಗಿದ್ದ ಶ್ರೀಮತಿ ಸುಧೀರಾ ದೇವಿ, ಮಹಿಳಾ ಒಳ ರೋಗಿಗಳ ಸೇವೆಗಾಗಿ ಕೆಲವು ಯುವತಿಯರಿಗೆ ತಾನು ತರಬೇತಿ ಕೊಟ್ಟು ತಯಾರು ಮಾಡುತ್ತೇನೆಂದು ಚಾರುಚಂದ್ರನಿಗೆ ಒಂದು ಪತ್ರ ಬರೆದು ತಿಳಿಸಿದರು. ಸುಧೀರಾ ದೇವಿಯವರು ಕಾಶೀಧಾಮಕ್ಕೆ ಬಂದು ಕೆಲವು ಯುವತಿಯರಿಗೆ ತರಬೇತಿ ಕೊಟ್ಟರು; ೧೯೧೮ರಲ್ಲಿ ಒಂದು ಮಹಿಳಾ ವಿಭಾಗವನ್ನು ಕೂಡ ತೆರೆಯಲಾಯಿತು. ಆದರೆ ವಿಧಿಯ ಆಟವೇ ಬೇರೆ! ಸುಧೀರಾದೇವಿ ರೈಲು ಅಪಘಾತದಲ್ಲಿ ತೀರಿ ಹೋದರು. ಕೆಲವು ತಿಂಗಳಲ್ಲಿ ಈ ವಿಭಾಗ ನಿಂತುಹೋಯಿತು. ಅನಂತರ ಒಬ್ಬಾಕೆ ಸ್ಥಳೀಯ ವಿಧವೆ ಮುಂದೆ ಬಂದು, ಯುವತಿಯರಿಗೆ ತರಬೇತಿ ಕೊಟ್ಟು ಪುನಃ ಈ ವಿಭಾಗ ತೆರೆಯಲಾಯಿತು.

೧೯೨೧ರಲ್ಲಿ ಸೇವಾಶ್ರಮಕ್ಕೆ ಎಲ್ಲಿಂದಲೋ ಗತಿಗೋತ್ರ ವಿಲ್ಲದ ಕೆಲವು ಅನಾಥ ಹುಡುಗರು ಬಂದರು. ಅವರಿಗಾಗಿ ಒಂದು ಅನಾಥಾಶ್ರಮ ಕೂಡ ಪ್ರಾರಂಭವಾಯಿತು. ಇವರಲ್ಲಿ ಕೆಲವು ಹುಡುಗರನ್ನು ಅನಂತರ ದೇವಘರ್ ವಿದ್ಯಾಪೀಠಕ್ಕೆ ಹೆಚ್ಚಿನ ಶಿಕ್ಷಣಕ್ಕಾಗಿ ಕಳುಹಿಸಲಾಯಿತು. ಸುಮಾರು ಐದು ವರ್ಷ ಈ ಅನಾಥಾಶ್ರಮ ನಡೆಯಿತು. ಅನಂತರ ಹುಡುಗರು ಬರದಿದ್ದ ಕಾರಣ ಮುಚ್ಚಲಾಯಿತು. ೧೯೨೩ರಲ್ಲಿ ಪುರುಷ ರಿಗಾಗಿ ಒಂದು ವೃದ್ಧಾಶ್ರಮವನ್ನು ತೆರೆಯಲಾಯಿತು.

ಕೇದಾರ ಬಾಬನಿಗೆ ಸ್ವಾಮೀಜಿಯವರೇ ಸ್ವತಃ ಸಂನ್ಯಾಸ ಕೊಟ್ಟಿದ್ದರು. 'ಸ್ವಾಮಿ ಅಚಲಾನಂದ' ಎಂಬ ಹೆಸರನ್ನು ಕೂಡ ಕೊಟ್ಟಿದ್ದರು. ಅಚಲಾನಂದರಿಗೆ ಅವರ ಗುರುಗಳು ಹೇಳಿದ್ದರು ''ನೀನು ಇನ್ನು ಯಾವ ಸಾಧನೆ ಕೂಡ ಮಾಡುವ ಆವಶ್ಯಕತೆ ಇಲ್ಲ.'' ಕಠಿಣ ತಪಸ್ವಿಯಾಗಿದ್ದ ಸ್ವಾಮಿ ಅಚಲಾನಂದರ ಆರೋಗ್ಯ ಹೇಳುವಷ್ಟು ಚೆನ್ನಾಗಿರಲಿಲ್ಲ. ಸಂಘದ ಉಪಾಧ್ಯಕ್ಷ ರಾಗಿ ಕೂಡ ಅವರು ಹಗಲು ಹೊತ್ತು ಆಸ್ಪತ್ರೆಯಲ್ಲಿ ಸೇವೆ ಮಾಡಿ ರಾತ್ರಿ ಹೊತ್ತು ಹತ್ತಿರದ ಒಂದು ಬೆಟ್ಟಕ್ಕೆ ಹೋಗಿ ಇಡೀ ರಾತ್ರಿ ಸಾಧನಾ ನಿರತರಾಗಿರುತ್ತಿದ್ದರು. ವಾರಕ್ಕೊಂದು ದಿನ ಮೌನವ್ರತ ಪಾಲಿಸುತ್ತಿದ್ದರು. ಅವರು ೧೯೪೭ರ ಮಾರ್ಚ್ ತಿಂಗಳಲ್ಲಿ ತಮ್ಮ ಪಾರ್ಥಿವ ಶರೀರವನ್ನು ತ್ಯಜಿಸಿ ವಿಶ್ವನಾಥನಲ್ಲಿ ಐಕ್ಯವಾದರು.

ಯಾವುದೇ ಅಡೆತಡೆ ಇಲ್ಲದೆ ಆಧ್ಯಾತ್ಮಿಕ ಸಾಧನೆ ಮಾಡಲು ಸಹಸ್ರಾರು ವರ್ಷಗಳಿಂದ ಭಾರತೀಯರು ಆಯ್ದುಕೊಂಡ ಮಾರ್ಗ ಸಂನ್ಯಾಸ ಸ್ವೀಕಾರ. ಕಾವಿಬಟ್ಟೆಯು ಸಂನ್ಯಾಸ ಧರ್ಮ ರಕ್ಷಣೆಗೆ ಬಹಳ ಸಹಕಾರಿ. ಸಮಾಜವು ಕೂಡ ಸಂನ್ಯಾಸಿಗೆ ಕೊಡುವ ಮರ್ಯಾದೆಯನ್ನು ಕೊಟ್ಟು ಸ್ವಲ್ಪ ದೂರವೇ ಇಡು ತ್ತದೆ. ಚಾರುಚಂದ್ರನಿಗೆ ಸ್ವಾಮೀಜಿ ಕಾಶೀಧಾಮದಲ್ಲಿ ಮಂತ್ರ ದೀಕ್ಷೆ ಕೊಟ್ಟಿದ್ದರು. ಆದರೆ ಆತ ಸಂನ್ಯಾಸ ಸ್ವೀಕರಿಸದೆ ನಿಸ್ವಾರ್ಥ ಕರ್ಮಯೋಗದಲ್ಲಿ ತೊಡಗಿಸಿಕೊಂಡಿದ್ದ. ಸೇವಾಶ್ರಮಕ್ಕಾಗಿ ಹಗಲುರಾತ್ರಿ ದುಡಿದ ಕಾರಣ ದೇಹವು ವಯಸ್ಸಾಗುವ ಮೊದಲೇ ಜರ್ಝರಿತವಾಗಿತ್ತು. ಸೇವಾಶ್ರಮದ ಕೆಲಸಕಾರ್ಯ ಗಳಿಂದ ನಿವೃತ್ತಿ ಹೊಂದಿ, ತಪಸ್ಸು ಮಾಡುವ ಉತ್ಕಟ ಇಚ್ಛೆ ಆತನಲ್ಲಿ ಮೂಡಿ ಬಂತು. ಉಳಿದ ಸ್ವಾಮಿಗಳಿಗೆ ಜವಾಬ್ದಾರಿ ವಹಿಸಿ ಪ್ರಯಾಗರಾಜಕ್ಕೆ ಹೋಗಿ, ಸ್ವಲ್ಪ ದಿನ ಸಂಗಮ ತೀರ ದಲ್ಲಿದ್ದ ಋಸಿಮಠ ಎಂಬ ಗುಡ್ಡದಲ್ಲಿ ಉಳಿದುಕೊಂಡನು. ಋಸಿ ಮಠದ ಗುಡ್ಡದಲ್ಲಿ ಈಗಲೂ ಗುಹೆಗಳನ್ನು ನೋಡ ಬಹುದು. ಅಲ್ಲಿಂದ ಹಿಂದಿರುಗಿದ ಮೇಲೆ ೧೯೨೧ರಲ್ಲಿ ಶ್ರೀ ಗುರು ಮಹಾರಾಜರ ಜಯಂತಿಯ ದಿನದಂದು ಸಂನ್ಯಾಸ ಸ್ವೀಕರಿಸಿ 'ಸ್ವಾಮಿ ಶುಭಾನಂದ'ರಾದರು. ಸಂನ್ಯಾಸ ಸ್ವೀಕರಿಸಿದ ಮೇಲೆ ಸ್ವಾಮಿ ಶುಭಾನಂದರು ಸ್ವಲ್ಪ ಸಮಯ ಪರಿವ್ರಾಜಕ ಜೀವನ ಮಾಡಿ ಹರಿದ್ವಾರದಲ್ಲಿದ್ದರು. ಏಪ್ರಿಲ್ ೧೯೨೬ರಲ್ಲಿ ಹರಿದ್ವಾರದ ಗಂಗಾತೀರದಲ್ಲಿ ಸ್ವಾಮಿ ಶುಭಾನಂದರು ಈ ಮರ್ತ್ಯ ಶರೀರವನ್ನು ತ್ಯಜಿಸಿದರು. ಗಂಧದ ಕೊರಡು ತಾನು ಸ್ವತಃ ಅರೆದುಕೊಂಡು ಇತರರಿಗೆ ಪರಿಮಳವನ್ನು ಕೊಡುತ್ತದೆ!

ಹಿಂದಿನ ಪುಟಗಳಲ್ಲಿ ತಿಳಿಸಿದಂತೆ, ಸ್ವಾಮೀಜಿಗೆ ಸೇವಾ ಶ್ರಮದ ಜೊತೆಗೆ ಸಾಧುಗಳಿಗೆ ಪೂಜೆ, ಜಪಧ್ಯಾನ, ಅಧ್ಯಯನ ಮಾಡಲು ಗುರುಮಹಾರಾಜರ ಒಂದು ಆಶ್ರಮವಿರಬೇಕೆಂದು ಇಚ್ಛೆ ಇತ್ತು. ಬಿಂಗ ದೇಶದ ರಾಜನು ದುರ್ಗಾಕುಂಡದ ಹತ್ತಿರ ಸಂನ್ಯಾಸಿಯಾಗಿ ವಾಸಮಾಡುತ್ತಿದ್ದ. ಸ್ವಾಮೀಜಿ ಎರಡನೇ ಸಲ ಕಾಶಿಗೆ ಬಂದಿದ್ದಾಗ, ಉದಯಪ್ರತಾಪ ಸಿಂಗ ರಾಜನಿಗೆ ಅವ ರನ್ನು ನೋಡಬೇಕೆಂಬ ಪ್ರಬಲವಾದ ಇಚ್ಛೆ ಮೂಡಿತ್ತು. ಸ್ವಾಮೀಜಿಯವರ ಪ್ರವಚನಗಳಿಂದ ಆತ ವಿಶೇಷವಾಗಿ ಪ್ರಭಾ ವಿತನಾಗಿದ್ದ. ಆದರೆ ಆತ ಅವನ ಮನೆಯಿಂದ ಹೊರಗೆ ಹೋಗುವುದಿಲ್ಲ ಎಂಬ ಸಂಕಲ್ಪದಿಂದ ಬಂಧಿತನಾಗಿದ್ದ. ಆ ರಾಜನು ತನ್ನ ಸ್ನೇಹಿತ ಸ್ವಾಮಿ ಗೋವಿಂದಾನಂದಜಿಯ ಮೂಲಕ ತನ್ನ ಇಚ್ಛೆಯನ್ನು ವ್ಯಕ್ತಪಡಿಸಿದಾಗ, ಕರುಣಾಳು ಸ್ವಾಮಿ ವಿವೇಕಾನಂದರು ತಾನೇ ಸ್ವತಃ ರಾಜಾ ಉದಯ ಪ್ರತಾಪ ಸಿಂಗನನ್ನು ನೋಡಲು ತೆರಳಿದರು. ಈ ಸಂಧರ್ಭದಲ್ಲಿ ರಾಜನು ಸ್ವಾಮೀಜಿಯವರೊಡನೆ, ಬಹಳ ದೀರ್ಘವಾಗಿ ಸಮಾಲೋಚನೆ ಮಾಡಿದ್ದ. ಸ್ವಾಮೀಜಿಯವರಿಂದ ಪ್ರಭಾವಿತನಾದ ಅವನು, ಕಾಶಿಯಲ್ಲಿ ಕೂಡ ಒಂದು ವೇದಾಂತ ಪ್ರಚಾರಕ್ಕಾಗಿ ಒಂದು ಆಶ್ರಮವನ್ನು ತೆರೆಯಿರಿ ಎಂದು ಸ್ವಾಮೀಜಿಯವರಿಗೆ ಐನೂರು ರೂಪಾಯಿಗಳನ್ನು ಕೊಟ್ಟ. ಸ್ವಾಮೀಜಿಯವರು ಬೇಲೂರು ಮಠಕ್ಕೆ ಹೋಗಿ, ಸ್ವಾಮಿ ಶಿವಾನಂದರ ಕೈಗೆ ಹಣ ಕೊಟ್ಟು, ''ನೀನು ಕಾಶೀಧಾಮಕ್ಕೆ ಹೋಗಿ ಒಂದು ಆಶ್ರಮ ತೆರೆ'' ಎಂದು ಹೇಳಿ ಕಳುಹಿಸಿಕೊಟ್ಟರು. ಸ್ವಾಮಿ ಶಿವಾನಂದಜಿಯವರು ಜೂನ್ ೧೯೦೨ರ ೨೩ರಲ್ಲಿ - ಬುದ್ಧ ಪೂರ್ಣಿಮೆಯಂದು ಕಾಶೀ ಧಾಮಕ್ಕೆ ಬಂದರು. ಆವಾಗಲೇ ಸೇವಾಶ್ರಮ ಪ್ರಾರಂಭ ವಾಗಿತ್ತು. ಆಶ್ರಮಕ್ಕಾಗಿ ಸ್ಥಳ ಹುಡುಕುವಾಗ ಲಕ್ಸಾ ರಸ್ತೆಯಲ್ಲಿ ಒಂದು ತೋಟದ ಮನೆಯಲ್ಲಿ ಸ್ಥಳ ಸಿಕ್ಕಿತು. ಈ ತೋಟದ ಹೆಸರು 'ಖಜಾಂಚಿ ಬಗೀಚಾ' (ಖಜಾಂಚಿಗಳ ತೋಟ). ಅಲ್ಲಿ ತಿಂಗಳಿಗೆ ಹತ್ತು ರೂಪಾಯಿ ಬಾಡಿಗೆಗೆ ಮನೆಯನ್ನು ಗೊತ್ತು ಪಡಿಸಿದರು. ೧೯೦೨ರ ಜುಲೈ ೪ರಂದು ಸ್ವಾಮಿ ಶಿವಾನಂದಜಿ, ಧೀರಾನಂದ, ಅಚಲಾನಂದ (ಕೇದಾರ ಬಾಬು) ಇವರುಗಳು ಈ ಹೊಸ ಆಶ್ರಮಕ್ಕೆ ಬಂದರು. ಸ್ವಾಮಿ ಶಿವಾನಂದಜಿ ಅಂದಿನ ದಿನದಲ್ಲಿ ಒಂದು ಅವ್ಯಕ್ತವಾದ ದುಃಖವನ್ನು ಮನಸ್ಸಿನೊಳಗೆ ಅನುಭವಿಸುತ್ತಿದ್ದರು. ಇದರ ಮರುದಿನ ಬೇಲೂರು ಮಠದಿಂದ ತಂತಿ ಬಂತು: ವೀರೇಶ್ವರನ ಅಂಶದಿಂದ ಅವತರಣ ಮಾಡಿದ್ದ ಸ್ವಾಮಿ ವಿವೇಕಾನಂದರ ಮಹಾಸಮಾಧಿ ಹೊಂದಿದ್ದರು.

(ಮುಂದುವರಿಯುವುದು)

ಚೋರನಿಗೆ ಒಲಿದ ಶ್ರೀಕೃಷ್ಣ



ಒಬ್ಬ ಧನಿಕನ ಮನೆಯಲ್ಲಿ ಶ್ರೀಮದ್ ಭಾಗವತದ ಪ್ರವಚನ ನಡೆಯುತ್ತಿತ್ತು. ಆಗ ಒಬ್ಬ ಕಳ್ಳ ಆ ಧನಿಕನ ಮನೆಗೆ ನುಗ್ಗಿದ. ಒಂದು ಮೂಲೆಯಲ್ಲಿ ಅಡಗಿ ಕುಳಿತು, ಭಾಗವತದ ಕಥೆ ಕೇಳತೊಡಗಿದ. ಪ್ರವಚನಕಾರರು, ತಾಯಿ ಯಶೋದೆ ಪುಟ್ಟ ಕೃಷ್ಣನಿಗೆ ಆಭರಣಗಳನ್ನು ತೊಡಿಸಿ, ಗೋವುಗಳೊಂದಿಗೆ ಕಳುಹಿಸುತ್ತಿದ್ದ ವಿಷಯವನ್ನು ವರ್ಣಿಸುತ್ತಿದ್ದರು.

ಕಳ್ಳ ಆ ವರ್ಣನೆಗಳನ್ನೆಲ್ಲ ಕೇಳುತ್ತಿದ್ದ. 'ಹೇಗಾದರೂ ಆ ಹುಡುಗನನ್ನು ಹುಡುಕಬೇಕು. ಅವನ ಆಭರಣಗಳನ್ನೆಲ್ಲಾ ಕದಿಯಬೇಕು. ಆಗ ಪ್ರತಿನಿತ್ಯ ಕಳ್ಳತನ ಮಾಡುವ ಕಷ್ಟ ತಪ್ಪುತ್ತದೆ' ಎಂದು ಯೋಚಿಸಿದ. ಭಾಗವತದ ಪ್ರವಚನ ಮುಗಿಯುವವರೆಗೂ ಅಲ್ಲಿಯೇ ಇದ್ದು, ಅನಂತರ ಅಲ್ಲಿಂದ ತೆರಳಿದ. ಪ್ರವಚನಾಕರರೂ ಮನೆಯತ್ತ ಹೊರಟರು. ಕಳ್ಳ ಅವರನ್ನು ಹಿಂಬಾಲಿಸಿದ. ಕಳ್ಳನನ್ನು ಕಂಡ ಅವರಿಗೆ, ಪ್ರವಚನದಲ್ಲಿ ದೊರೆತ ಅಲ್ಪ ದಕ್ಷಿಣೆಯನ್ನೂ ಕಳೆದುಕೊಳ್ಳುವ ಭಯ ಉಂಟಾಯಿತು. ಆತನನ್ನು ನೋಡುತ್ತ, ''ನನ್ನಲ್ಲಿ ಏನೂ ಇಲ್ಲ'' ಎಂದು ಬಡಬಡಿಸಿದರು. ಆಗ ಕಳ್ಳ – ''ಸ್ವಾಮಿ! ನನಗದೆಲ್ಲ ಏನೂ ಬೇಡ. ನೀವು ವರ್ಣಿಸಿದ ಆ ಬಾಲಕೃಷ್ಣ ಎಲ್ಲಿ ಸಿಗುತ್ತಾನೆ? ಆ ಸ್ಥಳ ತಿಳಿಸಿ. ನಾನು ಅಲ್ಲಿಗೆ ಹೋಗಬೇಕು'' ಎಂದ.

ಆಗ ಅವರು – ''ವೃಂದಾವನದಲ್ಲಿ ಯಮುನಾ ನದಿಯ ದಡದಲ್ಲಿ ಇಬ್ಬರು ಬಾಲಕರು, ಗೋವುಗಳನ್ನು ಮೇಯಿಸುತ್ತಿರುತ್ತಾರೆ. ಒಬ್ಬ ಬೆಳ್ಳಗಿದ್ದಾನೆ, ಮತ್ತೊಬ್ಬ ಕಪ್ಪಗಿದ್ದಾನೆ. ಕಪ್ಪು ಹುಡುಗನ ಕೈಯಲ್ಲಿ ಒಂದು ಕೊಳಲು ಹಾಗೂ ತಲೆಯ ಮೇಲೊಂದು ನವಿಲುಗರಿ ಇದೆ. ಅವನೇ ಶ್ರೀಕೃಷ್ಣ'' ಎಂದರು. ಅವರ ಮಾತನ್ನು ನಂಬಿದ ಕಳ್ಳ , ಕೂಡಲೇ ವೃಂದಾವನದ ಕಡೆಗೆ ತೆರಳಿದ. ಅವರು ಹೇಳಿದ ಆ ಸ್ಥಳವನ್ನು ಹುಡುಕಿದ. ಅಲ್ಲಿಯೇ ಇದ್ದ ಮರ ಹತ್ತಿ ಕುಳಿತು ಹುಡುಗರಿಗಾಗಿ ರಾತ್ರಿಯೆಲ್ಲ ಕಾದು ಕುಳಿತ. ಮಾರನೇ ದಿನ ಸೂರ್ಯ ಉದಯಿಸಿದ. ಕೊಳಲಿನ ನಾದ ಕೇಳಿಸತೊಡಗಿತು. ಕಳ್ಳ , ಸ್ವಲ್ಪ ದೂರದಲ್ಲೇ ಅಮೂಲ್ಯವಾದ ಆಭರಣಗಳನ್ನು ಧರಿಸಿದ ಇಬ್ಬರು ಹುಡುಗರು ಬರುತ್ತಿರುವುದನ್ನು ನೋಡಿದ. ಮರದಿಂದ ಕೆಳಗಿಳಿದು, ಆ ಹುಡುಗರ ಬಳಿಗೆ ಹೋದ. ಬಾಲಕೃಷ್ಣನನ್ನು ಕಂಡು, ಮೈಮರೆತ. ತನಗೇ ಗೊತ್ತಿಲ್ಲದೇ ಕೈಗಳನ್ನೆತ್ತಿ ನಮಿಸಿದ. ಕಣ್ಣುಗಳಲ್ಲಿ ಆನಂದದ ಕಣ್ಣೀರು ತುಂಬಿತು.

''ನಿಲ್ಲು'' ಎನ್ನುತ್ತಾ ಶ್ರೀಕೃಷ್ಣನ ಕೈಹಿಡಿದು ಕೂಗಿದ. ಬಾಲಕನನ್ನು ಸ್ಪರ್ಶಿಸಿದ ಕೂಡಲೇ, ಅವನ ಎಲ್ಲಾ ಪಾಪಗಳು ನಾಶವಾದವು. ಭಕ್ತಿಪರವಶನಾಗಿ, ''ಯಾರು ನೀನು?'' ಎಂದು ಕೇಳಿದ. ಶ್ರೀಕೃಷ್ಣ, ಕಳ್ಳನನ್ನೇ ನೋಡುತ್ತಾ ''ನಿಮ್ಮನ್ನು ನೋಡುತ್ತಿದ್ದರೆ, ನನಗೆ ಭಯವಾಗುತ್ತಿದೆ. ದಯವಿಟ್ಟು ನನ್ನ ಕೈಬಿಡಿ'' ಎಂದ. ಆಗ ಕಳ್ಳ – ''ನಿನಗೆ ನನ್ನ ಕ್ರೂರ ಮುಖ ನೋಡಿ ಭಯವಾದರೆ, ಮುಖವನ್ನು ಪಕ್ಕಕ್ಕೆ ತಿರುಗಿಸಿಕೊಳ್ಳುತ್ತೇನೆ. ಆದರೆ ನಿನ್ನ ಕೈಬಿಡಲು ಮಾತ್ರ ಹೇಳಬೇಡ'' ಎಂದ. ಆಗ ಕೃಷ್ಣ – ''ನನ್ನ ಕೈಬಿಡು, ನಾನೇ ನನ್ನ ಎಲ್ಲಾ ಆಭರಣಗಳನ್ನು ನಿನಗೆ ಕೊಡುತ್ತೇನೆ'' ಎಂದ. ಕಳ್ಳ – ''ನೀನು ಹೀಗೆ ನಿನ್ನ ಎಲ್ಲಾ ಆಭರಣಗಳನ್ನು ಕೊಟ್ಟರೆ, ನಿನ್ನ ತಾಯಿ ಬಯ್ಯುವುದಿಲ್ಲವೆ?'' ಎಂದ. ಕೃಷ್ಣ ನಗುತ್ತಾ – ''ಇಂಥ ಆಭರಣಗಳು ನನ್ನಲ್ಲಿ ತುಂಬಾ ಇವೆ, ಅದರ ಬಗ್ಗೆ ಚಿಂತೆ ಬೇಡ'' ಎಂದು ಹೇಳಿದ. ಹೀಗೆ ಹೇಳುತ್ತಿದ್ದಂತೆ, ಇಬ್ಬರೂ ಹುಡುಗರೂ ಅಲ್ಲಿಂದ ಮಾಯವಾದರು.

ಕಳ್ಳನ ಕೈಯಲ್ಲಿ ಆಭರಣಗಳಿರುವ ಚೀಲವೊಂದಿತ್ತು. ಕಳ್ಳ ಆ ಚೀಲದೊಡನೆ ಪ್ರವಚನಕಾರರ ಮನೆಗೆ ಬಂದ. ನಡೆದುದೆಲ್ಲವನ್ನೂ ವಿವರಿಸಿ ಹೇಳಿದ. ಅವರು ಆಶ್ಚರ್ಯದಿಂದ ಚೀಲವನ್ನು ಬಿಚ್ಚಿ ನೋಡಿದರು. ತಾನು ವರ್ಣಿಸಿದ್ದ ಆಭರಣಗಳು ಆ ಚೀಲದಲ್ಲಿದ್ದವು. ಅವುಗಳನ್ನು ನೋಡಿ ಆನಂದಬಾಷ್ಪಭರಿತರಾದರು. ಕಳ್ಳನನ್ನು ಕುರಿತು, ''ನನ್ನನ್ನೂ ಆ ಕಪ್ಪುಹುಡುಗನನ್ನು ನೋಡಿದ ಸ್ಥಳಕ್ಕೆ ಕರೆದುಕೊಂಡು ಹೋಗು'' ಎಂದರು. ಕಳ್ಳನೂ ಸಮ್ಮತಿಸಿ, ವೃಂದಾವನಕ್ಕೆ ಕರೆದೊಯ್ದು, ''ಇದೇ ಆ ಸ್ಥಳ'' ಎಂದು ತೋರಿಸಿದ. ಪ್ರವಚನಕಾರರಿಗೆ ಆ ಜಾಗದಲ್ಲಿ ಏನೂ ಕಾಣಲಿಲ್ಲ , ಯಾರೂ ಕಾಣಲಿಲ್ಲ. ಆಗ ಅವರು, ''ಹೇ ದೇವ! ಕಳ್ಳನಿಗೆ ಕಂಡವ, ನನಗೆ ಕಾಣಿಸಲಾರೆಯಾ?'' ಎಂದರು. ಆಗ ಒಂದು ಧ್ವನಿ ಕೇಳಿಸಿತು – **''ನೀನು ಭಾಗವತದ ಕಥೆಯನ್ನು, ಇತರ ಕಥೆಗಳಂತೆಯೇ ಓದಿ ಪ್ರವಚನ ಮಾಡುತ್ತಿದ್ದೆ. ಆದರೆ ಈ ಕಳ್ಳನಾದರೋ ಆ ಕಥೆಯನ್ನೆಲ್ಲ ಕೇಳಿ, ನಂಬಿ ನಡೆದ. ಅದನ್ನು ಒಪ್ಪಿಕೊಂಡು, ನನ್ನನ್ನು ನೋಡಲು ಬಂದ. ನನ್ನನ್ನು ನಂಬಿದವರಿಗೆ ನಾನು ಖಂಡಿತ ಕಾಣಿಸುವೆ. ನಂಬಿ ನಡೆದರೆ ನಿನ್ನೊಳಗೆ ನೆಲೆಸುವೆ. ನನ್ನ ಕಥೆಗಳನ್ನು ಶುಷ್ಕವಾಗಿ ಓದಿ, ಕೇಳಿ ಮರೆತುಬಿಡುವುದು ವ್ಯರ್ಥ ಕಾಲಹರಣ. ನಂಬಿ ನಡೆದಾಗಲೇ ಒಳಗಣ್ಣಿಂದ ನನ್ನನ್ನು ಕಾಣುವ ಭಾಗ್ಯ ಎಲ್ಲರಿಗೂ ಲಭಿಸುತ್ತದೆ.''** ದಿವ್ಯವಾದ ಧ್ವನಿಯನ್ನು ಕೇಳಿಸಿಕೊಂಡ ಅವರು, '**ಶ್ರೀಕೃಷ್ಣನನ್ನು ಕಂಡ ಕಳ್ಳನೇ ನನಗಿಂತ ಶ್ರೇಷ್ಠ**' ಎಂದು ನೀನು ಭಾವಿಸಿದರು.

ಡಾ.ವಾಗೀಶ್ವರೀ ಶಿವರಾಮ ಅವರ '೧೦೮ ವಿವೇಕದೀಪಿನೀ – ಕಥಾಮಾಲಾ' ಪುಸ್ತಕದಿಂದ

ಅಮೆರಿಕದಲ್ಲಿ ಸ್ವಾಮಿ ವಿವೇಕಾನಂದರು

ಆಂಗ್ಲ ಮೂಲ : **ಮೇರಿ ಲೂಯಿ ಬರ್ಕ್**

ಸಂಗ್ರಹಾನುವಾದ : **ಸ್ವಾಮಿ ವೀರೇಶಾನಂದ**

ಭಾಗ ೨೯

ವೀರಯೋಧನ ಪುನರಾಗಮನ – ೨

ಸ್ವಾಮಿ ವಿವೇಕಾನಂದರು ಡೆಟ್ರಾಯ್ಟ್ ನಗರಕ್ಕೆ ಮತ್ತೆ ಆಗ ಮಿಸಿದ್ದಾರೆ. ತಮ್ಮ ಮೊದಲ ಭಾಷಣದಲ್ಲಿಯೇ ಟೀಕಾಕಾರರ ಬಾಯನ್ನು ಮುಚ್ಚಿಸಿದ್ದಾರೆ. ಅವರ ಸಮರ್ಥಕರ ಮನಸ್ಸಿನಲ್ಲಿ ಸಂತೋಷದ ಅಲೆಗಳನ್ನು ಎಬ್ಬಿಸಿದ್ದಾರೆ. ಅವರ ಪ್ರಬಲ ಅನು ಯಾಯಿಗಳಲ್ಲಿ ಆಗರ್ಭ ಶ್ರೀಮಂತನಾಗಿದ್ದ ಥಾಮಸ್ ವಿಥೆರೆಲ್ ಪಾಮರ್ ಎಂಬುವವನು ಮುಖ್ಯನಾದವನು. ಆತನ ಬಂಗಲೆ ಯಲ್ಲಿ ಸ್ವಾಮೀಜಿ ಸ್ವಲ್ಪಕಾಲ ಉಳಿದುಕೊಂಡಿದ್ದರು. ಆತ ಬಹು ದೊಡ್ಡ ಉದ್ಯಮಶಾಲಿ. ಅಷ್ಟೇ ಅಲ್ಲ , ರಾಜಕೀಯದಲ್ಲಿ ಆಸಕ್ತಿ ಹೊಂದಿರುವವನು. ಅವನು ರಾಷ್ಟ್ರೀಯ ಸಭೆಯ ಸದಸ್ಯನಾಗಿ ದ್ದನು. ಆಗ ಮಹಿಳೆಯರ ವಿಮೋಚನೆಗಾಗಿ ಬಹಳಷ್ಟು ಪ್ರಯಾಸ ಪಟ್ಟನು. ಇದಲ್ಲದೆ, ಖಾಸಗಿ ಉದ್ಯಮಿಗಳ ಕಪಿಮುಷ್ಟಿಯಲ್ಲಿದ್ದ ರೈಲು ಮಾರ್ಗಗಳನ್ನು ಮುಕ್ತಗೊಳಿಸಿ, ರಾಷ್ಟ್ರೀಕರಣ ಮಾಡಲು ಹೋರಾಡಿದನು. 'ಎಲ್ಲರಿಗೂ ಸಮಾನವಾದ ಹಕ್ಕುಗಳಿರಬೇಕು; ಯಾರಿಗೂ ವಿಶೇಷ ಸವಲತ್ತುಗಳು ಇರಕೂಡದು' ಎಂಬ ಕನ ಸನ್ನು ಕಂಡು, ಅದಕ್ಕೆ ಹಾತೊರೆದವನು ಅವನು. ನಂತರ ಅವ ನನ್ನು ಸ್ಪೈನ್ ದೇಶದ ರಾಯಭಾರಿಯನ್ನಾಗಿ ನಿಯೋಜಿಸ ಲಾಯಿತು. ಅದಕ್ಕೆ ಅವನು ರಾಜಿನಾಮೆ ನೀಡಿದನು. ಆಮೇಲೆ, ಚಿಕಾಗೋದಲ್ಲಿ ನಡೆದ ಜಾಗತಿಕ ಕೊಲಂಬಿಯನ್ ವಸ್ತು ಪ್ರದ ರ್ಶನದ ಮುಖ್ಯ ಆಯುಕ್ತನಾಗಿ ಆಯ್ಕೆಯಾದನು. ಅದರ ಅಂಗವಾಗಿ ನಡೆದ ಸರ್ವಧರ್ಮ ಸಮ್ಮೇಳನದಲ್ಲಿ ಮೊದಲ ಬಾರಿಗೆ ಸ್ವಾಮಿ ವಿವೇಕಾನಂದರನ್ನು ಕಂಡನು; ಅವರ ಪ್ರತಿಭೆ ಯನ್ನು ಗುರುತಿಸಿದನು ಮತ್ತು ಅವರ ಕಟ್ಟಾ ಪ್ರಶಂಸಕನಾದನು.

ಪಾಮರ್‌ನದು ಬಹು ದೊಡ್ಡ ಬಂಗಲೆ. ಅಲ್ಲಿ ಸ್ವಾಮೀಜಿ ಉಳಿದುಕೊಂಡಿದ್ದರು. ಅವನು ಆಡಿಗಡಿಗೆ ಔತಣಕೂಟಗಳನ್ನು ಆಯೋಜಿಸುತ್ತಿದ್ದನು. ಪ್ರತಿಷ್ಠಿತ ಜನರನ್ನು ಆಹ್ವಾನಿಸುತ್ತಿದ್ದನು. ಈ ಔತಣಕೂಟಗಳಲ್ಲಿ ಭಾಗವಹಿಸಲು ಸ್ವಾಮೀಜಿಗೆ ಬಹಳ ಇರಿಸುಮುರಿಸು ಆಗುತ್ತಿತ್ತು. ಆದರೆ ಬೇರೆ ಗತಿಯಿರಲಿಲ್ಲ. ಅಲ್ಲಿ ನೆರೆಯುತ್ತಿದ್ದ ಪಟ್ಟಣದ ಗಣ್ಯವ್ಯಕ್ತಿಗಳನ್ನು ಕುರಿತು ಅವರು ಭಾಷಣ ಮಾಡುತ್ತಿದ್ದರು. ಅವರೊಡನೆ ಸೌಹಾರ್ದವಾಗಿ ಮಾತು ಕತೆ ನಡೆಸುತ್ತಿದ್ದರು. ಆ ಜನರು ಕೂಡ ಸ್ವಾಮೀಜಿಯವರ ವಿದ್ವತ್ತು, ಸಭ್ಯತೆ ಇವುಗಳನ್ನು ಬಹುವಾಗಿ ಮೆಚ್ಚಿಕೊಂಡಿದ್ದರು. ಪ್ರಶಂಸೆಗಳ ಮಳೆಯನ್ನೇ ಸುರಿಸುತ್ತಿದ್ದರು.

ಒಂದು ತಮಾಷೆಯ ವಿಷಯವನ್ನು ಇಲ್ಲಿ ದಾಖಲಿಸಬೇಕು. ಪಾಮರ್‌ನ ಸೌಧದಲ್ಲಿ ಸ್ವಾಮೀಜಿಯವರ ಗೌರವಾರ್ಥ ನಡೆಯು



ತ್ತಿದ್ದ ಔತಣಕೂಟಗಳನ್ನು ಪತ್ರಿಕೆಗಳು ವಿಶೇಷವಾಗಿ ಬಿತ್ತರಿಸು ತ್ತಿದ್ದವು. ಕೆಲವೊಮ್ಮೆ ಕಾಲ್ಪನಿಕ ವರದಿಗಳನ್ನೂ ಪ್ರಕಟಿಸುತ್ತಿದ್ದವು. ಸ್ವಾಮೀಜಿ ಇಂಥ ಒಂದು ವರದಿಯನ್ನು ಹೇಲ್ ಸಹೋದರಿ ಯರಿಗೆ ಬರೆದ ಪತ್ರದಲ್ಲಿ ಉಲ್ಲೇಖಿಸುತ್ತಾರೆ:

''ನಾನು ವೃದ್ಧ ಪಾಮರ್‌ನ ಜೊತೆಯಲ್ಲಿ ಹೇಗೋ ಸರಿ ದೂಗಿಸಿಕೊಂಡು ಹೋಗುತ್ತಿದ್ದೇನೆ. ಅತನು ಬಹಳವೇ ತಮಾ ಷೆಯ ಮನುಷ್ಯ. ಸಾಧುಸ್ವಭಾವದ ಮುದುಕ. ಇಲ್ಲಿ ಬಹಳ ಹಾಸ್ಯಾಸ್ಪದ ಸಂಗತಿಯೊಂದು ನಡೆಯಿತು. ಒಂದು ಪತ್ರಿಕೆ ಹೀಗೆ ವರದಿಮಾಡಿತು: 'ಈ ಬಿರುಗಾಳಿಯ ಹಿಂದೂ ಸಂನ್ಯಾಸಿಯು ಪಾಮರ್ ಅವರ ಅತಿಥಿಯಾಗಿದ್ದಾರೆ. ಪಾಮರ್ ಕೂಡ ಈಗ ಹಿಂದೂಧರ್ಮಕ್ಕೆ ಸೇರಿಬಿಟ್ಟಿದ್ದಾನೆ. ಅದಲ್ಲದೆ ಭಾರತಕ್ಕೆ ಕೂಡ ಹೋಗುವವನಿದ್ದಾನೆ. ಆದರೆ ಅವನು ಎರಡು ಷರತ್ತುಗಳನ್ನು ವಿಧಿಸಿದ್ದಾನೆ. ಜಗನ್ನಾಥನ ರಥವನ್ನು ಅವನ ಗೋಮಾಳದಲ್ಲಿ ಬೆಳೆಸಿದ ಹಸುಗಳಿಂದ ಎಳೆಸಬೇಕು ಎನ್ನುವುದು ಒಂದು. ಜೆರ್ಸಿ

ಹಸುವನ್ನು ಹಿಂದೂ ದೇವತೆಗಳ ಪಟ್ಟಿಯಲ್ಲಿ ಸೇರಿಸಿಕೊಳ್ಳಬೇಕು ಎನ್ನುವುದು ಇನ್ನೊಂದು.' .. ಇದನ್ನು ಓದಿ ನಾನು ಒಂದು ದಿನ ವಿಡೀ ನಗುತ್ತಲಿದ್ದೆ. ನಾಳೆ ಇನ್ನೊಂದು ಔತಣಕೂಟಕ್ಕೆ ಹೋಗ ಬೇಕಾಗಿದೆ..''

ಪಾಮರ್‌ನ 'ವೃದ್ಧರ ಕೂಟ'ವು ಡೆಟ್ರಾಯ್ಟ್ ನಗರದ ಪ್ರತಿಷ್ಠಿತ ನಾಗರಿಕರನ್ನು ಒಳಗೊಂಡಿತ್ತು. ಅವರೆಲ್ಲರೂ ಪಾಮರ್‌ನು ಮಾರ್ಚ್ ೧೫, ೧೮೯೪ರಂದು ನೀಡಿದ ಔತಣಕೂಟದಲ್ಲಿ ಭಾಗ ವಹಿಸಿದ್ದರು. ಈ ಸಮಾರಂಭದ ವರದಿಯ ತುಣುಕುಗಳನ್ನು ನಾವು ಡೆಟ್ರಾಯ್ಟ್ ಜರ್ನಲ್ ಪತ್ರಿಕೆಯ ಮಾರ್ಚ್ ೧೬ ಮತ್ತು ಫ್ರೀಪ್ರೆಸ್ ಜರ್ನಲ್ ಪತ್ರಿಕೆಯ ಮಾರ್ಚ್ ೧೭ ರ ಸಂಚಿಕೆಗಳಲ್ಲಿ ಕಾಣಬಹುದು. ಅಂದು ಸ್ವಾಮೀಜಿ ಬೌದ್ಧಧರ್ಮದ ವಿಷಯ ವಾಗಿ ಮಾತನಾಡಿದರು.

ಮರುದಿನ ಸಂಜೆ, ಅಂದರೆ, ಮಾರ್ಚ್ ೧೬ರಂದು, ಪಾಮರ್ ಸ್ವಾಮೀಜಿಯವರ ಗೌರವಾರ್ಥ ಇನ್ನೊಂದು ಔತಣ ಕೂಟವನ್ನು ಏರ್ಪಡಿಸಿದ್ದನು. ಅದಕ್ಕೆ ಆಮಂತ್ರಿಸಿದ್ದವರೆಲ್ಲರೂ ಒಂದಲ್ಲ ಒಂದು ರೀತಿಯಲ್ಲಿ ಆಗಿನ ಕಾಲದ ರಾಜಕೀಯದಲ್ಲಿ ಸಕ್ರಿಯವಾಗಿ ಇದ್ದವರು. ಅವರೆಲ್ಲ ಶ್ರೀಮಂತ ಉದ್ಯಮಿಗಳು. ಸಮಾಜಹಿತಕ್ಕಾಗಿ ರಾಜಕೀಯದಲ್ಲಿ ತೊಡಗಿಸಿಕೊಂಡಿದ್ದರು. ಸ್ವಾಮೀಜಿ ಅವರೆಲ್ಲರೊಡನೆ ಸೌಹಾರ್ದಯುತವಾದ ದೀರ್ಘ ಸಂವಾದವನ್ನು ನಡೆಸಿದರು.

ಇದಲ್ಲದೆ, ಇನ್ನೊಂದು ಮುಖ್ಯವಾದ ವಿಷಯ ಇಲ್ಲಿದೆ. ಪಾಮರ್‌ನ ಸ್ನೇಹವು ಸ್ವಾಮೀಜಿಯವರನ್ನು ಅವರಿಗೆ ಮೋಸ ಮಾಡಿದ್ದ ಕುಖ್ಯಾತ ಲೆಕ್ಚರ್ ಬ್ಯುರೋವಿನಿಂದ ಬಿಡಿಸಿತು. ಸ್ವಾಮೀಜಿಯವರ ಪ್ರವಚನಗಳಿಂದ ಗಳಿಸಿದ ಬಹಳಷ್ಟು ಹಣ ವನ್ನು ಬ್ಯೂರೋವಿನ ಮುಖ್ಯಸ್ಥನಾದ ಸ್ಲೇಟನ್ ಕೊಳ್ಳೆಹೊಡೆ ದಿದ್ದನು. ಅವರಿಗೆ ಸುಳ್ಳು ಆಶ್ವಾಸನೆಗಳನ್ನು ನೀಡಿ, ದಾರಿತಪ್ಪಿಸಿ ದ್ದನು. ಸ್ವಾಮೀಜಿ ತಮಗಾದ ಅನ್ಯಾಯವನ್ನು ಡೆಟ್ರಾಯ್ಟ್‌ನ ಸ್ನೇಹಿತರೊಂದಿಗೆ ಚರ್ಚಿಸಿದರೆಂದು ಕಾಣುತ್ತದೆ. ಈ ಬಗ್ಗೆ ಅವರು ಶ್ರೀಮತಿ ಹೇಲ್ ಅವರಿಗೆ ಬರೆದ ಪತ್ರದಲ್ಲಿ ವಿವರವಾಗಿ ತೋಡಿಕೊಂಡಿದ್ದಾರೆ. ಅದರಲ್ಲಿ ಅವರು ಹೀಗೆ ಬರೆದಿದ್ದಾರೆ:

'' ನಾನು ಈ ಸ್ಲೇಟನ್ನಿನ ವ್ಯವಹಾರದಿಂದ ಸಂಪೂರ್ಣವಾಗಿ ಕುಂದಿಹೋಗಿದ್ದೇನೆ. ಇದರಿಂದ ಬಿಡಿಸಿಕೊಳ್ಳಲು ಹೆಣಗಾಡು ತ್ತಿದ್ದೇನೆ. ಈ ದುಷ್ಟನ ಸಹವಾಸ ಮಾಡಿದ್ದರಿಂದ ನಾನು ಸುಮಾರು ೫,೦೦೦ ಡಾಲರುಗಳನ್ನು ಕಳೆದುಕೊಂಡೆ. ಈ ತರಹ ಭಾಷಣಗಳನ್ನು ಮಾಡುವವರು, ಪ್ರತಿಯೊಂದು ಭಾಷಣಕ್ಕೆ ಕಡಿಮೆಯೆಂದರೂ ಸಾವಿರ ಡಾಲರುಗಳನ್ನು ಗಳಿಸುತ್ತಾರೆ. ಎಲ್ಲ ನಗರಗಳಲ್ಲಿಯೂ ಹಾಗೆಯೇ ಇದೆ. ಆದರೆ ಈ ಎಲ್ಲ ಪಟ್ಟಣ ಗಳಲ್ಲಿಯೂ ಸ್ಲೇಟನ್ ನನಗೆ ವಂಚನೆ ಮಾಡಿದನು. ಭಗವಂತನ ಇಚ್ಛೆಯಂತೆ ಆಗಲಿ. ಅಮೆರಿಕದ ಜನರು ನನ್ನನ್ನು ಮೆಚ್ಚಿಕೊಂಡಿ ದ್ದನ್ನು ಕಂಡರೆ, ನಾನು ಇಷ್ಟರವರೆಗೆ ದೊಡ್ಡ ಮಟ್ಟದ ಹಣವನ್ನು ಗಳಿಸಬಹುದಾಗಿತ್ತು. ಆದರೆ ಲೆಕ್ಚರ್ ಬ್ಯುರೋವಿನ ಮುಖ್ಯಸ್ಥ ರಾದ ಜಿಮ್ಮಿ ಇರ್ವಿಂಗ್ ಮಿಲ್ಸ್ ಮತ್ತು ಸ್ಲೇಟನ್ ಇಬ್ಬರನ್ನೂ ಭಗವಂತನೇ ಹೀಗಾಗದಂತೆ ತಡೆಯಲು ಕಳಿಸಿದನೆಂದು ಕಾಣು ತ್ತದೆ. ಭಗವಂತನ ದಾರಿಗಳು ನಿಗೂಢವಾದುವು.

''ಆದರೆ ಒಂದು ಗೂಢಸಂಗತಿಯನ್ನು ನಾನು ನಿನಗೆ ಹೇಳ ಬೇಕು. ಸುಳ್ಳುಗಾರ ಸ್ಲೇಟನ್ನಿನ ಕಬಂಧ ಹಸ್ತದಿಂದ ನನ್ನನ್ನು ಬಿಡಿಸಲು ಪಾಮರ್ ಚಿಕಾಗೋ ನಗರಕ್ಕೆ ಹೋಗಿದ್ದಾನೆ. ಅವನು ಯಶಸ್ಸು ಗಳಿಸಲೆಂದು ನಾನು ಭಗವಂತನಲ್ಲಿ ಪ್ರಾರ್ಥಿಸುತ್ತೇನೆ. ಹಲವಾರು ನ್ಯಾಯವಾದಿಗಳು ಲೆಕ್ಚರ್ ಬ್ಯೂರೋವಿನ ಈ ಒಪ್ಪಂದವನ್ನು ನೋಡಿದ್ದಾರೆ. ಅವರೆಲ್ಲರೂ ಇದೊಂದು ನಾಚಿಕೆ ಗೇಡಿನ ಮೋಸವೆಂದು ಹೇಳುತ್ತಾರೆ. ಇದನ್ನು ಯಾವುದೇ ಸಮಯದಲ್ಲಿ ಮುರಿಯಬಹುದೆಂದು ಅಭಿಪ್ರಾಯಪಡುತ್ತಾರೆ. ಆದರೆ ನಾನೊಬ್ಬ ಸಂನ್ಯಾಸಿ – ನನ್ನನ್ನು ನಾನು ಸ್ವರಕ್ಷಣೆ ಮಾಡಿ ಕೊಳ್ಳಲಾರೆ. ಆದ್ದರಿಂದ ಈ ಎಲ್ಲ ವ್ಯವಹಾರವನ್ನು ಕಿತ್ತೊಗೆದು, ಭಾರತಕ್ಕೆ ಹೋಗುವುದೇ ಒಳ್ಳೆಯದು ಎಂದು ನನಗೀಗ ತೋರು ತ್ತಿದೆ.''

ಪಾಮರ್ ಸ್ವಾಮೀಜಿಯವರನ್ನು ಲೆಕ್ಚರ್ ಬ್ಯೂರೋವಿನ ಮೂರು ವರ್ಷಗಳ ಒಪ್ಪಂದದಿಂದ ಬಿಡಿಸುವುದರಲ್ಲಿ ಯಶಸ್ವಿ ಯಾದನು. ಆದರೆ ಅದು ನಿಜವಾಗಲೂ ಕಷ್ಟದಾಯಕವಾಗಿತ್ತು. ಆದರೆ ಸ್ವಾಮೀಜಿಯವರಿಗಿದ್ದ ಪ್ರಭಾವಶಾಲಿ ಸ್ನೇಹವೃಂದದಿಂದ ಅದು ಸಾಧ್ಯವಾಯಿತು.

ಸ್ವಾಮೀಜಿ ಡೆಟ್ರಾಯ್ಟ್‌ನಲ್ಲಿ ಹೋಲ್ಡನ್ ಎನ್ನುವ ಹೊಸ ವ್ಯಕ್ತಿಯ ಜೊತೆಗೆ ಒಪ್ಪಂದ ಮಾಡಿಕೊಂಡರು. ಅವನು ಪ್ರಾಮಾ ಣಿಕನೇನೋ ಸರಿಯೇ, ಆದರೆ ಅವನಿಗೆ ಪ್ರವಚನಗಳನ್ನು ಏರ್ಪ ಡಿಸುವ ಸಾಮರ್ಥ್ಯ ಇರಲಿಲ್ಲ. ''ನನಗೆ ಕಡೆಯ ಪ್ರವಚನದಿಂದ ಸಿಕ್ಕಿದ್ದು ಬರೀ ೧೨೭ ಡಾಲರುಗಳು'' ಎಂದು ಸ್ವಾಮೀಜಿ ಒಂದು ಪತ್ರದಲ್ಲಿ ಬರೆಯುತ್ತಾರೆ. ಅದು ನಡೆದದ್ದು ೧೮೯೪ರ ಮಾರ್ಚ್ ೧೫ರಂದು, ಡೆಟ್ರಾಯ್ಟ್ ಒಪೆರಾ ಹಾಲಿನಲ್ಲಿ. ಸ್ವಾಮೀಜಿ ಮುಂದುವರಿದು ಹೇಳುತ್ತಾರೆ: ''ಭಾಷಣ ಕಾರ್ಯಕ್ರಮದ ವ್ಯವಸ್ಥೆ ಚೆನ್ನಾಗಿರಲಿಲ್ಲ. ಸಭಾಂಗಣದ ಬಾಡಿಗೆಯೇ ೧೫೦ ಡಾಲರುಗಳು. ನಾನೀಗ ಹೋಲ್ಡನ್ ಅನ್ನು ತ್ಯಜಿಸಿದ್ದೇನೆ. ಇಲ್ಲಿ ಇನ್ನೊಬ್ಬ ವ್ಯಕ್ತಿಯ ಜೊತೆ ಒಪ್ಪಂದ ಮಾಡಿಕೊಂಡಿದ್ದೇನೆ. ನೋಡೋಣ, ಅವನಾದರೂ ಉತ್ತಮವಾದ ಕೆಲಸ ಮಾಡುವ ನೇನೋ ಎಂದು.''

ಆ 'ಇನ್ನೊಬ್ಬ ವ್ಯಕ್ತಿ' ಉತ್ತಮ ಕಾರ್ಯವನ್ನು ಮಾಡಿ ದನೋ, ಇಲ್ಲವೋ ಎನ್ನುವುದು ನಮಗೆ ಗೊತ್ತಿಲ್ಲ. ಏನೇ ಇರಲಿ, ಒಂದಂತೂ ಸ್ವಾಮೀಜಿಯವರಿಗೆ ಮನದಟ್ಟಾಯಿತು. ತಾವು ತಮ್ಮ ಭಾರತದ ಕಾರ್ಯಕ್ಕೆ ದೊಡ್ಡ ಮಟ್ಟದ ಹಣವನ್ನು ಸಂಗ್ರ ಹಿಸುವುದು ಅಸಾಧ್ಯ ಎಂದು. ಇದಕ್ಕಾಗಿ ಸ್ವಾಮೀಜಿ ಹಲವು ತಿಂಗಳುಗಳ ಕಾಲ, ದಣಿವರಿಯದೆ, ಅಮೆರಿಕಾದ್ಯಂತ ಸುತ್ತಾಡಿ, ಕೆಲಸದ ಜ್ವರವನ್ನು ಹತ್ತಿಸಿಕೊಂಡವರಂತೆ, ಪ್ರವಚನಗಳನ್ನು ಮಾಡಿದ್ದರು. ಅದನ್ನು ನೂರಾರು ಜನರು ಬಹುವಾಗಿ ಮೆಚ್ಚಿ

ಕೊಂಡಿದ್ದರು, ಕೂಡ. ಆದರೆ ಅವರಿಗೆ ಸಿಕ್ಕ ಪ್ರತಿಫಲ ಅತ್ಯಲ್ಪ. ಹೀಗಾಗಿ ೧೮೯೪ನೆಯ ಇಸವಿಯ ಮಾರ್ಚ್ ತಿಂಗಳ ಮೂರನೆಯ ವಾರದಂದು ಅವರು ಈ ಇಡೀ ಭಾಷಣ ಪ್ರವಾಸದ ವ್ಯವಸ್ಥೆಯ ವಿರುದ್ಧ ಸಿಡಿದುಬಿದ್ದಿದ್ದರು. ಈ ವಾರದಲ್ಲಿ ಅವರು ಬರೆದ ಎರಡು ಪತ್ರಗಳು ಈ ವಿರೋಧಿ ಭಾವನೆಯನ್ನು ಸ್ಪಷ್ಟವಾಗಿ ಎತ್ತಿತೋರಿಸುತ್ತವೆ. ಮೊದಲನೆಯ ಪತ್ರ ಅವರು ಬರೆದ್ದು ಮಾರ್ಚ್ ೧೫ರಂದು, ಹೇಲ್ ಸಹೋದರಿಯರಿಗೆ. ಎರಡನೆಯ ಪತ್ರವನ್ನು ಅವರು ಶ್ರೀಮತಿ ಹೇಲ್ ಅವರಿಗೆ ಬರೆದರು. ಈ ಪತ್ರಗಳಲ್ಲಿ ಬಹುತೇಕ ವಿಶ್ವಶಕ್ತಿಯನ್ನೇ ಅಭಿವ್ಯಕ್ತಿಗೊಳಿಸುವ ಸಾಮರ್ಥ್ಯವುಳ್ಳ ವ್ಯಕ್ತಿಯೊಬ್ಬರು ಶಿಶುಸಹಜ ಮುಗ್ಧತೆಯಿಂದ, ಒಬ್ಬ ಸಹೋದರನಂತೆ, ಒಬ್ಬ ಪುತ್ರನಂತೆ ತಮ್ಮ ಭಾವನೆಗಳನ್ನು ತೋಡಿಕೊಳ್ಳುವುದನ್ನು ನೋಡುತ್ತೇವೆ. ಸ್ವಾಮೀಜಿ ಹೀಗೆ ಬರೆಯುತ್ತಾರೆ:

''ನಾನು ಎಳ್ಳಷ್ಟೂ 'ಬಿರುಗಾಳಿ'ಯಲ್ಲ. ಅದಕ್ಕಿಂತ ಬಹುದೂರ ನನ್ನ ಸ್ವಭಾವ. ನಾನು ಬಯಸುವುದು ಈ ಪ್ರಪಂಚವಲ್ಲ. ಈ ಬಿರುಗಾಳಿಯ ವಾತಾವರಣವನ್ನು ನಾನಿನ್ನು ಸಹಿಸಿಕೊಂಡಿರಲಾರೆನು. ಇದೇ ಪರಿಪೂರ್ಣತೆಯ ದಾರಿ : ನಾವು ಪರಿಪೂರ್ಣರಾಗಿರುವುದು ಮತ್ತು ಕೆಲವು ಮಂದಿ ಸ್ತ್ರೀಪುರುಷರನ್ನು ಪರಿಪೂರ್ಣರನ್ನಾಗಿ ಮಾಡುವುದು. ಒಳಿತನ್ನು ಮಾಡುವ ನನ್ನ ಭಾವನೆ ಹೀಗಿದೆ: ಕೆಲವು ಮಹಾನ್ ಚಾರಿತ್ರ್ಯವಂತರನ್ನು ಹುಟ್ಟುಹಾಕುವುದು. ಹಂದಿಗಳ ಮುಂದೆ ರತ್ನಗಳನ್ನು ಎಸೆಯುವುದು ಕಾಲ ಮತ್ತು ಶಕ್ತಿಯ ಹರಣ ಮಾತ್ರ.

''ನಾನು ಪ್ರವಚನಗಳನ್ನು ಮಾಡುವುದಕ್ಕೆ ಎಳ್ಳಷ್ಟೂ ಬೆಲೆ ಕೊಡುವುದಿಲ್ಲ.. ಯಾವುದೋ ಒಬ್ಬ ವ್ಯಕ್ತಿಯ ಮತ್ತು ಒಂದು ವರ್ಗದ ಸಭಿಕರಿಗೆ ಸರಿಹೊಂದುವಂತೆ ಪ್ರಯತ್ನಿಸುವುದು ಬಹಳ ಅಸಹ್ಯಕರವಾದುದು. ಇಷ್ಟಾದರೂ ನಾನು ಚಿಕಾಗೋ ನಗರಕ್ಕೆ ಒಂದೆರಡು ದಿನಗಳ ಕಾಲ ಬಂದುಹೋಗುತ್ತೇನೆ. ನಂತರ ಈ ದೇಶದಿಂದ ಹೊರಟುಹೋಗುತ್ತೇನೆ. ಭಗವಂತನು ಎಲ್ಲರನ್ನೂ ಆಶೀರ್ವದಿಸಲಿ.''

ಸ್ವಾಮೀಜಿ ಈ ಸಂದರ್ಭದಲ್ಲಿ ತಮ್ಮ ಭಾರತೀಯ ಕಾರ್ಯಕ್ಕೆ ಹಣ ಸಂಗ್ರಹಿಸುವ ಉದ್ದೇಶವನ್ನು ಸರ್ವಥಾ ತ್ಯಜಿಸಿಬಿಟ್ಟರು. ಇದಲ್ಲದೆ, ಈ ಧ್ಯೇಯಕ್ಕಾಗಿ ತಾವು ಡೆಟ್ರಾಯ್ಟ್ ಸ್ನೇಹಿತರಿಂದ ಸಂಗ್ರಹಿಸಿದ ಹಣವನ್ನು ಹಿಂದಿರುಗಿಸಲು ಕೂಡ ಪ್ರಯತ್ನಿಸಿದರು. ಈ ಬಗ್ಗೆ ಅವರು ಶ್ರೀಮತಿ ಹೇಲ್ ಅವರಿಗೆ ಹೀಗೆ ಪತ್ರವನ್ನು ಬರೆಯುತ್ತಾರೆ: ''ನನ್ನ ಈ ಪ್ರಯತ್ನದಲ್ಲಿ ಸಫಲಹೊಂದುವ ಕಿಂಚಿತ್ತಾದರೂ ಅವಕಾಶ ಇಲ್ಲದಿರುವಾಗ, ನನಗೆ ನಿಮ್ಮ ಹಣವನ್ನು ಇಟ್ಟುಕೊಳ್ಳುವ ಅಧಿಕಾರ ಸ್ವಲ್ಪವೂ ಇಲ್ಲ. ಆದರೆ ಡೆಟ್ರಾಯ್ಟಿನ ನನ್ನ ಸ್ನೇಹಿತರು ಈ ಹಣವನ್ನು ತಿರುಗಿ ಪಡೆಯಲು ನಿರಾಕರಿಸಿದರು ಮಾತ್ರವಲ್ಲ , ನಾನು ಇಷ್ಟಪಟ್ಟರೆ, ಹಣವನ್ನು ನೀರಿನಲ್ಲಿ ಎಸೆದುಬಿಡಲು ಹೇಳಿದರು.''

ಭಾರತದ ಕಾರ್ಯಕ್ಕೆ ಆವಶ್ಯಕವಿರುವ ಹಣ ಲಭಿಸಿತೋ ಇಲ್ಲವೋ, ತಮ್ಮ ಉದ್ದೇಶದ ಅಲೆಯು ತಮ್ಮನ್ನು ಕರೆದೊಯ್ಯುವುದಕ್ಕೆ ಸ್ವಾಮೀಜಿ ಮುಕ್ತವಾಗಿ ಬಿಟ್ಟುಬಿಟ್ಟರು. ಅವರು ೧೮೯೪ರ ಮಾರ್ಚ್ ೧೫ರಂದು ಶ್ರೀಮತಿ ಹೇಲ್ ಅವರಿಗೆ ಬರೆದ ಪತ್ರವು ಇದನ್ನು ಸ್ಪಷ್ಟಪಡಿಸುತ್ತದೆ:

''ನಾನು ಇಲ್ಲಿ (ಡೆಟ್ರಾಯ್ಟ್) ಸೋಮವಾರ ಮತ್ತು ಮತ್ತೆರಡು ಕಡೆಗಳಲ್ಲಿ ಮಂಗಳವಾರ ಮತ್ತು ಬುಧವಾರ ಪ್ರವಚನಗಳನ್ನು ನೀಡುವವನಿದ್ದೇನೆ.. ನಾನು ಯಾವುದಕ್ಕಾಗಿಯೂ ಆತಂಕಪಡುತ್ತಿಲ್ಲ. ಜೀವನವನ್ನು ಅನಾಯಾಸವಾಗಿ, ಸಹಜವಾಗಿ ತೆಗೆದುಕೊಳ್ಳುತ್ತಿದ್ದೇನೆ. ನನಗೆ ಬೋಸ್ಟನ್ ನಗರಕ್ಕೆ ಹೋಗುವುದಕ್ಕಾಗಲಿ, ಅಥವಾ ಹೋಗದೆ ಇರುವುದಕ್ಕಾಗಲಿ ಯಾವ ನಿಶ್ಚಿತವಾದ ಬಯಕೆಯೂ ಇಲ್ಲ. ಯಾವುದು ಪ್ರಾಪ್ತವಾಗುವುದೋ, ಯಾವ ಮನೋಭಾವ ಇರುತ್ತದೆಯೋ, ಆ ರೀತಿ ಇರುತ್ತೇನೆ. ಎಲ್ಲ ಕಡೆ, ಒಳ್ಳೆಯದು, ಇಲ್ಲವೇ ಕೆಟ್ಟದ್ದು ಆಗುತ್ತದೆ. ನಾನು ಭಾರತಕ್ಕೆ ಹಿಂತಿರುವುದಕ್ಕೆ ಬೇಕಾದ ಪ್ರಯಾಣ ವೆಚ್ಚ ನನ್ನ ಹತ್ತಿರ ಈಗ ಇದೆ. ಈಗ ನನ್ನ ಕಾರ್ಯದ ಯೋಜನೆಗಳ ಕುರಿತಾಗಿ ಹೇಳುವುದಾದರೆ, ನನಗೀಗ ಪೂರ್ಣ ಅರಿವಾಗಿದೆ : ಈಗ ಇರುವ ರೀತಿಯಲ್ಲಿ ಕೆಲಸವು ಮುಂದುವರಿದರೆ, ಇದಕ್ಕೆ ಒಂದು ಸ್ವರೂಪವನ್ನು ನೀಡಲು ನಾನು ಇನ್ನೂ ನಾಲ್ಕು ಅಥವಾ ಐದು ಸಲ ಮತ್ತೆ ಬರಬೇಕಾಗಿ ಬರಬಹುದು.

''ಇತರರಿಗೆ ಬೋಧಿಸುವುದು ಮತ್ತು ಆ ಮೂಲಕ ಜಗತ್ತಿಗೆ ಹಿತವನ್ನು ಮಾಡುವುದು ಈ ಬಗ್ಗೆ ಹೇಳುವುದಾದರೆ, ಈ ಜಗತ್ತಿಗೆ ಏನನ್ನಾದರೂ ನಾನು ಬೋಧಿಸುವಂಥದ್ದು ಇದೆ ಎಂದು ನನ್ನನ್ನು ನಾನು ನಿಶ್ಚಯಪಡಿಕೊಳ್ಳಲು ನಾನು ವಿಫಲನಾಗಿದ್ದೇನೆ. ಹೀಗಾಗಿ ನಾನು ಈಗ ಬಹಳ ಆನಂದದಿಂದ ಇದ್ದೇನೆ ಮತ್ತು ಆರಾಮವಾಗಿ ಇದ್ದೇನೆ. ನಾನು ಬರಿ ನನ್ನ ಈ ಕೆಲಸದ ಜ್ವರದ ಬಗ್ಗೆ ಕನಸನ್ನು ಕಾಣುತ್ತಿದ್ದೇನೆ ಮತ್ತು ತಾತ್ತ್ವಿಕವಾಗಿ ಯೋಚಿಸುತ್ತಿದ್ದೇನೆ. ಈಗ ನನಗೆ ಗೊತ್ತಾಗಿದೆ. ಇದೆಲ್ಲವೂ ಅಸಂಬದ್ಧವಾದುದು ಎಂದು. ನಾನು ಏನೂ ಅಲ್ಲ ; ಈ ಜಗತ್ತು ಏನೂ ಅಲ್ಲ. ಪರಮಾತ್ಮನೊಬ್ಬನೇ ನಿಜವಾದ ಕೆಲಸಗಾರ. ನಾವೆಲ್ಲರೂ ಅವನ ಕೈಯಲ್ಲಿನ ಯಂತ್ರಗಳು ಮಾತ್ರ.''


ಸ್ವಾಮಿ ವಿವೇಕಾನಂದರು ತಮ್ಮ ಭಾರತದ ಕಾರ್ಯಕ್ಕಾಗಿ ಎಷ್ಟು ಹಣವನ್ನು ಸಂಗ್ರಹಿಸಿದರು ಎಂದು ಊಹೆ ಮಾಡಲೂ ಅಸಾಧ್ಯ. ಒಂದಂತೂ ನಿಜ. ಮಾರ್ಚ್ ೧೮೯೪ರ ಸುಮಾರಿಗೆ ಅವರಿಂದ ಹೆಚ್ಚೇನೂ ಮೊತ್ತವನ್ನು ಸಂಗ್ರಹಿಸಲು ಸಾಧ್ಯವಾಗಲೇ ಇಲ್ಲ. ಕೆಲವು ಉದಾರ ದಾನಿಗಳ ದೇಣಿಗೆಯನ್ನು ಮಾತ್ರ ಇಲ್ಲಿ ಉಲ್ಲೇಖಿಸಬಹುದು. ಫ್ರೀರ್ ಎನ್ನುವವನು ೨೦೦ ಡಾಲರುಗಳನ್ನು ಕೊಟ್ಟನು. ಒಬ್ಬ ಭದ್ರಮಹಿಳೆಯು ೧೦೦ ಡಾಲರುಗಳನ್ನು ನೀಡಿದಳು. ಡೆಟ್ರಾಯ್ಟ್ ನಗರದ ಪಾಮರ್ ಮತ್ತು ಆತನ ಉದ್ಯಮಿ ಮಿತ್ರರು ಬಹಳಷ್ಟು ಹಣವನ್ನು ನೀಡಿರಬಹುದು. ಆದರೆ ಅದೆಷ್ಟು ಎಂದು ನಮಗೆ ಗೊತ್ತಿಲ್ಲ.

(ಮುಂದುವರಿಯುವುದು)


ನಿಜವಾದ ಭಕ್ತಿ

ಕಥೆ: ಪರಮಹಂಸದಾಸ   ಚಿತ್ರ: ಶಂಕರ್


ಸುಮಾರು ಒಂದು ಸಾವಿರ ವರ್ಷಗಳ ಹಿಂದೆ, ರಾಜರಾಜ ಚೋಳನು ತಮಿಳುನಾಡನ್ನು ಆಳುತ್ತಿದ್ದನು. ರಾಜನು ತನ್ನ ರಾಜಧಾನಿಯಾಗಿದ್ದ ತಂಜಾವೂರಿನಲ್ಲಿ ಭಗವಾನ್ ಶಿವನಿಗಾಗಿ ಒಂದು ದೇವಸ್ಥಾನವನ್ನು ಕಟ್ಟಬೇಕೆಂದು ನಿರ್ಧರಿಸಿದನು. ಅದಕ್ಕಾಗಿ ಹಗಲು ರಾತ್ರಿ ಕೆಲಸಮಾಡಲು ಸಾವಿರಾರು ಕೂಲಿಯಾಳುಗಳನ್ನು ನೇಮಿಸಲಾಯಿತು.



ಅದೇ ನಗರದಲ್ಲಿ ಅಳಗಿಯೆಂಬ ಮುದುಕಿಯಿದ್ದಳು.





ಆಗ ಅಜ್ಜಿಯ ಮನಸ್ಸಿನಲ್ಲಿ ಥಟ್ಟನೆ ಒಂದು ಯೋಚನೆ ಹೊಳೆಯಿತು.
4
ದೇವಸ್ಥಾನ ಕಟ್ಟುತ್ತಿರುವ ಕೂಲಿ ಆಳುಗಳಿಗೆ ನಾನು ಮಜ್ಜಿಗೆ ಹಂಚಿದರೆ ನಾನು ಭಗವಂತನ ಸೇವೆ ಮಾಡಿದಂತಾಗುತ್ತದೆ.
ಅದರಂತೆ ಆ ಅಜ್ಜಿ ಬಾಯಾರಿದವರಿಗೆಲ್ಲ ಮಜ್ಜಿಗೆ ಹಂಚಲು ತೊಡಗಿದಳು.
5
ಅಜ್ಜಿ, ನಿನಗೆ ಭಗವಂತ ದೀರ್ಘಾಯುಸ್ಸನ್ನು ಕೊಡಲಿ.
ನೀನು ದೇವರ ಸೇವೆಯಲ್ಲಿ ತೊಡಗಿದ್ದೀಯ. ತಗೋ ಇನ್ನೂ ಸ್ವಲ್ಪ ಮಜ್ಜಿಗೆ ಕುಡಿ.
6
ನಿರ್ಮಾಣದ ಕೆಲಸ ಮುಗಿಯುತ್ತಾ ಬಂತು. ಗೋಪುರದ ಮೇಲಿಡಲು ಒಂದು ಕಲ್ಲು ಬೇಕಿತ್ತು. ಅಜ್ಜಿಗೆ ದುಃಖವಾಗುತ್ತಿತ್ತು.
7
ಅಜ್ಜಿ, ಯಾಕಿಷ್ಟು ಚಿಂತಿಸುತ್ತಿದ್ದೀಯೆ? ದೇವಸ್ಥಾನದ ನಿರ್ಮಾಣ ಮುಗಿದು ಹೋದರೆ ಮಜ್ಜಿಗೆ ಹಂಚಲಾಗದು ಎಂದು ನಿನಗೆ ದುಃಖವೆ?
ದೇವಸ್ಥಾನದ ನಿರ್ಮಾಣಕ್ಕಾಗಿ ನಾನೇನೂ ಕೊಡಲಾಗಲಿಲ್ಲವಲ್ಲ ಎಂದಷ್ಟೇ ನನ್ನ ಕೊರಗು.
ದೇವಸ್ಥಾನಕ್ಕಾಗಿ ಏನಾದರೂ ದಾನಮಾಡುವಷ್ಟು ಶ್ರೀಮಂತಳೇ ನೀನು?


ಇದ್ದಕ್ಕಿದ್ದಂತೆಯೇ ಆಕೆಗೆ ತನ್ನ ಗುಡಿಸಿಲಿನ ಮುಂದೆ ದೊಡ್ಡ ಬಂಡೆಯಿರುವುದು ನೆನಪಿಗೆ ಬಂತು. ದೇವಸ್ಥಾನದ ಕಟ್ಟಡ ಮುಗಿಯಲು ಇನ್ನೊಂದು ಕಲ್ಲಷ್ಟೇ ಅಲ್ಲವೆ ಬೇಕಿರುವುದು?
8
ಮಗು, ನನ್ನದೊಂದು ಕೋರಿಕೆಯಿದೆ. ನೀನು ನಡೆಸಿಕೊಡುವೆಯಾ ?
ಹೇಳು ಅಜ್ಜಿ, ನನ್ನ ಕೈಲಾದರೆ ಖಂಡಿತ ನಡೆಸಿಕೊಡುತ್ತೇನೆ.
ನನ್ನ ಗುಡಿಸಿಲಿನ ಮುಂದೆ ನನಗೆ ಸೇರಿದ ಒಂದು ಬಂಡೆ ಇದೆ. ಅದನ್ನೇ ಗೋಪುರಕ್ಕಾಗಿ ಉಪಯೋಗಿಸುವಿರಾ?
ಆ ದೇವಸ್ಥಾನದ ಭವ್ಯವಾದ ಗೋಪುರವನ್ನು ನೆನೆಯುತ್ತ ಮತ್ತು ಶಿವನನ್ನು ಪ್ರಾರ್ಥಿಸುತ್ತ ಆ ರಾತ್ರಿ ರಾಜನು ನಿದ್ದೆ ಹೋದನು.
9
ಪ್ರಧಾನ ಶಿಲ್ಪಿ ಆಕೆಯ ಸಲಹೆಗೆ ಒಪ್ಪಿ ಆ ಬಂಡೆಯನ್ನು ಗೋಪುರಕ್ಕಾಗಿ ಬಳಸಿದನು. ದೇವಸ್ಥಾನದ ಕಟ್ಟಡ ನಿರ್ಮಾಣ ಮುಗಿಯಿತು. ರಾಜನಿಗೆ ಬಹಳ ಸಂತೋಷವಾಯಿತು.
ಅಲ್ಲಿಯತನಕ ಶಿವನಿಗೋಸ್ಕರ ಯಾರೂ ಅಷ್ಟು ದೊಡ್ಡ ಗೋಪುರ ವನ್ನು ಕಟ್ಟಿರಲಿಲ್ಲ.


ಆ ರಾತ್ರಿ, ರಾಜನಿಗೊಂದು ಕನಸು ಬಿತ್ತು. ಶಿವನು ಕನಸಿನಲ್ಲಿ ಬಂದು.....
10
ಎಲೈ ರಾಜನೇ, ಅಳಗಿ ಎಂಬ ಮುದುಕಿಯು ದಾನ ಮಾಡಿದ ಬಂಡೆಯಡಿ ಇರಲು ನನಗೆ ಬಹಳ ಸಂತೋಷವಾಗಿದೆ.
ರಾಜನಿಗೆ ಆಶ್ಚರ್ಯವೋ ಆಶ್ಚರ್ಯ!
11
ನಾನು ಅಷ್ಟೊಂದು ದೊಡ್ಡ ಮಂದಿರವನ್ನೇ ಶಿವನ ವಾಸಸ್ಥಾನಕ್ಕಾಗಿ ಕಟ್ಟಿಸಿದ್ದೇನೆ. ಆದರೆ ಶಿವನು ಅಳಗಿ ಎಂಬ ಮುದುಕಿಯ ಬಂಡೆಯಡಿ ಸಂತೋಷದಿಂದ ವಾಸಿಸುತ್ತಾನಂತೆ. ಯಾರು ಈ ಮುದುಕಿ?
ಮಾರನೇ ದಿನ ರಾಜನು ವಿಚಾರಿಸಿ ತಾನೇ ಆ ಮುದುಕಿಯನ್ನು ಕಾಣಲು ಹೋದ.
12
ಅಮ್ಮ, ಶಿವನಿಗಾಗಿ ನೀವೇನು ಸೇವೆ ಮಾಡಿದ್ದೀರೋ ಕಾಣೆ. ಆದರೆ ಶಿವನು ನನ್ನ ಕನಸ್ಸಿನಲ್ಲಿ ಬಂದು ನಿಮ್ಮ ಬಂಡೆಯಡಿ ವಾಸಿಸುವೆನೆಂದು ಹೇಳಿದ. ನೀವೇನು ಮಾಡಿದಿರಿ?
ಮಹಾರಾಜ, ನಾನೇನೂ ಮಾಡಿಲ್ಲ. ದೇವಸ್ಥಾನಕ್ಕಾಗಿ ಕೆಲಸ ಮಾಡುತ್ತಿದ್ದ ಈ ಕೂಲಿ ಆಳುಗಳಿಗೆ ಮಜ್ಜಿಗೆ ಹಂಚುತ್ತಿದ್ದೆ. ನನ್ನ ಗುಡಿಸಿಲಿನ ಮುಂದಿದ್ದ ಈ ಬಂಡೆಯನ್ನು ಗೋಪುರದ ಮೇಲ್ಭಾಗ ವನ್ನು ಸಂಪೂರ್ಣ ಗೊಳಿಸಲು ಉಪಯೋಗಿಸಿಕೊಳ್ಳಿ ಎಂದು ಕೇಳಿಕೊಂಡೆ.
ರಾಜನು ಆಕೆಯ ಭಕ್ತಿಯನ್ನು ಕಂಡು ಮೂಕನಾದನು.
13
ನೀನು ನಿನ್ನ ಭಕ್ತಿಯಿಂದ ಭಗವಂತನನ್ನೇ ಬಂಧಿಸಿರುವೆ.
ಆ ಮುಗ್ಧ ಮುದುಕಿಯ ನೆನಪಿಗಾಗಿ ರಾಜನು ದೇವಸ್ಥಾನದ ಬಳಿ ಒಂದು ಕೊಳವನ್ನು ಕಟ್ಟಿಸಿದನು. ಆ ಕೊಳ ಇಂದಿಗೂ ಇದೆ.

ಸುದ್ದಿ ಸಂಚಯ





ರಾಮಕೃಷ್ಣ ಮಹಾಸಂಘದ ಇತ್ತೀಚಿನ ಚಟುವಟಿಕೆಗಳು (ಅಕ್ಟೋಬರ್ ೨೦೨೩)

ರಾಮಕೃಷ್ಣ ಮಹಾಸಂಘದ ಪ್ರಧಾನಕೇಂದ್ರ **ಬೇಲೂರು ಮಠ**ದಲ್ಲಿ ಅಕ್ಟೋಬರ್ ೨೧ರಿಂದ ೨೪ರ ವರೆಗೆ ದುರ್ಗಾಪೂಜೆಯನ್ನು ವಿಶೇಷ ಶ್ರದ್ಧಾಭಕ್ತಿಗಳೊಂದಿಗೆ ಆಚರಿಸಲಾಯಿತು. ವಿವಿಧ ಶಾಖಾ ಕೇಂದ್ರಗಳಲ್ಲಿ ಕೂಡ ದುರ್ಗಾಪೂಜೆಯ ಆಚರಣೆ ನಡೆಯಿತು.

ಬೇಲೂರು ಮಠದಲ್ಲಿ ನೂತನವಾಗಿ ನಿರ್ಮಿಸಲಾದ ಕಮಾನನ್ನು (Archway) ಅಕ್ಟೋಬರ್ 14ರಂದು ಸಂಘದ ಉಪಾಧ್ಯಕ್ಷರಾದ ಶ್ರೀಮತ್ ಸ್ವಾಮಿ ಗೌತಮಾನಂದಜಿಯವರು ಉದ್ಘಾಟಿಸಿದರು.

ಹೊಸ ಶಾಖಾಕೇಂದ್ರ: ತಮಿಳುನಾಡಿನ ಕಾಂಚೀಪುರಂ ಜಿಲ್ಲೆಯಲ್ಲಿರುವ **ತಿರುಮಕೂಡಲ್**ನಲ್ಲಿ ರಾಮಕೃಷ್ಣ ಮಿಷನ್ನಿನ ಹೊಸ ಶಾಖಾಕೇಂದ್ರವನ್ನು ಆರಂಭಿಸಲಾಗಿದೆ.

ರಾಮಕೃಷ್ಣ ಮಿಷನ್ನಿನ ೧೨೫ನೇ ವಾರ್ಷಿಕೋತ್ಸವ

ಚೆನ್ನೈ ಮಠ: ಅಕ್ಟೋಬರ್ ೧೪ರಂದು ಸರ್ವಧರ್ಮ ಸಮ್ಮೇಳನ ನಡೆಯಿತು. **ದೆಹಲಿ:** ಅಕ್ಟೋಬರ್ ೧ ರಂದು 'ರಾಷ್ಟ್ರನಿರ್ಮಾಣದಲ್ಲಿ ಸ್ವಾಮಿ ವಿವೇಕಾನಂದರ ಕೊಡುಗೆ' ಎಂಬ ವಿಷಯದ ಬಗ್ಗೆ ವಿಚಾರ ಸಂಕಿರಣ. **ಗೋಲ್ ಪಾರ್ಕ್:** ಎರಡು ದಿನಗಳ ವಿಚಾರ ಸಂಕಿರಣ: ವಿಷಯ: 'ಮಾನವನಲ್ಲಿರುವ ದಿವ್ಯತೆ ಹಾಗೂ ಅನುಷ್ಠಾನ ವೇದಾಂತ ಕುರಿತು ಸ್ವಾಮಿ ವಿವೇಕಾನಂದರ ಕಲ್ಪನೆ.' **ಜೈಪುರ:** 'ಸ್ವಾಮಿ ವಿವೇಕಾನಂದರು ರಾಷ್ಟ್ರ ನಿರ್ಮಾಣಕ್ಕೆ ನೀಡಿದ ಕೊಡುಗೆ' ಕುರಿತು ವಿಚಾರ ಸಂಕಿರಣ. **ಕಂಖಲ್:** ಸರ್ವಧರ್ಮ ಸಮ್ಮೇಳನ–ಅಕ್ಟೋಬರ್ ೧೬. **ಕೋಝಿಕೋಡ್:** ರಾಮಕೃಷ್ಣ ಮಿಷನ್ನಿನ್ನ ಕುರಿತು ಸಾಕ್ಷ್ಯಚಿತ್ರದ ಮಲಯಾಳಂ ಅವತರಣಿಕೆಯ ಬಿಡುಗಡೆ. **ಪಾಲಾ:** 'ನಮಾಮಿ ಸಂಸ್ಕೃತಂ'– ಅಕ್ಟೋಬರ್ ೭, ೮, ೧೪, ೧೫ ರಂದು ಸಂಸ್ಕೃತ ಭಾಷೆಯ ಬೆಳವಣಿಗೆಗಾಗಿ ಕಾರ್ಯಕ್ರಮಗಳು. **ರಾಜ್‌ಕೋಟ್:** ಸೆಪ್ಟೆಂಬರ್ ೨೯ರಂದು ಸಾರ್ವಜನಿಕ ಸಭೆ. 'Ramakrishna Mission in Gujarat' ಸ್ಮರಣ ಸಂಚಿಕೆ ಬಿಡುಗಡೆ. **ಸ್ವಾಮೀಜಿ ಪೂರ್ವಿಕರ ನಿವಾಸ:** ಸಾಂಸ್ಕೃತಿಕ ಸ್ಪರ್ಧೆಗಳು ಹಾಗೂ ವಿಚಾರ ಸಂಕಿರಣ (ಸೆಪ್ಟೆಂಬರ್ ೨೯)

ಶಾಖಾಕೇಂದ್ರಗಳು: ಭಾರತದಲ್ಲಿ : ಕೇಂದ್ರ ಸಚಿವರಾದ ಮೀನಾಕ್ಷಿ ಲೇಖಿ ಹಾಗೂ ಇತರ ಗಣ್ಯರು **ದೆಹಲಿ** ಕೇಂದ್ರಕ್ಕೆ ಭೇಟಿ ನೀಡಿ ಅಲ್ಲಿ ನಡೆದ ದುರ್ಗಾಪೂಜೆಯಲ್ಲಿ ಭಾಗವಹಿಸಿದರು. **ರಾಜ್‌ಕೋಟ್**ನಲ್ಲಿ ಸೆಪ್ಟೆಂಬರ್ ೨೯ರಂದು ಪೂಜ್ಯ ಗೌತಮಾನಂದಜಿಯರು ಹೊಸದಾಗಿ ನಿರ್ಮಿತವಾದ 'ವಿವೇಕಾನಂದ ಮೌಲ್ಯಶಿಕ್ಷಣ ಹಾಗೂ ಸಾಂಸ್ಕೃತಿಕ ಸಂಸ್ಥೆ'ಯ ಎರಡನೇ ಮಹಡಿಯನ್ನು ಉದ್ಘಾಟಿಸಿದರು. **ಕಲ್ಯಾಣಿ** (ಪಶ್ಚಿಮ ಬಂಗಾಳ) ಕೇಂದ್ರವು ಅಕ್ಟೋಬರ್ ೧ ರಂದು ಖಾಸಗಿ ಸಂಸ್ಥೆಯಾಗಿದ್ದ 'ಶ್ರೀಶ್ರೀ ರಾಮಕೃಷ್ಣ ಸೇವಾ ಸಂಘ'ವನ್ನು ರಾಮಕೃಷ್ಣ ಮಹಾಸಂಘಕ್ಕೆ ಸೇರ್ಪಡೆಗೊಳಿಸಿದ್ದರ ದ್ಯೋತಕವಾಗಿ ಸಾರ್ವಜನಿಕ ಸಭೆಯೊಂದನ್ನು ನಡೆಸಿತು. RKMVERI(ಖಾಸಗಿ ವಿಶ್ವವಿದ್ಯಾಲಯ)ದ ಆಫ್-ಕ್ಯಾಂಪಸ್ ಘಟಿಕೋತ್ಸವವು **ಕೊಯಮತ್ತೂರು** ಮಿಷನ್ ವಿದ್ಯಾಲಯದಲ್ಲಿ ಅಕ್ಟೋಬರ್ ೧೧ರಂದು ನೆರವೇರಿತು. ಕೇಂದ್ರ ಸಚಿವರಾದ ಡಾ. ಸುಭಾಸ್ ಸರ್ಕಾರ್ ಘಟಿಕೋತ್ಸವ ಭಾಷಣ ಮಾಡಿದರು.

ವೃಂದಾವನ ಕೇಂದ್ರದಲ್ಲಿ ಅಕ್ಟೋಬರ್ ೧೧ರಂದು ನೂತನವಾಗಿ ನಿರ್ಮಿತವಾದ ನೌಕರರ ನಿವಾಸ ಮೊದಲ ಹಾಗೂ ಎರಡನೇ ಮಹಡಿಯನ್ನು ಸ್ವಾಮಿ ಗೌತಮಾನಂದಜಿಯವರು ಉದ್ಘಾಟಿಸಿದರು.

ನರೇಂದ್ರಪುರ ಕೇಂದ್ರದಲ್ಲಿ ನವೀಕೃತಗೊಂಡ ಶ್ರೀರಾಮಕೃಷ್ಣ ಮಂದಿರವನ್ನು ಸ್ವಾಮಿ ಗೌತಮಾನಂದಜಿಯವರು ಉದ್ಘಾಟಿಸಿದರು. ವಿಶೇಷ ಪೂಜೆ, ಸಾರ್ವಜನಿಕ ಸಭೆ, ಸಾಧುಭಂಡಾರ ನಡೆದವು.

ವಿದೇಶಗಳಲ್ಲಿ: ಡರ್ಬನ್(ದ.ಆಫ್ರಿಕಾ), ಲುಸಾಕ (ಝಾಂಬಿಯಾ), ಮಾರಿಷಸ್, ಬಾಂಗ್ಲಾದೇಶದ ೧೫ ಕೇಂದ್ರಗಳು ದುರ್ಗಾಪೂಜೆಯನ್ನು ಮೂರ್ತಿಯೊಂದಿಗೆ ನೆರವೇರಿಸಿದವು.







Managing Editor : Swami Muktidananda
Editor : Swami Jnanayogananda
Printed and Published by Swami Muktidananda, on behalf of Sri Ramakrishna Ashrama, Yadavagiri, Mysore and Printed at Mayur Graphics, No.C-12, Industrial Estate, Rajaji Nagar, Bangalore -560 010 and published at Sri Ramakrishna Ashrama, Yadavagiri, Mysore -570 020

ಶ್ರೀ

DOMESTIC AND INTERNATIONAL TOURS

Orchid



7/11 ದಿನಗಳ ಸಿಂಗಾಪುರ-ಮಲೇಶಿಯ-ಥೈಲ್ಯಾಂಡ್ ಪ್ರವಾಸ

ಸಿಂಗಾಪುರ : ಸಿಟಿ ಟೂರ್, ಸೆಂಟೋಸ ಐಲ್ಯಾಂಡ್ ಜೊತೆಗೆ ಸಿ ಅಕ್ವೇರಿಯಂ, ವಿಂಗ್ಸ್ ಆಫ್ ಟೈಮ್, ಯುನಿವರ್ಸಲ್ ಸ್ಟುಡಿಯೋ,

ಮಲೇಶಿಯ : ಕೌಲಾಲಂಪುರ್ ಸಿಟಿ ಟೂರ್, ಬಾಟು ಗುಹೆ, ಪುತ್ರಜಯ, ಜಂಟಿಂಗ್ ಹೈಲ್ಯಾಂಡ್, ಕೆ.ಎಲ್. ಟವರ್

ಥೈಲ್ಯಾಂಡ್ : ಪಟ್ಟಾಯ, ಕೋರಲ್ ಐಲ್ಯಾಂಡ್, ಸಫಾರಿ ವರ್ಲ್ಡ್ ಹಾಗೂ ಬ್ಯಾಂಕಾಕ್ ಸಿಟಿ ಟೂರ್, ಮರೀನಾ ಪಾರ್ಕ್, ವಾಕರ್ ಸ್ಟ್ರೀಟ್



20 ದಿನಗಳ ಆಸ್ಟ್ರೇಲಿಯಾ, ನ್ಯೂಜಿಲ್ಯಾಂಡ್ ಪ್ರವಾಸ

ಮೆಲ್ಬೋರ್ನ್, ಕೇನ್ಸ್, ಗೋಲ್ಡ್ ಕೋಸ್ಟ್ ಹಾಗೂ ಸಿಡ್ನಿ

ಕ್ರೈಸ್ಟ್‌ಚರ್ಚ್, ಕ್ವೀನ್ಸ್‌ಟೌನ್, ವನಾಕ, ಆಕ್ಲೆಂಡ್ ಹಾಗೂ ರೋಟೋರುವಾ



18 ದಿನಗಳ ಗ್ರ್ಯಾಂಡ್ ಯು.ಕೆ. ಯುರೋಪ್ - 10 ದೇಶಗಳು

ಯುಕೆ, ನೆದರ್‌ಲ್ಯಾಂಡ್ಸ್, ಬೆಲ್ಜಿಯಂ, ಫ್ರಾನ್ಸ್, ಜರ್ಮನಿ,

ಸ್ವಿಟ್ಜರ್‌ಲ್ಯಾಂಡ್, ಲೆಚಿನ್‌ಸ್ಟೈನ್, ಆಸ್ಟ್ರಿಯಾ, ಇಟಲಿ, ವ್ಯಾಟಿಕನ್



6 ದಿನಗಳ ಬಾಲಿ-ಇಂಡೊನೇಷಿಯ ಪ್ರವಾಸ

ಲ್ಯಾಂಡ್ ಆಫ್ ಗಾಡ್, ಲ್ಯಾಂಡ್ ಆಫ್ ಹೆರಿಟೇಜ್, ಮೌಂಟೈನ್ಸ್, ಬೀಚಸ್ ಮತ್ತು ಫಾರೆಸ್ಟ್ಸ್ ಜೊತೆಗೆ ಗರುಡ ವಿಷ್ಣು ಟೆಂಪಲ್



18 ದಿನಗಳ ಅಮೇರಿಕಾ ಹಾಗೂ ಬಹಮಾಸ್ ಕ್ರೂಸ್ ಪ್ರವಾಸ

ಪ್ರವಾಸ ಸ್ಥಳ : ನ್ಯೂಯಾರ್ಕ್, ವಾಷಿಂಗ್ಟನ್, ನಯಾಗರ ಫಾಲ್ಸ್, ಲಾಸ್‌ವೇಗಾಸ್, ಲಾಸ್ ಎಂಜಲೀಸ್ ಸ್ಯಾನ್‌ಫ್ರಾನ್ಸಿಸ್ಕೋ, ಆರ್‌ಲ್ಯಾಂಡೊ, ಬಹಮಾಸ್‌ಕ್ರೂಸ್



7 ದಿನಗಳ ವಿಯೆಟ್ನಾಂ ಪ್ರವಾಸ

8 ದಿನಗಳ ಕಾಂಬೋಡಿಯಾ ಥೈಲ್ಯಾಂಡ್ ಪ್ರವಾಸ

11 ದಿನಗಳ ಕಾಂಬೋಡಿಯಾ ವಿಯೆಟ್ನಾಂ ಪ್ರವಾಸ

6 ದಿನಗಳ ಶ್ರೀಲಂಕಾ ಪ್ರವಾಸ (ರಾಮಾಯಣ ದರ್ಶನ)



9 ದಿನಗಳ ಕಾಶಿ, ಗಯಾ, ಅಲಹಾಬಾದ್, ಅಯೋಧ್ಯೆ, ನೈಮಿಷಾರಣ್ಯ ಹಾಗೂ ಚಿತ್ರಕೂಟ ಪ್ರವಾಸ

ವಿವರಗಳಿಗೆ ಹಾಗೂ ಬುಕ್ಕಿಂಗ್‌ಗೆ ಸಂಪರ್ಕಿಸಿ

ಆರ್ಕಿಡ್ ಟ್ರಾವಲ್ ಅಂಡ್ ಟೂರ್ಸ್

ಬೆಂಗಳೂರು

9880079588 / 9900080793
080 - 26617178 / 26625556

ಮೈಸೂರು

9900080796 / 9880079644

VIVEKA PRABHA (KANNADA MONTHLY)
December 2023, Vol.24, No.12, No. of Pages: 44

Registered with Register of News Papers of india
Under 72356/2000. Postal Regn. No. KA/SK/MYS/480/
2021-2023. LICENCED TO POST W.P.P. AT YADAVAGIRI
MYSORE 570 020. VIDE LICENCE NO. SK/WPP/MYS/155/2021-2023
Date of Posting : 28th & 30th of Every Month

ರಾಮಕೃಷ್ಣ ವಿವೇಕಾನಂದ ಭಾವ ಪ್ರಚಾರ ಪರಿಷತ್, ಕರ್ನಾಟಕ

(ಮಾರ್ಗದರ್ಶನ ರಾಮಕೃಷ್ಣ ಮಠ ಮತ್ತು ಮಿಷನ್, ಕೋಲ್ಕತ್ತಾ)

9ನೇ ವಾರ್ಷಿಕ ಸಮ್ಮೇಳನ – 2023

ಆತ್ಮೀಯ ಬಂಧುಗಳೇ,

ದಿವ್ಯತ್ರಯರ ಸಂದೇಶಗಳನ್ನು ಮತ್ತು ಭಾರತೀಯ ಸನಾತನ ಪರಂಪರೆಗಳನ್ನು ಪ್ರತಿಪಾದಿಸಿದ ಮಹಾನ್ ಮೌಲ್ಯಗಳನ್ನು ಸಮಾಜದ ಜನತೆಗೆ ಮುಟ್ಟಿಸುವ ಸದುದ್ದೇಶದಿಂದ ರಾಷ್ಟ್ರಾದ್ಯಂತ ಕಾರ್ಯನಿರ್ವಹಿಸುತ್ತಿರುವ ಸ್ವತಂತ್ರ ಆಶ್ರಮಗಳ ಮತ್ತು ಭಕ್ತಜನರ ಸೇವಾ ಸತ್ಸಂಗ ಕೇಂದ್ರಗಳಿಗೆ ಅರ್ಥಪೂರ್ಣ ಸ್ವರೂಪ ನೀಡಲು ರಾಮಕೃಷ್ಣ ಮಹಾಸಂಘವು **'ರಾಮಕೃಷ್ಣ ವಿವೇಕಾನಂದ ಭಾವ ಪ್ರಚಾರ ಪರಿಷತ್'** ಎಂಬ ಸಂಘಟನೆಯನ್ನು ರೂಪಿಸಿದ್ದು, ಇದು ಕಳೆದ ಹಲವು ದಶಕಗಳಿಂದ ಕಾರ್ಯ ನಿರ್ವಹಿಸುತ್ತ ಬಂದಿದೆ.

ಪರಿಷತ್ತಿನ 9ನೇ ವಾರ್ಷಿಕ ಸಮಾವೇಶವನ್ನು 2024ರ ಜನವರಿ 5, 6 ಮತ್ತು 7ನೇ ದಿನಾಂಕಗಳಂದು (ಶುಕ್ರವಾರ, ಶನಿವಾರ ಮತ್ತು ಭಾನುವಾರ) ಮೈಸೂರಿನ ಕುವೆಂಪುನಗರದಲ್ಲಿರುವ ಶ್ರೀಮತಿ ಜಯಮ್ಮ ಗೋವಿಂದೇಗೌಡ ಕಲ್ಯಾಣಮಂಟಪದ ಸಭಾಂಗಣದಲ್ಲಿ ಆಯೋಜಿಸಲಾಗಿದೆ. ಈ ಸಮಾವೇಶದಲ್ಲಿ ಭಾರತದೆಲ್ಲೆಡೆಯಿಂದ ರಾಮಕೃಷ್ಣ ಪರಂಪರೆಯ ಯತಿ ವರ್ಯರು, ಮಾತಾಜಿಯವರು, ಖ್ಯಾತ ಚಿಂತಕರು ಭಾಗವಹಿಸುತ್ತಿದ್ದಾರೆ. ತಾವೂ ತಮ್ಮ ಬಂಧು-ಮಿತ್ರರೂ ಈ ಸಮಾವೇಶ ದಲ್ಲಿ ಪಾಲ್ಗೊಂಡು, ಅನುಭಾವಿಗಳ ಉಪದೇಶಾಮೃತವನ್ನು ಸವಿದು ಕೃತಾರ್ಥರಾಗಬೇಕು ಹಾಗೂ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ನಮ್ಮ ನಮ್ರ ವಿನಂತಿ.

ಭಕ್ತ ಪ್ರತಿನಿಧಿಗಳ ಶುಲ್ಕವನ್ನು ಹಾಗೂ ಕಾರ್ಯಕ್ರಮಕ್ಕೆ ಕಾಣಿಕೆ ನೀಡುವವರು ಆನ್‌ಲೈನ್/ ಚೆಕ್/ ಡಿ.ಡಿ./ ನೆಫ್ಟ್ ಮೂಲಕ **ಶ್ರೀ ರಾಮಕೃಷ್ಣ ಸೇವಾ ಸಂಘ(ರಿ), ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ, ಕುವೆಂಪುನಗರ ಶಾಖೆ, ಮೈಸೂರು, ಉಳಿತಾಯ ಖಾತೆ ಸಂಖ್ಯೆ: 520141000789174, IFSC Code: UBIN0905844 ನೀಡಬಹುದು.** ಕಾಣಿಕೆಗಳಿಗೆ ತೆರಿಗೆ ಇಲಾಖೆ 80G ಅನ್ವಯ ತೆರಿಗೆ ವಿನಾಯಿತಿ ಇರುತ್ತದೆ.

ಕಾರ್ಯಕ್ರಮಕ್ಕೆ ಸಂಬಂಧಪಟ್ಟ ಯಾವುದೇ ವಿವರಗಳಿಗೆ ಸಂಪರ್ಕಿಸಿ:

ಆಯೋಜಕರು : ಶ್ರೀರಾಮಕೃಷ್ಣ ಸೇವಾ ಸಂಘ (ರಿ), ಮೈಸೂರು

ಸಹ ಸಂಚಾಲಕರು :		
ಎಂ. ಪಾಪೇಗೌಡ	ಅಧ್ಯಕ್ಷರು ಶ್ರೀರಾಮಕೃಷ್ಣ ಸೇವಾ ಸಂಘ (ರಿ),	ಮೊ: 8884454478
ಎಂ. ದೊರೆರಾಜು	ಕಾರ್ಯದರ್ಶಿ ಶ್ರೀರಾಮಕೃಷ್ಣ ಸೇವಾ ಸಂಘ	ಮೊ: 9480379952

ಪ್ರತಿನಿಧಿಗಳ ಶುಲ್ಕ : ವಸತಿ ಸಹಿತ ರೂ. 2000/-
ಪ್ರತಿನಿಧಿಗಳ ಶುಲ್ಕ : ವಸತಿ ರಹಿತ ರೂ. 1000/-

ಸ್ವಾಮಿ ಪ್ರಕಾಶಾನಂದ
ಸಂಚಾಲಕರು
ಕರ್ನಾಟಕ ಭಾವಪ್ರಚಾರ ಪರಿಷತ್

ನೋಂದಾಯಿಸಲು ಈ ಲಿಂಕ್ ಬಳಸಿ : www.rvbpk.in

Printed at Mayur Graphics, Bangalore